ಡಾ ಸಿದ್ಧಯ್ಯ ಪುರಾಣಿಕರು ಸ್ವಾತಂತ್ರ್ಯ ಪೂರ್ವದಲ್ಲಿ ಹೈದ್ರಾಬಾದ ಕರ್ನಾಟಕ ಅಂದರೆ ಈಗಿನ ಕಲ್ಯಾಣ ಕರ್ನಾಟಕದ ಪುಟ್ಟ ಹಳ್ಳಿಯ ಸಾಮಾನ್ಯ ಕುಟುಂಬದಲ್ಲಿ ಜನಿಸಿ, ವೃತ್ತಿಯಿಂದ ಉನ್ನತ ಅಧಿಕಾರಿಯಾಗಿ, ಪ್ರವೃತ್ತಿಯಿಂದ ಸಾಹಿತಿಗಳಾಗಿ ಪ್ರಸಿದ್ಧರಾಗಿದ್ದರು. ತಹಸೀಲ್ದಾರರಾಗಿ ಹುದ್ದೆಗೆ ಸೇರಿದ ಇವರು ಡೆಪ್ಯುಟಿ ಕಮಿಷನರ್ ಆಗಿ ನಿವೃತ್ತರಾಗಿದ್ದರು. ಸರಳ, ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದ ಇವರು ಅಧಿಕಾರದ ಸದುಪಯೋಗ ಮಾಡಿಕೊಂಡು ಬಡವರಿಗೆ, ಜನಸಾಮಾನ್ಯರಿಗೆ ಸಹಾಯ ಮಾಡುತ್ತಿದ್ದರು.

೧೨ನೆಯ ಶತಮಾನದ ಬಸವಣ್ಣನವರ ಪ್ರಭಾವ, ತಂದೆಯವರ ಹಾಗೂ ಹರ್ಡೇಕರ ಮಂಜಪ್ಪನವರ ಪ್ರಭಾವ ಇವರ ಮೇಲಾಗಿತ್ತು. ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. 'ಕಾವ್ಯಾನಂದ' ಕಾವ್ಯನಾಮದಿಂದ ಕವನಗಳನ್ನು, "ಸ್ವತಂತ್ರಧೀರ ಸಿದ್ಧೇಶ್ವರಾ", ಅಂಕಿತದಲ್ಲಿ ವಚನಗಳನ್ನು ಹಾಗೂ 'ಮರುಳಸಿದ್ಧ' ಅಂಕಿತದಲ್ಲಿ 'ಚೌಪದಿ'ಗಳನ್ನು ರಚಿಸಿದ್ದರು. ನವೋದಯ ಕಾವ್ಯದ ಲಕ್ಷಣಗಳನ್ನು ಇವರ ಕೃತಿಗಳಲ್ಲಿ ಗುರುತಿಸಬಹುದು. ಕಾವ್ಯ, ವಚನ, ನಾಟಕ, ಕಥೆ, ಕಾದಂಬರಿ, ಮಕ್ಕಳಸಾಹಿತ್ಯ, ಜೀವನ ಚರಿತ್ರೆ, ಸಂಶೋಧನೆ ಹಾಗೂ ಸಂಪಾದನೆ ಈ ರೀತಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿಗೈದು ೫೦ಕ್ಕೂ ಮೇಲ್ಪಟ್ಟು ಕೃತಿಗಳನ್ನು ರಚಿಸಿ ಕನ್ನಡದ ಕಹಳೆಯನ್ನು ಮೊಳಗಿಸಿದ್ದರು.

ಇವರು ೧೯೮೫ರಲ್ಲಿ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ೧೯೮೭ರಲ್ಲಿ ಕಲಬುರಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹಲವಾರು ಅಭಿನಂದನ ಗ್ರಂಥಗಳನ್ನು ಇವರ ಸಾಹಿತ್ಯಾಭಿಮಾನಿಗಳು ಹೊರತಂದರು. 'ವಚನಬ್ರಹ್ಮವೆಂಬ' ಬಿರುದನ್ನು ಕೊಟ್ಟಿದ್ದರು. ಬಸವ ಸಮಿತಿಯ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದು, ಉಪಾಧ್ಯಕ್ಷರಾಗಿ, ಹಲವಾರು ವರ್ಷ ಬಸವಪಥ ಬಸವ ಜರ್ನಲ್‌ಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಇತ್ತೀಚಿಗೆ ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಾಬ್ದಿಯ (೧೯೧೮-೨೦೧೮)ಯ ಸವಿನೆನಪಿಗಾಗಿ "ಏನಾದರೂ ಆಗು ಮೊದಲು ಮಾನವನಾಗು" ಎಂಬ ಸಂದೇಶ ಹಾಗೂ ಅವರ ಭಾವಚಿತ್ರವಿರುವ ಪೋಸ್ಟ ಕವರನ್ನು ಬಿಡುಗಡೆ ಮಾಡಿರುವರು. ಅದೇ ರೀತಿ ಅವರ ಕವನ ಹಾಗೂ ವಚನಗಳ ಗೀತ ಗುಚ್ಛ ಧ್ವನಿಸುರಳಿಯನ್ನು ಜನ್ಮಶತಾಬ್ದಿಯ ಸ್ಮರಣೆಗಾಗಿ ಬಿಡುಗಡೆ ಮಾಡಿರುವರು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜನ್ಮ ಶತಮಾನೋತ್ಸವದ ಅಂಗವಾಗಿ ವಿಚಾರ ಸಂಕಿರಣ ಏರ್ಪಡಿಸಿದ್ದರು. ಡಾ. ಸಿದ್ಧಯ್ಯ ಪುರಾಣಿಕರ ಹೆಸರಿನಲ್ಲಿ 'ಕಾವ್ಯಾನಂದ' ಪ್ರಶಸ್ತಿಯನ್ನು ಪ್ರತಿವರ್ಷ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟನಿಂದ ಕೊಡುತ್ತಿರುವರು. ಡಾ. ಸಿದ್ಧಯ್ಯ ಪುರಾಣಿಕರು ೧೯೯೪ ಸಪ್ಟೆಂಬರ ೪ರಂದು ಕುಟುಂಬವರ್ಗವನ್ನು, ಸಾಹಿತ್ಯಾಭಿಮಾನಿಗಳನ್ನು ಅಗಲಿ ವಿಧಿವಶರಾದರು. ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವುಂಟಾಯಿತು. ಅವರು ಕಣ್ಮರೆಯಾದರೂ ಅವರ ಕೃತಿಗಳು ಶಾಶ್ವತವಾಗಿದ್ದು ಇಂದಿಗೂ ಯುವ ಸಾಹಿತಿಗಳಿಗೆ, ಕವಿಗಳಿಗೆ ಪ್ರೇರಣೆಯನ್ನೊದಗಿಸುವವು.

**ಲೇಖಕಿ ಶ್ರೀಮತಿ ಡಾ. ನಾಗಾಬಾಯಿ. ಬಿ. ಬುಳ್ಳಾ** ಸಾಹಿತಿಯಾಗಿ ಪ್ರಸಿದ್ಧರು ಮತ್ತು ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ISBN 978-93-91017-11-8

Siddhaiah Puranik (Kannada)

Rs. 50


ಸಿದ್ಧಯ್ಯ ಪುರಾಣಿಕ

ನಾಗಾಬಾಯಿ. ಬಿ. ಬುಳ್ಳಾ

ಭಾರತೀಯ ಸಾಹಿತ್ಯ ನಿರ್ಮಾಪಕರು

# ಸಿದ್ಧಯ್ಯ ಪುರಾಣಿಕ

ನಾಗಾಬಾಯಿ. ಬಿ. ಬುಳ್ಳಾ



ಒಳಬದಿಯ ರಕ್ಷಾಪುಟಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ರಾಜ ಶುದ್ಧೋದನನಿಗೆ ಮೂವರು ಕಾಲಜ್ಞಾನಿಗಳು ರಾಣಿ ಮಾಯೆಯ ಕನಸಿನ ಅರ್ಥವನ್ನು ವಿವರಿಸುವ ದೃಶ್ಯವಿದೆ. ಅವರ ಕೆಳಗೆ ಕುಳಿತಿರುವ ಲಿಪಿಕಾರನು ಅರ್ಥವಿವರಣೆಯನ್ನು ದಾಖಲಿಸುತ್ತಿದ್ದಾನೆ. ಪ್ರಾಯಶಃ ಇದು ಭಾರತದಲ್ಲಿ ಲಭ್ಯವಿರುವ ಮೊಟ್ಟಮೊದಲ ಲೇಖನ ಕಲೆಯ ಚಿತ್ರಾತ್ಮಕ ದಾಖಲೆ.

ದೊರಕಿರುವ ಸ್ಥಳ : ನಾಗಾರ್ಜುನಕೊಂಡ, ಕ್ರಿ.ಶ. ೨ನೇ ಶತಮಾನ.

ಕೃಪೆ : ರಾಷ್ಟ್ರೀಯ ವಸ್ತುಸಂಗ್ರಹಾಲಯ, ನವದೆಹಲಿ.

ಭಾರತೀಯ ಸಾಹಿತ್ಯ ನಿರ್ಮಾಪಕರು

# ಸಿದ್ಧಯ್ಯ ಪುರಾಣಿಕ

ನಾಗಾಬಾಯಿ ಬಿ. ಬುಳ್ಳಾ

ಸಾಹಿತ್ಯ ಅಕಾದೆಮಿ

**Siddhaiah Puranik** : A monograph in Kannada by Nagabai B.Bulla, Sahitya Akademi, 2021, Rs. 50

ಕೃತಿ ಸ್ವಾಮ್ಯ : © ಸಾಹಿತ್ಯ ಅಕಾದೆಮಿ

ಪ್ರಕಾರ : ಏಕ ವಿಷಯಕ ಪ್ರಬಂಧ

ಪ್ರಕಟಣೆ : ಸಾಹಿತ್ಯ ಅಕಾದೆಮಿ

ಪ್ರಥಮ ಮುದ್ರಣ : ೨೦೨೧

ಲೇಖಕರು : ನಾಗಾಬಾಯಿ. ಬಿ. ಬುಳ್ಳಾ

ISBN: 978-93-91017-11-8

ಬೆಲೆ: ಐವತ್ತು ರೂಪಾಯಿ

All rights reserved. No part of this book may be reproduced or utilized in any form or by any means, electronic or mechanical including photocopying, recording or by any information storage and retrival system, without permission in writing from Sahitya Akademi.

**ಸಾಹಿತ್ಯ ಅಕಾದೆಮಿ**

**ಮುಖ್ಯ ಕಛೇರಿ:** ರವೀಂದ್ರ ಭವನ, ೩೫, ಫಿರೋಜಶಾಹ ರಸ್ತೆ, ನವದೆಹಲಿ ೧೧೦ ೦೦೧
secretary@sahitya-akademi.gov.in, 011-23386626/27/28

**ಮಾರಾಟ ವಿಭಾಗ:** 'ಸ್ವಾತಿ', ಮಂದಿರ ಮಾರ್ಗ, ನವದೆಹಲಿ ೧೧೦ ೦೦೧
sales@sahitya-akademi.gov.in, 011-23745297, 23364204

**ಕೊಲ್ಕತ್ತ:** ೪, ಡಿ.ಎಲ್.ಖಾನ್ ರಸ್ತೆ, ಕೋಲ್ಕತ್ತ ೭೦೦ ೦೨೫
rs.rok@sahitya-akademi.gov.in, 033-24191683/ 24191706

**ಚೆನ್ನೈ:** ೪೪೩, ಗುಣ ಕಾಂಪ್ಲೆಕ್ಸ್, ಅಣ್ಣಾಸಾಲೈ, ತೇನಾಂಪೇಟ್ಟೈ, ಚೆನ್ನೈ ೬೦೦ ೦೧೮
chennaioffice@sahitya-akademi.gov.in, 044-24311741

**ಮುಂಬೈ:** ೧೭೨, ಮುಂಬೈ, ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬೈ ೪೦೦ ೦೧೪
rs.rom@sahitya-akademi.gov.in, 022-224135744/ 24131948

**ಬೆಂಗಳೂರು:** ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು ೫೬೦ ೦೦೧
rs.rob@sahitya-akademi.gov.in, 080-22245152, 22130870

ಅಕ್ಷರ ಜೋಡಣೆ : ನೀತು ಗ್ರಾಫಿಕ್ಸ್, ಬೆಂಗಳೂರು |ಮುದ್ರಣ: ಕೃತ್ತಿಕಾ ಪ್ರಿಂಟರ್ಸ್, ಬೆಂಗಳೂರು

Website:http://www.sahitya-akademi.gov.in

# ಅನುಕ್ರಮಣಿಕೆ


| | | |
|---|---|---|
| | ಲೇಖಕರ ನುಡಿ | ೬ |
| | ಪ್ರಸ್ತಾವನೆ | ೭ |
| ೧) | ಕಲ್ಯಾಣ ಕರ್ನಾಟಕ (ಹೈ.ಕ) ಪರಿಸರ | ೧೧ |
| ೨) | ಜನನ ಮತ್ತು ಬಾಲ್ಯ | ೧೩ |
| ೩) | ವಿದ್ಯಾಭ್ಯಾಸ | ೧೭ |
| ೪) | ಸರ್ಕಾರಿ ಸೇವೆ, ಸಾಹಿತ್ಯಿಕ ಹಾಗೂ ಸಾಮಾಜಿಕ ಸೇವೆ | ೨೬ |
| ೫) | ಕೌಟುಂಬಿಕ ಬದುಕು | ೪೬ |
| ೬) | ಸಾಹಿತ್ಯಿಕ ಪರಿಸರ | ೪೮ |
| ೭) | ಪ್ರಭಾವ ಪ್ರೇರಣೆ | ೫೦ |
| ೮) | ಪ್ರಶಸ್ತಿ, ಸನ್ಮಾನ ಹಾಗೂ ಅಭಿನಂದನ ಗ್ರಂಥಗಳು | ೫೩ |
| ೯) | ಸಾಹಿತ್ಯಿಕ ಸಾಧನೆ | ೫೫ |
| ೧೦) | ಸಮಾರೋಪ | ೭೬ |


## ಅನುಬಂಧ


| | | |
|---|---|---|
| ೧) | ಜೀವನ ವಿವರ | ೭೮ |
| ೨) | ಡಾ.ಸಿದ್ಧಯ್ಯ ಪುರಾಣಿಕರ ವಂಶವೃಕ್ಷ | ೮೦ |
| ೩) | ಡಾ.ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ | ೮೧ |
| ೪) | ಡಾ.ಸಿದ್ಧಯ್ಯ ಪುರಾಣಿಕರ ಮತ್ತು ಅವರ ಕೃತಿಗಳ ಬಗ್ಗೆ ಬಂದಿರುವ ಗ್ರಂಥಗಳು | ೮೬ |
| ೫) | ಬಿಲ್ವಾರ ಪ್ರಶಸ್ತಿ ಪತ್ರ | ೮೮ |

# ಲೇಖಕರ ನುಡಿ

'ಡಾ.ಸಿದ್ಧಯ್ಯ ಪುರಾಣಿಕರ ಕೃತಿಗಳು' ಎಂಬ ವಿಷಯದ ಮೇಲೆ ನಾನು ೧೯೯೩ರಲ್ಲಿ ಸಂಶೋಧನಾಧ್ಯಯನ ಮಾಡಿದ್ದೆನು. ಆ ತರುವಾಯ ೧೯೯೯ರಲ್ಲಿ ಸಂಶೋಧನಾ ಪ್ರಬಂಧ ಪ್ರಕಟವಾಯಿತು. ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಡಾ.ಸಿದ್ಧಯ್ಯ ಪುರಾಣಿಕರ ಕುರಿತು ಜೀವನ ಚರಿತ್ರೆ ಬರೆದು ಕೊಡಲು ತಿಳಿಸಿದಾಗ ಅತ್ಯಂತ ಸಂತೋಷ ವಾಯಿತು. ಡಾ.ಪುರಾಣಿಕರ ಜೀವನ ಮತ್ತು ಸಾಹಿತ್ಯವನ್ನು ಮತ್ತೊಮ್ಮೆ ಓದುವ ಅವಕಾಶ ದೊರಕಿತು. ಡಾ.ಪುರಾಣಿಕರು ವೃತ್ತಿಯಲ್ಲಿ ಅಧಿಕಾರಿಗಳಾಗಿದ್ದು ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದವರು. ಸವ್ಯಸಾಚಿಗಳು ಎರಡರಲ್ಲೂ ಪರಿಣತಿ ಪಡೆದವರು. ಇಂಥವರ ಜೀವನ ಚರಿತ್ರೆ ಸಾಹಿತಿಗಳಿಗೆ ಅಧಿಕಾರಿಗಳಿಗೆ ಪ್ರೇರಣೆಯನ್ನೊದಗಿಸುವದು.

ಇಂಥ ಅವಕಾಶವನ್ನೊದಗಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ.ಚಂದ್ರಶೇಖರ ಕಂಬಾರ ಅವರಿಗೂ, ಸಂಚಾಲಕರಾದ ಡಾ.ಸಿದ್ಧಲಿಂಗಯ್ಯನವರಿಗೂ, ಕಾರ್ಯದರ್ಶಿಗಳಾದ ಶ್ರೀ.ಎಸ್.ಪಿ.ಮಹಾಲಿಂಗೇಶ್ವರ ಅವರಿಗೂ ಅನಂತ ಧನ್ಯವಾದಗಳು.

ಅಕ್ಷರ ದೋಷಗಳಿಲ್ಲದೆ ಬೆರಳಚ್ಚು ಮಾಡಿದ ಶ್ರೀ ವೀರನಾಥ.ಪಿ.ಕೋಠಾರಿಯವರಿಗೆ, ಅಂದವಾಗಿ ಮುದ್ರಿಸಿದ ಕೃತ್ತಿಕಾ ಪ್ರಿಂಟರ್ಸ್ ಇವರಿಗೆ ಅನಂತ ಧನ್ಯವಾದಗಳು.

**ಡಾ.ನಾಗಾಬಾಯಿ.ಬಿ.ಬುಳ್ಳಾ**
ಮಾಜಿ ಸದಸ್ಯರು ಕರ್ನಾಟಕ ಲೋಕ
ಸೇವಾ ಆಯೋಗ ಬೆಂಗಳೂರು

# ಪ್ರಸ್ತಾವನೆ

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಯೂ ಒಂದಾಗಿದೆ. ಇದು ಉಳಿದ ಸಾಹಿತ್ಯ ಪ್ರಕಾರಗಳಂತೆ ಪಾಶ್ಚಾತ್ಯ ಸಾಹಿತ್ಯದ ಕೊಡುಗೆ ಎಂದೇ ಹೇಳಬಹುದಾಗಿದೆ. ಕ್ರಿ.ಶ.೧೬೮೩ರಲ್ಲಿ 'ಡ್ರೈಡನ್' ಎಂಬುವನು ಜೀವನಚರಿತ್ರೆ ಎಂಬ ಪದವನ್ನು ಬಳಸಿ "ನಿರ್ದಿಷ್ಟ ವ್ಯಕ್ತಿಗಳ ಬದುಕಿನ ಚರಿತ್ರೆಯೇ ಜೀವನ ಚರಿತ್ರೆ" ಎಂದು ವ್ಯಾಖ್ಯಾನಿಸಿದ್ದಾನೆ (ಶಾಸ್ತ್ರಿ ಪಿ.ವಿ. ಕಿಬ್ಬಳ್ಳಿ: ಸಾಹಿತ್ಯದ ಪ್ರಕಾರಗಳು ಪು.೧೧). ಜೀವನಚರಿತ್ರೆಯ ಮೂಲವನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಒಬ್ಬ ವ್ಯಕ್ತಿಯ ಹೊಗಳಿಕೆ, ಜೀವನ, ಸಾಧನೆ ಇವುಗಳ ಸಂಕ್ಷಿಪ್ತ ವರ್ಣನೆ ಶಾಸನಗಳಲ್ಲಿದೆ. ಹಳಗನ್ನಡ ಕಾವ್ಯಗಳಲ್ಲಿ ರಾಮಾಯಣ ಮಹಾಭಾರತದ ನಾಯಕರ ಚಿತ್ರಣವಿದೆ. ನಡುಗನ್ನಡ ಕಾವ್ಯಗಳಲ್ಲಿ ಶರಣರು ಕಾವ್ಯ ನಾಯಕರಾಗುತ್ತಾರೆ. ತಾವು ಮೆಚ್ಚಿಕೊಂಡ ಮಹಾಪುರುಷನ ಅಥವಾ ವ್ಯಕ್ತಿಯ ಜೀವನ ಚರಿತ್ರೆ ಬರೆದಿರುವುದನ್ನು ಕಾಣಬಹುದಾಗಿದೆ. ಆದರೆ ಮೇಲಿನ ಎಲ್ಲ ಸಂದರ್ಭಗಳಲ್ಲಿ ವಾಸ್ತವಿಕಾಂಶಕ್ಕಿಂತ ಕಾಲ್ಪನಿಕಾಂಶಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದನ್ನು ಗಮನಿಸಬಹುದು.

ಪುರಾಣಗಳಲ್ಲಿ ಚಾರಿತ್ರಿಕ ವ್ಯಕ್ತಿಗಳನ್ನು ದೇವರನ್ನಾಗಿಸುವ ಕಾರ್ಯ ನಡೆಯುತ್ತದೆ. ಪುರಾಣಕಾರರು ಚರಿತ್ರೆಗಿಂತ ಚಾರಿತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡುವರು. ಚರಿತ್ರೆ ಅಥವಾ ಇತಿಹಾಸ ಒಂದು ಜನಾಂಗದ ಅಥವಾ ಒಂದು ಕಾಲದ ಘಟನಾವಳಿಯ ವ್ಯಕ್ತಿಯ ಹೊರವಲಯದ ವಸ್ತುಸತ್ಯ ವರದಿಯಾದರೆ, ಜೀವನ ಚರಿತ್ರೆ ಒಬ್ಬ ವ್ಯಕ್ತಿಯ ಆಂತರಿಕ ಹಾಗೂ ಬಾಹ್ಯ ಜೀವನ ಎರಡನ್ನು ಚಿತ್ರಿಸುತ್ತದೆ. ಜೀವನ ಚರಿತ್ರೆಯಲ್ಲಿ ಇತಿಹಾಸ, ವ್ಯಕ್ತಿ ಹಾಗೂ ಸಾಹಿತ್ಯ ಮೂರೂ ಕೂಡಿಕೊಂಡಿರುತ್ತವೆ.

ಜೀವನ ಚರಿತ್ರೆ "ವ್ಯಕ್ತಿಯ ಜೀವನದಲ್ಲಿ ನಡೆದ ಘಟನೆಗಳ, ಸಾಹಸಗಳ ವಾಸ್ತವತೆಯ ಪ್ರತಿಪಾದನೆಯಾಗಿರಬೇಕು. ಕಾವ್ಯಶೈಲಿಯ ಸೊಗಸಿದ್ದು ರಸವತ್ತಾಗಿದ್ದರೆ ಇನ್ನೂ ಒಳ್ಳೆಯದು" ಎಂದು (ಕನ್ನಡ ವಿಶ್ವಕೋಶ, ಪು.೭೪)ಹೇಳಲಾಗಿದೆ, ಜೀವನ ಚರಿತ್ರೆಗಳ ಅವಶ್ಯಕತೆಯಿದೆಯೇ? ಇವು ಹುಟ್ಟಿಕೊಳ್ಳಲು ಕಾರಣಗಳೇನೆಂದು ನೋಡಿದಾಗ ಮೊದ ಮೊದಲು ಆದರ್ಶವ್ಯಕ್ತಿಗಳನ್ನು ಆರಾಧಿಸುವುದಕ್ಕಾಗಿ ರಚಿತವಾದವು. ನಂತರ, ವ್ಯಕ್ತಿತ್ವ ನಿರ್ಮಾಣದತ್ತ ಹೊರಳಿ, ಮನಸ್ಸಿನ ವಿಶ್ಲೇಷಣೆಯ ಕಡೆಗೆ ಆಸಕ್ತರಾಗತೊಡಗಿದರು. ಯಾರು ನಿರ್ಲಿಪ್ತರಾಗಿ ಬೇರೆಯವರ ಸೇವೆಗೆ ತಮ್ಮ ಬದುಕನ್ನು ಸವೆಸುತ್ತಾರೋ ಅವರ ಬದುಕನ್ನು ನೆನೆಸಿಕೊಳ್ಳಲು ಜೀವನ ಚರಿತ್ರೆಗಳು ಹುಟ್ಟಿಕೊಂಡವು. ಒಂದರ್ಥದಲ್ಲಿ

ಜೀವನ ಚರಿತ್ರೆ ಒಬ್ಬ ವ್ಯಕ್ತಿಯ ಬದುಕನ್ನು ಚಾರಿತ್ರಿಕ ಹಿನ್ನೆಲೆಯಲ್ಲಿಟ್ಟುಕೊಂಡು ಕಲಾತ್ಮಕವಾಗಿ ಚಿತ್ರಿಸುವುದೇ ಆಗಿದೆ.

ಜೀವನ ಚರಿತ್ರೆಗಳನ್ನು ಪೌರಾಣಿಕ, ಸಂತ, ಐತಿಹಾಸಿಕ ಹಾಗೂ ಶುದ್ಧ ಜೀವನ ಚರಿತ್ರೆಗಳೆಂದು ನಾಲ್ಕು ರೀತಿಯಲ್ಲಿ ವಿಂಗಡಿಸಬಹುದು. ಹೊಸಗನ್ನಡ ಸಾಹಿತ್ಯದಲ್ಲಿ ಸಮೃದ್ಧವಾಗಿ ಜೀವನ ಚರಿತ್ರೆಗಳು ಬಂದವು. ಅದರಲ್ಲಿ ಧಾರ್ಮಿಕ ಪುರುಷರ, ಸಮಾಜ ಸುಧಾರಕರ, ಕವಿಗಳ, ರಾಜಕಾರಣಿಗಳ ಜೀವನ ಚರಿತ್ರೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಕನ್ನಡಿಗರಲ್ಲದೇ ಭಾರತದ ಬೇರೆ ಬೇರೆ ಕಡೆಯೂ ಸಂತರ ವಿಜ್ಞಾನಿಗಳ ನಟರ ಜೀವನ ಚರಿತ್ರೆಗಳನ್ನು ಬರೆದರು. ಅನುವಾದ ಕ್ಷೇತ್ರದಿಂದಲೂ ಕೆಲವು ಜೀವನ ಚರಿತ್ರೆಗಳು ಬಂದಿವೆ.

ಜೀವನ ಚರಿತ್ರೆಕಾರ ಇದ್ದುದನ್ನು ಇದ್ದಂತೆ ಹೇಳಿದರೆ ವರದಿಯಾಗುವದು. ಕಲ್ಪನೆ ಹೆಚ್ಚಾದರೂ ತೊಂದರೆ. ಒಂದು ದೃಷ್ಟಿಯಿಂದ ಜೀವನ ಚರಿತ್ರೆ ಶಾಸ್ತ್ರವೂ ಹೌದು, ಕಲೆಯೂ ಹೌದು. ಕಟ್ಟುನಿಟ್ಟಿಗೆ, ಕ್ರಮಕ್ಕೆ, ಸತ್ಯಕ್ಕೆ, ಪ್ರಾಮಾಣಿಕತೆಗೆ ಶಾಸ್ತ್ರದ ದೃಷ್ಟಿಯಿಂದ ಹಾಗೂ ರಸಜ್ಞತೆ, ಕಲಾತ್ಮಕತೆ, ನೈಪುಣ್ಯತೆಯ ಮೆರಗನ್ನು ಅಳವಡಿಸಿ ಚರಿತ್ರೆಯನ್ನು ಬರೆದರೆ ಅದು ಸರ್ವಾದರಣೀಯ ಕೃತಿಯಾಗಿ ಸಾಹಿತ್ಯಕ್ಕೆ ಒಂದು ಕೊಡುಗೆಯಾಗುವುದು. ಆ ಹಿನ್ನೆಲೆಯಲ್ಲಿ ಡಾ.ಸಿದ್ಧಯ್ಯ ಪುರಾಣಿಕರು ದಕ್ಷ ಆಡಳಿತಗಾರರಾಗಿ, ಕನ್ನಡ ನಾಡು ನುಡಿಗಾಗಿ ಹೋರಾಡಿ, ಸಾಹಿತ್ಯ ಸೇವೆ ಸಲ್ಲಿಸಿದವರಲ್ಲಿ ಒಬ್ಬರಾಗಿದ್ದಾರೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹುಟ್ಟಿ ಕನ್ನಡ ನಾಡಿನ ಜನತೆಗೆಲ್ಲ ಶ್ರೇಷ್ಠ ಸಾಹಿತಿಯೆಂದು ಪರಿಚಿತರಾದ ಡಾ.ಸಿದ್ಧಯ್ಯ ಪುರಾಣಿಕರ ಜೀವನ ಚರಿತ್ರೆ ಇದಾಗಿದೆ.

ಹೊಸಗನ್ನಡ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಹಾಗೂ ದೇಶೀಯ ಪ್ರೇರಣೆಗಳಿಂದಾಗಿ ವೈವಿಧ್ಯಮಯವಾಗಿ ಬೆಳೆಯಿತು. ಹೊಸ ಸಾಹಿತ್ಯ ರೂಪಗಳಾದ ಭಾವಗೀತೆ, ಸಣ್ಣಕತೆ, ನಾಟಕ, ಕಾದಂಬರಿ, ಲಲಿತಪ್ರಬಂಧ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ವಚನ ಮೊದಲಾದ ಪ್ರಕಾರಗಳು ಏಕಕಾಲಕ್ಕೆ ರಚನೆಗೊಂಡವು. ಕರ್ನಾಟಕದ ಉಳಿದ ಭಾಗದಲ್ಲಿ ಆಧುನಿಕ ಸಾಹಿತ್ಯ ಬೆಳೆದು ಬಂದಂತೆ ಉತ್ತರ ಕರ್ನಾಟಕದ ಬೀದರ್, ಕಲಬುರಗಿ ಹಾಗೂ ರಾಯಚೂರುಗಳಲ್ಲಿ ಬೆಳೆದು ಬರಲಿಲ್ಲ. ಏಕೆಂದರೆ ಆಗ ಈ ಭಾಗ ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಒಳಗಾಗಿದ್ದು ಉರ್ದು ಭಾಷೆಯ ಪ್ರಭಾವ ಗಾಢವಾಗಿತ್ತು. ನೂರಾರು ವರ್ಷಗಳ ಕಾಲ ನಿಜಾಮಶಾಹಿ ಆಡಳಿತದಲ್ಲಿ ಕನ್ನಡದ ಹೆಸರೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿ, ಕನ್ನಡ ಭಾಷೆ ಸಂಪೂರ್ಣವಾಗಿ ಮೂಲೆಗುಂಪಾಗಿತ್ತು. ಇಂಥ ಪ್ರತಿಕೂಲ ಪರಿಸರದ ಮಧ್ಯದಲ್ಲಿಯೂ ಕೆಲವು ಸಾಹಿತಿಗಳು ಈ ಭಾಗದಲ್ಲಿ ಹುಟ್ಟಿ ಕನ್ನಡ ಸಾಹಿತ್ಯದ ಸಿರಿಯನ್ನು ಹೆಚ್ಚಿಸಲು ಕಾರಣರಾಗಿರುವರು. ಕನ್ನಡ ಸಾಹಿತ್ಯದ ಕಣಜವನ್ನು ಯಶಸ್ವಿಯಾಗಿ ತುಂಬಿದ ಕನ್ನಡದ ಪುನರುಜ್ಜೀವನಕ್ಕಾಗಿ ಹಗಲಿರುಳು ಶ್ರಮಿಸಿದ ಮುಂದಿನ ತಲೆಮಾರಿನ ಕವಿಗಳಿಗೆ ಪ್ರೇರಕವಾದ ಮಹನೀಯರಲ್ಲಿ



ದ್ಯಾಂಪುರದ ಚೆನ್ನಕವಿಗಳು, ಕಲ್ಲಿನಾಥ ಶಾಸ್ತ್ರಿಗಳು, ಡಿ.ಕೆ.ಭೀಮಸೇನರಾಯರು, ಮಾನ್ವಿ ನರಸಿಂಗರಾಯರು, ತವಗ ಭೀಮಸೇನರಾಯರು, ಇತಿಹಾಸತಜ್ಞ ಡಾ.ಪಾ.ಭಿ. ದೇಸಾಯಿಯವರು, ಡಾ.ಸಿದ್ಧಯ್ಯ ಪುರಾಣಿಕ, ಡಾ.ದೇವೇಂದ್ರಕುಮಾರ ಹಕಾರಿ, ಜಯತೀರ್ಥ ರಾಜಪುರೋಹಿತ, ಶಾಂತರಸ ಮೊದಲಾದವರು ಪ್ರಮುಖರಾಗಿದ್ದಾರೆ.

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಡಾ.ಸಿದ್ಧಯ್ಯ ಪುರಾಣಿಕರು ಸಾಹಿತಿಗಳೆಂದು ಪ್ರಸಿದ್ಧರಾದಂತೆ ಆಡಳಿತ ಕ್ಷೇತ್ರದಲ್ಲೂ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯೆಂದು ಖ್ಯಾತರಾಗಿದ್ದಾರೆ. ಹೀಗೆ ವೃತ್ತಿಯಲ್ಲಿ ಅಧಿಕಾರಿ ಹಾಗೂ ಪ್ರವೃತ್ತಿಯಲ್ಲಿ ಸಾಹಿತಿಗಳಾದ ಪುರಾಣಿಕರು ಎರಡನ್ನೂ ಸಮರ್ಥವಾಗಿ ನಿರ್ವಹಿಸಿ ಸವ್ಯಸಾಚಿಗಳೆನಿಸಿದ್ದಾರೆ.

ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ, ಕಾವ್ಯ ಶಾಸ್ತ್ರಗಳ ಚರ್ಚೆಯನ್ನು ಕೇಳುತ್ತಲೇ ಬೆಳೆದ ಪುರಾಣಿಕರು ಬಾಲ್ಯದಲ್ಲಿಯೇ ಕವನ ರಚನೆಗೆ ತೊಡಗಿದರು. ಅಧ್ಯಯನದ ಜೊತೆಗೆ ಸಾಹಿತ್ಯ ಸೃಷ್ಟಿ ಮುಂದುವರಿದು ನಾಟಕಗಳನ್ನು ರಚಿಸಿದರು. ನಾಟಕ ಆಡುವುದು ಹವ್ಯಾಸವಾಗಿದ್ದು, ಬೆಳವಡಿ ಮಲ್ಲಮ್ಮ, ಸ್ತ್ರೀ ಮತ್ತು ಆತ್ಮಾರ್ಪಣ ನಾಟಕಗಳು ವಿದ್ಯಾರ್ಥಿ ದೆಸೆಯಲ್ಲಿಯೇ ಬರೆದು ಆಡಿದ ನಾಟಕಗಳಾಗಿವೆ. ಅಧ್ಯಯನ ಮುಗಿಸಿ ತಹಸೀಲ್ದಾರ ಹುದ್ದೆ ದೊರಕಿದ ಮೇಲೂ ಬರೆಯುವುದನ್ನು ನಿಲ್ಲಿಸಲಿಲ್ಲ. ಅವರ ವೃತ್ತಿ ಬರವಣಿಗೆಗೆ ತೊಡಕಾಗಲಿಲ್ಲ ಬದಲಾಗಿ ಹೊಸ ಹೊಸ ಅನುಭವಗಳನ್ನು ಕೊಡುವ ಗಣಿಯಾಯಿತು. ನವೋದಯ ಕವಿ ಸಾಹಿತಿಗಳಿಂದ ಪ್ರೇರಣೆ ಪಡೆದು ಬರೆಯಲು ತೊಡಗಿದ ಪುರಾಣಿಕರ ಬಹುಮುಖ ಪ್ರತಿಭೆ ಹಲವು ಪ್ರಕಾರಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಕಾವ್ಯ, ಕಥೆ, ನಾಟಕ, ಕಾದಂಬರಿ, ವಚನ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ಸಂಪಾದಿತ, ಸಂಶೋಧನ ಕೃತಿಗಳು ಪ್ರಕಟವಾದವು.

ಡಾ.ಸಿದ್ಧಯ್ಯ ಪುರಾಣಿಕರು ಕಾವ್ಯಾನಂದವೆಂಬ ಕಾವ್ಯನಾಮದಿಂದ ಕವಿತೆಗಳನ್ನೂ, 'ಸ್ವತಂತ್ರಧೀರ ಸಿದ್ಧೇಶ್ವರಾ' ಎಂಬ ಅಂಕಿತದಿಂದ ವಚನಗಳನ್ನೂ "ಮರುಳಸಿದ್ಧ" ಅಂಕಿತದಲ್ಲಿ ಚೌಪದಿಗಳನ್ನೂ ಬರೆದು ಖ್ಯಾತರಾಗಿದ್ದಾರೆ. "ಏನಾದರೂ ಆಗು ಮೊದಲು ಮಾನವನಾಗು" ಎಂಬುದಿವರ ದಿವ್ಯ ಸಂದೇಶವಾಗಿದೆ. ನವೋದಯ ಕಾವ್ಯದ ಲಕ್ಷಣ ಗಳಾದ ಪ್ರಕೃತಿ ಪ್ರೇಮ, ದೇಶ ಪ್ರೇಮ, ನಾಡುನುಡಿ, ಪ್ರಣಯ ಹಾಗೂ ಕೌಟುಂಬಿಕ ಗೀತೆಗಳನ್ನು ಇವರ ಕವನಗಳಲ್ಲಿ ನೋಡಬಹುದಾಗಿದೆ. ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ.

ಡಾ.ಸಿದ್ಧಯ್ಯ ಪುರಾಣಿಕರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ದೊರೆತಿವೆ. ಇವರ "ವಚನೋದ್ಯಾನ" ಕೃತಿಗೆ ಭಾರತೀಯ ಭಾಷಾ ಪರಿಷತ್ತಿನ ಅತ್ಯುಚ್ಚ ಪ್ರಶಸ್ತಿಯಾದ 'ಬಿಲ್ವಾರ' ಪ್ರಶಸ್ತಿ ದೊರೆತಿದೆ. ಅದೇ ರೀತಿಯಾಗಿ ಮಕ್ಕಳ ಕವನ ಸಂಕಲನಕ್ಕೆ ಭಾರತ ಸರ್ಕಾರದ ಪುರಸ್ಕಾರ ದೊರೆತಿದೆ. ೧೯೮೦ರಲ್ಲಿ ಗುಲಬರ್ಗಾದಲ್ಲಿ ನಡೆದ ೫೦ನೆಯ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ನಂತರ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಬಹು ಭಾಷಾ ವಿಶಾರದರಾಗಿದ್ದು ಸ್ವಾತಂತ್ರ್ಯ ಪೂರ್ವದ, ರಜಾಕಾರರ ಸಂದರ್ಭದ ಅನೇಕ ಸನ್ನಿವೇಶಗಳನ್ನು ದಾಖಲಿಸುವ ಮೂಲಕ ಈ ಭಾಗದ ಚರಿತ್ರೆಯ ಮೇಲೆ ಹೊಸಬೆಳಕನ್ನು ಬೀರಿದ್ದಾರೆ. ಇವರ ಆತ್ಮಚರಿತ್ರೆ 'ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ' ಈ ನಿಟ್ಟಿನಲ್ಲಿ ಉಪಯುಕ್ತ ಕೃತಿಯಾಗಿದೆ.

**

# ೧. ಕಲ್ಯಾಣ ಕರ್ನಾಟಕ (ಹೈ.ಕ) ಪರಿಸರ

ಕರ್ನಾಟಕದ ಸಾಹಿತ್ಯ ಮತ್ತು ಸಂಸ್ಕೃತಿಗೆ ಕಲ್ಯಾಣ ಕರ್ನಾಟಕ ತನ್ನದೇ ಆದ ಕೊಡುಗೆಯನ್ನಿತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶಗಳೆಂದರೆ ಬೀದರ್, ಗುಲಬರ್ಗಾ, ರಾಯಚೂರ್, ಯಾದಗೀರ ಹಾಗೂ ಕೊಪ್ಪಳ ಜಿಲ್ಲೆಗಳಾಗಿವೆ. ಈ ಭಾಗ ನಿಜಾಮರ ಆಡಳಿತಕ್ಕೊಳಪಟ್ಟಿದ್ದು ಉರ್ದು ಭಾಷೆಯ ಪ್ರಾಬಲ್ಯಕ್ಕೊಳಗಾಗಿತ್ತು. ಆಗಸ್ಟ್ ೧೫, ೧೯೪೭ರಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರಕಿದರೆ, ಈ ಭಾಗಕ್ಕೆ ಒಂದು ವರ್ಷ ತಡವಾಗಿ ಅಂದರೆ ಸೆಪ್ಟಂಬರ ೧೭, ೧೯೪೮ರಲ್ಲಿ ದೊರಕಿತು. ಸ್ವಾತಂತ್ರ್ಯ ಸಂಗ್ರಾಮ ದೊಂದಿಗೆ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಿಮೋಚನೆ ಹಾಗೂ ಏಕೀಕರಣ ಚಳುವಳಿ ಈ ಭಾಗದ ಮುಖ್ಯ ಹೋರಾಟಗಳು. ಹೈದ್ರಾಬಾದ ಕರ್ನಾಟಕವನ್ನು ಈಗ ಕಲ್ಯಾಣ ಕರ್ನಾಟಕವೆಂದು ಕರೆಯುತ್ತಿರುವರು.

"ಕೊಪ್ಪಳ" ಅತ್ಯಂತ ಪ್ರಾಚೀನವಾದುದು. ಶಿಲಾಯುಗ ಸಂಸ್ಕೃತಿಯ ಕುರುಹುಗಳು ಇಲ್ಲಿ ಸಿಗುವವು. ಅನೇಕ ಧರ್ಮಗಳು ಇಲ್ಲಿ ಉದಯಿಸಿ ತಮ್ಮದೇ ಆದ ವೈಶಿಷ್ಟ್ಯ ಮೆರೆದುದರಿಂದ ಧರ್ಮ ಸಮನ್ವಯತೆಯನ್ನು ಕಾಣಬಹುದು. ಅಶೋಕನ ಕಾಲದ ಶಾಸನಗಳು ಈ ಭಾಗದಲ್ಲಿ ಸಿಗುತ್ತವೆ. ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಶಾತವಾಹನರು, ಕಲಚೂರಿಗಳು, ಶಿಲಾಹಾರರು, ಯಲಬುರ್ಗಿ ಸಿಂಧರು ಇಲ್ಲಿ ಆಳ್ವಿಕೆ ಮಾಡಿದ್ದರು. ಕೊಪ್ಪಳದ ಕೋಟೆ, ಶಾಸನ, ಇಟಗಿಯ ಮಹಾದೇವ ದೇವಾಲಯ ಪ್ರಸಿದ್ಧವಾದುವು. ಆಡೂರು-ರಾಜೂರಲ್ಲಿ ಸಿಂಧರು ಆಳ್ವಿಕೆ ಮಾಡಿದ್ದರು. ಶಾತವಾಹನರ ನಾಣ್ಯಗಳು ಚಿಕ್ಕಸಿಂದೋಗಿಯಲ್ಲಿ ದೊರೆತಿವೆ.

"ಬಿಳಿಯರಳೆಯಂತೆ ಗಂಗಾಜಳದಂತೆಸೆವ ಅಜಿತಸೇನ ಮುನಿಪತಿಯ ಗುಣಾವಳಿ ಯಂತೆನೆಗಳ್ದ ಕೊಪಣಾಚಳದಂತೆ" ಎಂದು ರನ್ನ ಕವಿಯು ದಾನಚಿಂತಾಮಣಿ ಅತ್ತಿಮಬ್ಬೆ ಯನ್ನು ಕೊಪ್ಪಳದ ಬೆಟ್ಟದ ಪಾವಿತ್ರ್ಯತೆಗೆ ಹೋಲಿಸಿ ಹೇಳಿದರೆ, ಚಾವುಂಡರಾಯನ ಶಾಸನದಲ್ಲಿ ಕೊಪ್ಪಳವನ್ನು ಮುಕ್ತ ಕಂಠದಿಂದ ಹೊಗಳಲಾಗಿದೆ. ೭೭೨ ಬಸದಿಗಳನ್ನು ಹೊಂದಿ ಜೈನರ ಪವಿತ್ರ ಕಾಶಿ ಎಂದು, ಸಲ್ಲೇಖನ ವ್ರತ ಕೈಕೊಳ್ಳುವ ಮುಕ್ತಿಕ್ಷೇತ್ರವಿದೆಂದು ಇದರಲ್ಲಿ ಹೇಳಲಾಗಿದೆ. ಇಲ್ಲಿ "ವರಾಂಗ ಚರಿತೆಯ" ಕರ್ತೃ ಜಟಾಸಿಂಹ ನಂದಿಯ ಪಾದಗಳು, ಹಾಗೂ ೭ನೆಯ ಶತಮಾನದ ಕುರುಹುಗಳಿವೆ.

"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಾದ" ಈ ನಾಡಿನವರು ಚದುರರು, ಅಭಿಮಾನಿಗಳು, ಸುಭಟರ್ಕಳು, ಅತ್ಯುಗ್ರರು, ಗಂಭೀರ ಚಿತ್ತರೆಂದು 'ಕವಿರಾಜ ಮಾರ್ಗ'ಕಾರ ವರ್ಣಿಸಿದ್ದಾನೆ. ಹನುಮನುದಿಸಿದ ನಾಡು, ರಾಮಾಯಣದ ಕಿಷ್ಕಿಂಧ, ಆನೆಗುಂದಿ ಅಂದು ರಾಜಧಾನಿಯೂ ಆಗಿತ್ತು, ನವ ವೃಂದಾವನ, ಪಂಪಾಸರೋವರ, ಪಂಪಾವನ, ತುಂಗಭದ್ರಾ ಆಣೆಕಟ್ಟು, ಜಯಲಕ್ಷ್ಮೀ ಗುಡಿ, ಅಶೋಕನ ಕಾಲದಲ್ಲಿ ಸುವರ್ಣಗಿರಿಯಾಗಿದ್ದ ಕನಕಗಿರಿ, ಕುಂತಲ ನಾಡೆಂದು ಹೆಸರಾದ ಕುಕನೂರು, ಐತಿಹಾಸಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಬಹು ಪುರಾತನ ಇತಿಹಾಸ ಪಡೆದರೆ, ಇಂದು ಗ್ರಾನೈಟ್‌ಗೆ ದೇಶದುದ್ದಕ್ಕೂ ಹೆಸರಾದ ಪ್ರದೇಶವಾಗಿದೆ. ಕರಕುಶಲ ಕೈಮಗ್ಗಕ್ಕೆ ಅಳವಂಡಿ ಭಾಗ್ಯನಗರ, ಕಿನ್ನಾಳ್, ಕಂಪ್ಲಿ, ಹನುಮಸಾಗರ ಪ್ರಮುಖ ಕೇಂದ್ರಗಳಾದರೆ, ಕಿನ್ನಾಳ-ಚಿತ್ರಕಲೆ ಸಾಂಪ್ರದಾಯಿಕತೆ ಉಳಿಸಿಕೊಂಡು ಖ್ಯಾತಿ ಹೊಂದಿದೆ.

ಇಂಥ ಭವ್ಯಪರಂಪರೆ ಹೊಂದಿದ ಕೊಪ್ಪಳ ಜಿಲ್ಲೆ ಸಾಹಿತ್ಯಿಕವಾಗಿ ಕೂಡ ಮುಂದುವರಿದಿದ್ದು ದ್ಯಾಂಪುರದ ಚೆನ್ನಕವಿ, ಕಲ್ಲಿನಾಥಶಾಸ್ತ್ರಿ, ಕೀರ್ತನ ಕೇಸರಿ ಜಯ ರಾಮಾಚಾರ್ಯ, ನಾ.ಭಾ.ಶಾಸ್ತ್ರಿ, ಸಂಶೋಧಕ ಹಾಗೂ ಇತಿಹಾಸತಜ್ಞ ಪಿ.ಬಿ.ದೇಸಾಯಿ, ಕವಲೂರಿನ ಗರುಡ ಸದಾಶಿವರಾಯ, ಶಿರಹಟ್ಟಿ ವೆಂಕೋಬರಾಯರು ಮುಂತಾದವರು ಪ್ರಮುಖರಾಗಿದ್ದಾರೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ಅನೇಕ ಹಳ್ಳಿಗಳಿಂದ ಕೂಡಿದ ತಾಲೂಕಾಗಿದೆ. ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಕಲೆ-ವಾಸ್ತುಶಿಲ್ಪ, ಸಂಗೀತ ಮೊದಲಾದವುಗಳನ್ನು ಮೈಗೂಡಿಸಿಕೊಂಡು ಸಂಸ್ಕೃತಿಯ ಶ್ರೀಮಂತಿಕೆ ಪಡೆದಿದೆ. ಇಂಥ ಐತಿಹಾಸಿಕ ಮಹತ್ವದ ಪ್ರದೇಶವಾದ ಯಲಬುರ್ಗಾ ತಾಲೂಕಿನಲ್ಲಿ ದ್ಯಾಂಪುರ ಊರೇ ಡಾ.ಸಿದ್ಧಯ್ಯ ಪುರಾಣಿಕರು ಹುಟ್ಟಿದ ಸ್ಥಳವಾಗಿದೆ.

**

# ೨. ಜನನ ಮತ್ತು ಬಾಲ್ಯ

ದ್ಯಾಂಪುರವೆಂಬ ಚಿಕ್ಕ ಹಳ್ಳಿಯ ಹೆಸರು "ದ್ಯಾಂಪುರ ಚೆನ್ನಕವಿ"ಗಳಿಂದಾಗಿ ಎಲ್ಲರಿಗೂ ಪರಿಚಿತವಾಗಿದೆ. ಚೆನ್ನಕವಿಗಳು ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಪ್ರತಿನಿಧಿಸುವ ಹಿರಿಯ ತಲೆಮಾರಿನ ಕವಿಗಳು. ಕವಿರತ್ನರೆಂದೇ ಖ್ಯಾತರಾದವರು. ಇವರ ಮನೆತನ ದವರೇ ಆದ ಕಲ್ಲಿನಾಥಶಾಸ್ತ್ರಿಗಳು ಪಂಡಿತರಾಗಿ, ಪುರಾಣಕಾರರಾಗಿ, ನಾಟಕಕಾರರಾಗಿ ಪ್ರಸಿದ್ಧರಾಗಿದ್ದರು. ಕಲ್ಲಿನಾಥಶಾಸ್ತ್ರಿ ಹಾಗೂ ದಾನಮ್ಮನವರ ಹಿರಿಯ ಮಗನಾಗಿ ಸಿದ್ಧಯ್ಯ ನವರು ೧೮-೯-೧೯೧೮ರಂದು ಜನಿಸಿದರು. ಪುರಾಣಿಕ ವೃತ್ತಿಯನ್ನು ಅವಲಂಬಿಸಿದುದ ರಿಂದ 'ಪುರಾಣಿಕ' ಎಂಬುದಿವರ ಮನೆತನದ ಹೆಸರಾಗಿದೆ. ಅಜ್ಜನ ಹೆಸರಾಗಿದ್ದ ಸಿದ್ಧಯ್ಯನೆಂಬುದು ಸಂಪ್ರದಾಯದಂತೆ ಇವರ ಹೆಸರಾಯಿತು. ಹಳ್ಳಿಯಲ್ಲಿ ಇವರ ಮನೆ ದಾನ ಧರ್ಮಕ್ಕೆ ಹೆಸರಾಗಿತ್ತು ಮನೆಗೆ ಬಂದವರು ಬರಿಗೈಯಿಂದ ಮರಳುತ್ತಿರಲಿಲ್ಲ. ದಾಸೋಹದ ಮನೆ ಎನಿಸಿತ್ತು.

ಸಿದ್ಧಯ್ಯ ಪುರಾಣಿಕರ ಬಾಲ್ಯ ಸುಸಂಸ್ಕೃತ ವಾತಾವರಣದಲ್ಲಿ ಕಳೆಯಿತು. ಸೋದರಮಾವ ಕಾಲಕಾಲೇಶ್ವರ ಶಾಸ್ತ್ರಿಗಳು ವಿದ್ಯಾವಂತರಾಗಿದ್ದು ನಾಟಕ ಬರೆದು ಆಡಿಸುತ್ತಿದ್ದರು. ಸಿದ್ಧಯ್ಯನವರ ತಾಯಿಯ ತವರುಮನೆ ದ್ಯಾಂಪುರವೇ ಆಗಿದ್ದುದರಿಂದ ಬಳಗವೆಲ್ಲ ಅಲ್ಲಿಯೇ ಇದ್ದಿತು. ಊರಿನಲ್ಲಿದ್ದ ಮಹಾಲಿಂಗಯ್ಯನವರು, ರುದ್ರಯ್ಯನವರು ಸಾಹಿತ್ಯಾಸಕ್ತರಾಗಿದ್ದರು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪಾಠಶಾಲೆಗಳಿರುತ್ತಿರಲಿಲ್ಲ ಮಠ ಗಳಲ್ಲಿ, ದೇವಾಲಯಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದರು. ಪಾಲಕರೆಲ್ಲ ಸೇರಿ ಪಾಠ ಹೇಳುವುದಕ್ಕಾಗಿ ಶಿಕ್ಷಕರನ್ನು ನೇಮಕ ಮಾಡುತ್ತಿದ್ದರು. ಇಂಥ ಒಂದು ಗಾಂವಠಿ ಶಾಲೆ ದ್ಯಾಂಪುರದಲ್ಲಿತ್ತು. ಆದರೆ ಅಲ್ಲಿ ಶಿಕ್ಷಕರೇ ಇರುತ್ತಿರಲಿಲ್ಲ. ಉಪಜೀವನಕ್ಕೆ ಸಾಕಾಗುವಷ್ಟು ಹಣ ಸಿಕ್ಕರೆ ಮಾತ್ರ ಅಲ್ಲಿರುತ್ತಿದ್ದರು. ಸುತ್ತಮುತ್ತಲಿನ ಊರುಗಳಿಗೆ ದ್ಯಾಂಪುರದವರೇ ಶಿಕ್ಷಕರಾಗಿ ಹೋಗುತ್ತಿದ್ದರು. ಊರು ಚಿಕ್ಕದಾಗಿದ್ದರೂ ಪ್ರತಿ ಭಾವಂತರಿಗೇನೂ ಕಡಿಮೆಯಿರಲಿಲ್ಲ. ಹೀಗಾಗಿ ಸಿದ್ಧಯ್ಯನವರ ಪ್ರಾರಂಭಿಕ ಅಧ್ಯಯನ ನಡೆದದ್ದು ಮನೆಯಲ್ಲಿಯೇ. ಮನೆಯೇ ಮೊದಲ ಪಾಠಶಾಲೆ ಎನ್ನುವಂತೆ, ತಂದೆ ಕಲ್ಲಿನಾಥ ಶಾಸ್ತ್ರಿಗಳೇ ಅಕ್ಷರಾಭ್ಯಾಸ ಮಾಡಿಸಿದವರು

ಆಗಾಗ ಚೆನ್ನಕವಿಗಳ ಮನೆಯಲ್ಲಿ ಶಾಸ್ತ್ರಕಾವ್ಯಗಳ ಕುರಿತು ಚರ್ಚೆ ನಡೆಯುತ್ತಿತ್ತು. ಬಾಲಕ ಸಿದ್ಧಯ್ಯ ಅರ್ಥವಾಗದಿದ್ದರೂ ಕುಳಿತು ಕೇಳುತ್ತಿದ್ದರು. ಅವುಗಳಲ್ಲಿ ನಿಜಗುಣ ಶಿವಯೋಗಿ, ಬಸವಣ್ಣ, ಸರ್ಪಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದವರ ಹಾಡು, ವಚನ ಉಲ್ಲೇಖ ಮಾಡುತ್ತಿದ್ದರು. ಕೆಲವೊಮ್ಮೆ ಸುತ್ತುಮುತ್ತಲಿನ ಊರುಗಳಿಂದ ವಿದ್ವಾಂಸರು ಬರುತ್ತಿದ್ದರು. ಬೆಳಗಾಗುವವರೆಗೂ ಚರ್ಚೆ ಮುಂದುವರಿಯುತ್ತಿತ್ತು. ಇದು ಸಿದ್ಧಯ್ಯನವರ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಕಲ್ಲಿನಾಥ ಶಾಸ್ತ್ರಿಗಳು ಕೇವಲ ಅಕ್ಷರಾಭ್ಯಾಸ ಮಾಡಿಸಲಿಲ್ಲ. ಅದರೊಂದಿಗೆ ಜೈಮಿನಿ ಭಾರತ, ಶಬರಶಂಕರ ವಿಳಾಸ, ಪ್ರಭುಲಿಂಗಲೀಲೆ ಮೊದಲಾದ ಕಾವ್ಯಗಳಲ್ಲದೆ ಛಂದಸ್ಸು, ಮೀಮಾಂಸೆ, ವ್ಯಾಕರಣ, ವಚನ, ದಾಸ ಸಂಸ್ಕೃತ ಸಾಹಿತ್ಯ, ಶರೀಫರ ಹಾಡು ಹೀಗೆ ಎಲ್ಲವನ್ನು ಕರತಲಾಮಲಕ ಮಾಡಿಸಿದ್ದರು. ಸಿದ್ಧಯ್ಯನವರಿಗೆ ಒಮ್ಮೆ ಹೇಳಿದರೆ ಸಾಕು ತಕ್ಷಣ ನೆನಪಿಡುತ್ತಿದ್ದರು. ಅವರಿಗೆ ಅಗಾಧವಾದ ಜ್ಞಾಪಕಶಕ್ತಿಯಿದ್ದಿತು. ಹೀಗಾಗಿ ತಂದೆಯ ಪ್ರೀತಿಗೆ ಪಾತ್ರರಾಗಿದ್ದರು. ಮಗನ ವಿದ್ಯಾಭ್ಯಾಸದ ಬಗ್ಗೆ ತಂದೆಗೆ ಅಪಾರವಾದ ಕಾಳಜಿ ಇದ್ದಿತು. ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬ ಹಂಬಲ ಕಲ್ಲಿನಾಥ ಶಾಸ್ತ್ರಿಗಳಿಗಿದ್ದಂತೆ, ಓದಬೇಕೆನ್ನುವ ಆಸಕ್ತಿ ಸಿದ್ಧಯ್ಯನವರಲ್ಲಿ ಕೂಡ ಅಷ್ಟೇ ಪ್ರಮಾಣ ದಲ್ಲಿದ್ದಿತು. ದ್ಯಾಂಪುರದಲ್ಲಿ ಶಾಲೆ ಸರಿಯಾಗಿ ನಡೆಯುತ್ತಿಲ್ಲವೆಂದು ತಿಳಿದು ಸೋದರ ಮಾವ ಶಿಕ್ಷಕರಾಗಿದ್ದ ಚಿಕ್ಕೇನಕೊಪ್ಪಕ್ಕೆ ಕಳಿಸಿಕೊಟ್ಟರು. ತಾನು ಹುಟ್ಟಿ ಬೆಳೆದ ಊರು, ತಂದೆ ತಾಯಿ, ಬಂಧುಬಳಗವನ್ನು, ಗೆಳೆಯರನ್ನು ಆ ಪರಿಸರವನ್ನು, ಬಿಟ್ಟು ಹೋಗುವದು ತುಂಬಾ ಕಷ್ಟವೆನಿಸಿತು. ಊರು ಮರೆಯಾಗುವವರೆಗೆ ನೋಡುತ್ತಲೇ ಹೋದರು. ಅವರೊಂದಿಗೆ ಸೂರ್ಯನು ಕೂಡ ಜೊತೆಯಲ್ಲಿ ಇದ್ದದ್ದು ಬಾಲಕ ಸಿದ್ಧಯ್ಯನವರಿಗೆ ಸಂತಸ ತಂದಿತು. ಅಲ್ಲಿನ ಪರಿಸರ ಹೊಸದೆನಿಸಿದರೂ ಕೆಲವೇ ದಿನಗಳಲ್ಲಿ ಅದರೊಂದಿಗೆ ಬೆರೆತು ಹೋದರು. ಮಠದಲ್ಲಿದ್ದ ಹುಚ್ಚಮ್ಮ ಅಜ್ಜಿಯಿಂದ ತಾಯಿಯ ಪ್ರೀತಿ ವಾತ್ಸಲ್ಯ ಪಡೆದರು. ಹಗಲಿನಲ್ಲಿ ಪಾಠಶಾಲೆಯಾಗಿದ್ದ ಕೋಣೆ ರಾತ್ರಿ ಇವರ ವಾಸಸ್ಥಾನವಾಗುತ್ತಿತ್ತು. ಸೋದರಮಾವ ಕಳಕಯ್ಯ ಗುರುಗಳು ಒಮ್ಮೆ ಅಲ್ಲಿರುವ ವಿದ್ಯಾರ್ಥಿಗಳಿಗೆಲ್ಲ 'ನಿಮಗೇನು ಬೇಕು' ಎಂಬುದನ್ನು ನಿಮ್ಮ ಪಾಟಿಯ ಮೇಲೆ ಬರೆದು ತೋರಿಸಿ ಎಂದರು. ಆಗ ವಿದ್ಯಾರ್ಥಿಗಳೆಲ್ಲ ತಮತಮಗೆ ಇಷ್ಟವಾದ ವಸ್ತುಗಳನ್ನು ಬರೆದು ತೋರಿಸಿದರು. ಶಿಕ್ಷಕರು ಎಲ್ಲರ ಪಾಟಿಗಳನ್ನೂ ನೋಡಿದರು. ಕೆಲವರು ಅಂಗಿ ಬೇಕು, ಉಂಡಿ ಬೇಕು, ಚೆಂಡು ಬೇಕು ಎಂದು ವಿಧ ವಿಧವಾಗಿ ಬರೆದಿದ್ದರು. ಅದರೆ ಒಂದು ಪಾಟಿಯಲ್ಲಿ 'ವಿದ್ಯೆ ಬೇಕು' ಎಂದು ಬರೆದಿದ್ದು ನೋಡಿ ಆಕರ್ಷಣೆಗೊಳಗಾದರು. ಹಾಗೆ ಬರೆದವರು ಬೇರಾರೂ ಅಲ್ಲ, ಸಿದ್ಧಯ್ಯನವರು. ಇದು ವಿದ್ಯೆಯ ಬಗೆಗೆ ಅವರಿಗಿದ್ದ ಆಸಕ್ತಿಯನ್ನು ಸೂಚಿಸುತ್ತದೆ. ಚಿಕ್ಕೇನಕೊಪ್ಪದಲ್ಲಿದ್ದಾಗ ಆ ಊರಿನ ಗೌಡರು ಹೊಲ ಸ್ವಚ್ಛ ಮಾಡಿಸು ವುದಕ್ಕಾಗಿ ಟ್ರ್ಯಾಕ್ಟರನ್ನು ತರಿಸಿದ್ದರು. ಬಾಲಕ ಸಿದ್ಧಯ್ಯ ಆ ಬೃಹತ್ ಗಾತ್ರದ ಯಂತ್ರವನ್ನು



ನೋಡಿದ್ದು ಅದೇ ಮೊದಲಾದ್ದರಿಂದ ಅದರ ಆಕಾರ ಅದರ ಚಕ್ರ ನೋಡುತ್ತ ಆಶ್ಚರ್ಯಪಟ್ಟರು. ಅದರ ಚಾಲಕನನ್ನು ನೋಡಿ ಇಷ್ಟು ದೊಡ್ಡ ವಾಹನವನ್ನು ಹೇಗೆ ನಿಯಂತ್ರಿಸುವನು ಎಂದು ಅಚ್ಚರಿಪಟ್ಟರಲ್ಲದೇ ತಾವು ದೊಡ್ಡವರಾದ ಮೇಲೆ ಹೀಗೆ ಚಾಲಕನಾಗಬೇಕೆಂದು ಆಸೆ ಪಟ್ಟರು. ಆದರೆ ಅವರು ಮುಂದೆ ಒಬ್ಬ ಅಧಿಕಾರಿಯಾಗಿ ಆಡಳಿತ ಯಂತ್ರದ ಚಾಲನೆಯನ್ನೇ ಮಾಡಿದರು.

ಚಿಕ್ಕೇನಕೊಪ್ಪದಲ್ಲಿದ್ದಾಗ ಹಬ್ಬ ಹುಣ್ಣಿಮೆಗಳೆಂದು ಮಾವನವರೊಂದಿಗೆ ಅಯ್ಯತನದ ಪರೀಕ್ಷೆಯಾಗುತ್ತಿದ್ದಿತು. ಜನರು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. ಮನೆಯಲ್ಲಿ ಯಾವುದೇ ಕಾರ್ಯಕ್ರಮ ಮಾಡಲಿ ಏನೇ ಮಾಡಲಿ ಎಲ್ಲದಕ್ಕೂ ಮಠಕ್ಕೆ ಬಂದು ಮಾವನವರನ್ನು ಕೇಳಿ ಹೋಗುತ್ತಿದ್ದರು. ಒಂದು ಊರಿನವರೆಂದರೆ ಒಂದು ಕುಟುಂಬ ದವರಂತೆ ಸೌಹಾರ್ದದಿಂದ ಇದ್ದರು. ಆದರೆ ಇಂತಹ ಊರಿನಲ್ಲಿಯೂ ಒಂದು ಕೊಲೆ ನಡೆಯಿತು. ಆಗ ಪೋಲಿಸರೆಂದರೆ ಜನ ಹೆದರುತ್ತಿದ್ದರು. ಜನರು ಊರು ಬಿಟ್ಟು ಹೋಗತೊಡಗಿದ್ದರು. ಹೀಗಾಗಿ ಸಿದ್ಧಯ್ಯನವರು ಒಂದೆರಡು ತಿಂಗಳು ಶಾಲೆ ಬಿಟ್ಟು ಮಾವನವರ ಕಾವಲು ಕಾಯುತ್ತಾ ಹೊಲದಲ್ಲಿರುತ್ತಿದ್ದರು. ಪ್ರತಿದಿನ ಊಟ ತಂದು ಕೊಡುವ ಕೆಲಸ ಇವರದಾಗಿತ್ತು. ಕಲ್ಲಿನಾಥ ಶಾಸ್ತ್ರಿಗಳಿಗೆ ಸಿದ್ಧಯ್ಯನವರ ಓದಿನ ಬಗ್ಗೆ ಚಿಂತೆಯಾಗಿ ಕುಕನೂರಿನಲ್ಲಿರುವ ವಿದ್ಯಾನಂದ ಗುರುಕುಲಕ್ಕೆ ಸೇರಿಸ ಬೇಕೆಂದು ವಿಚಾರಮಾಡಿದರು. ಆದರೆ ಪ್ರವೇಶ ಕೊಡುವರೋ ಇಲ್ಲವೋ ಎಂಬ ಅನುಮಾನಕ್ಕೊಳಗಾಗಿದ್ದರು. ಏಕೆಂದರೆ ಅದು ಕೇವಲ ಬ್ರಾಹ್ಮಣರ ಶಾಲೆ ಎಂದು ಪ್ರಚಾರವಾಗಿತ್ತು. ಆದರೆ ಆ ಸಂಶಯ ಶಾಲೆಗೆ ಹೋಗಿ ಪ್ರಾಚಾರ್ಯರನ್ನು ಭೇಟಿಯಾದ ಮೇಲೆ ನಿವಾರಣೆಯಾಗಿತ್ತು. ಗಾಂಧೀಜಿಯವರ ರಾಷ್ಟ್ರೀಯ ಶಿಕ್ಷಣ ಆಂದೋಲನದಿಂದ ಪ್ರಭಾವಿತರಾಗಿ ದೇಶಾಭಿಮಾನಿಗಳಾದ ರಾ.ಭಿ.ದೇಸಾಯಿ ಮತ್ತು ಪಾ.ಭಿ.ದೇಸಾಯಿ ಯವರು ಪ್ರಾರಂಭಿಸಿದ ನಿಜಾಮ ಕರ್ನಾಟಕದ ನೂತನ ಪಾಠ ಶಾಲೆಯೇ ಅದಾಗಿತ್ತು. ಶಾಸ್ತ್ರಿಗಳೇ ನಿಮ್ಮ ಮಗನನ್ನು ಇಲ್ಲಿ ಸೇರಿಸಿರಿ, ನಿಮ್ಮನ್ನು ನೋಡಿ ಉಳಿದವರು ತಮ್ಮ ಮಕ್ಕಳನ್ನು ಕಳಿಸುವರೆಂದು ಹೇಳಿದಾಗ ದೊಡ್ಡ ಭಾರ ಕಳೆದಂತಾಗಿ ಮಗನನ್ನು ಕರೆದುಕೊಂಡು ಬಂದರು. ಪ್ರಾಚಾರ್ಯರು ಹಲವಾರು ಪ್ರಶ್ನೆ ಕೇಳಿದರು. ಸಿದ್ಧಯ್ಯನವರ ಜಾಣತನವನ್ನು ಪರೀಕ್ಷಿಸಿ ಪ್ರವೇಶ ಕೊಟ್ಟರು. ಆಗ ಅಲ್ಲಿ ಉಪಮುಖ್ಯೋಪಾಧ್ಯಾಯ ರಾಗಿದ್ದ ದೇಸಾಯಿ ಪಾಂಡುರಂಗರಾಯರು ಸಿದ್ಧಯ್ಯನವರಿಗೆ ಪ್ರತಿದಿನ ಒಂದೊಂದು ಪುಸ್ತಕ ಓದಲು ಕೊಡುತ್ತಿದ್ದರು. ಅದನ್ನು ಓದಿದ ಮೇಲೆ ಅದರ ಸಾರಾಂಶ ಕೇಳಿ ಮತ್ತೊಂದು ಪುಸ್ತಕ ಕೊಡುತ್ತಿದ್ದರು. ಸಿದ್ಧಯ್ಯನವರ ಜೀವನದಲ್ಲಿ ಇದೊಂದು ಮಹತ್ತರ ತಿರುವು. ಮೊದಲೇ ಅಧ್ಯಯನದಲ್ಲಿ ಆಸಕ್ತಿಯಿದ್ದ ಸಿದ್ಧಯ್ಯನವರ ಜ್ಞಾನಲಾಲಸೆ ಹೀಗೆ ಹೆಚ್ಚುತ್ತಲೇ ಹೋಯಿತು. ಬಸವಣ್ಣನವರ ವಚನಗಳಿಂದ, ಹರ್ಡೇಕರ ಮಂಜಪ್ಪನವರ ಹಾಗೂ ಮಹಾತ್ಮಾ ಗಾಂಧೀಜಿಯವರ ವಿಚಾರಗಳಿಂದ ವಿಶೇಷವಾಗಿ ಪ್ರಭಾವಿತರಾದರು.

ಏಳನೆಯ ವರ್ಗ ಮುಗಿಯುವಷ್ಟರಲ್ಲಿ ಕನ್ನಡ ಕಾವ್ಯಗಳನ್ನು ಅರಗಿಸಿಕೊಂಡಿದ್ದರು. ಮಿಡ್ಲ್ ಪರೀಕ್ಷೆಯ ಪೂರ್ವದಲ್ಲಿ ಪೂರ್ವಸಿದ್ಧತಾ ಪರೀಕ್ಷೆಯಿತ್ತು. ಅದರಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿದ್ದರು. ವಾರ್ಷಿಕ ಪರೀಕ್ಷೆ ಸಮೀಪಿಸಿದಾಗ ಅನಾರೋಗ್ಯವುಂಟಾಗಿ ಪರೀಕ್ಷೆ ಬರೆಯಲಾಗಲಿಲ್ಲ. ಆದರೆ, ಗುರುಗಳು ಇವರ ಪೂರ್ವಸಿದ್ಧತಾ ಪರೀಕ್ಷೆಯ ಅಂಕಗಳನ್ನೇ ತೋರಿಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟರು. ಆಗಿನ ಕಾಲದಲ್ಲಿ ಮಿಡ್ಲ್ ಪರೀಕ್ಷೆ ಪಾಸಾದರೆ ನೌಕರಿ ಹತ್ತುತ್ತಿದ್ದವು. ಸಿದ್ಧಯ್ಯನವರಿಗೆ ಮುಂದೆ ಓದ ಬೇಕೆಂದು ಬಹಳ ಆಸೆ ಇದ್ದಿತು. ತಂದೆ ಕಲ್ಲಿನಾಥ ಶಾಸ್ತ್ರಿಗಳು ಬಹಳ ಬುದ್ಧಿವಂತರು. ಮಗನನ್ನು ಎಲ್ಲಿ ಓದಿಸಬೇಕು, ಹೇಗೆ ಓದಿಸಬೇಕು? ಎಂಬುದನ್ನು ಕೂಲಂಕುಷವಾಗಿ ವಿಚಾರಮಾಡಿಯೇ ಒಂದು ನಿರ್ಧಾರಕ್ಕೆ ಬರುತ್ತಿದ್ದರು. ನಿಜಾಮ ರಾಜ್ಯದಲ್ಲಿ ಜಿಲ್ಲೆಗೊಂದು, ಹೈಸ್ಕೂಲು ವಿಭಾಗಮಟ್ಟದಲ್ಲೊಂದು, ಇಂಟರ್ ಮಿಡಿಯಟ್ ಕಾಲೇಜು ಇದ್ದವು. ವಿಭಾಗ ಮಟ್ಟವಾದ ಕಲಬುರ್ಗಿಗೆ ಕಳಿಸಿದರೆ ಹೈಸ್ಕೂಲು, ಇಂಟರ್ ಮೀಡಿಯಟ್ ಎರಡೂ ಆಗುವುದೆಂಬ ದೂರದೃಷ್ಟಿ ಒಂದೆಡೆಯಾದರೆ, ಪೂಜ್ಯ ಶ್ರೀ ಶರಣಬಸವೇಶ್ವರರ ತಾಣವೆಂಬ ಅಭಿಮಾನ ಇನ್ನೊಂದಾಗಿತ್ತು.

**

## ೩. ವಿದ್ಯಾಭ್ಯಾಸ

ಕಲಬುರ್ಗಿಯ ಸರಕಾರಿ ಕಾಲೇಜಿನ ಪ್ರಾಚಾರ್ಯರಾಗಿದ್ದ ಪ್ರೊ.ಹಕ್ಕಾನಿ ಸಾಹೇಬರು ಸಿದ್ಧಯ್ಯನವರ ಖಾದಿ ವೇಷ ಹಾಗೂ ಅವರ ಅಂಕಪಟ್ಟಿ ನೋಡಿ ಇಷ್ಟೊಂದು ಅಂಕಗಳಿವೆಯಲ್ಲಾ ಎಂದು ಅನುಮಾನಿಸಿದರು. ಶಾಲೆಯ ಹೆಸರು ನೋಡಿ ಇದು ಸರಕಾರದಿಂದ ಮಾನ್ಯತೆ ಪಡೆದ ಶಾಲೆಯೇ? ಎಂದು ಕೇಳಿದರು. ಆಗ ಅಲ್ಲಿ ಕುಳಿತಿದ್ದ ಧಾರವಾಡಕರ ಮಾಸ್ತರರು ಹೌದು ಎಂದಾಗ ಸಿದ್ಧಯ್ಯನವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಇಂಗ್ಲೀಷ್ ವ್ಯಾಕರಣ ಕುರಿತು ಕೇಳಿದಾಗ ಸರಿಯಾದ ಉತ್ತರ ನೀಡಿದರು. ಇದರಿಂದ ಪ್ರಸನ್ನರಾಗಿ ಪ್ರವೇಶ ಕೊಟ್ಟರು. ಸಿದ್ಧಯ್ಯನವರಿಗೆ ತಂದೆಯವರು ಮನೆಯಲ್ಲಿ ಉರ್ದುವನ್ನು ಹೇಳಿಕೊಟ್ಟಿದ್ದರು. ಕನ್ನಡ, ಇಂಗ್ಲೀಷ್, ಉರ್ದು, ಸಂಸ್ಕೃತ ಹೀಗೆ ಬಾಲ್ಯದಿಂದಲೇ ಬಹುಭಾಷೆಗಳನ್ನು ಬಲ್ಲವರಾಗಿದ್ದರು.

ಎಂಟನೆಯ ವರ್ಗಕ್ಕೆ ಪ್ರವೇಶ ಪಡೆದಾಗ ಮೊದಲು "ಗಣಿತ" ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದರು. ಒಂದು ದಿನ ಸಿದ್ಧಯ್ಯನವರು ದ್ಯಾಂಪುರದ ಹಾಗೂ ತಂದೆ ತಾಯಿಗಳ ನೆನಪಿನಲ್ಲಿ ಕಾಲ ಕಳೆದು ಮನೆಗೆಲಸ ಮಾಡಿರಲಿಲ್ಲ. ಗಣಿತದ ಅಧ್ಯಾಪಕರು ಪ್ರತಿನಿತ್ಯ ಮಾಡುವವ ಇಂದೇಕೆ ಮಾಡಿಲ್ಲವೆಂದು ಕೋಪದಿಂದ ನೀನು ನನ್ನ ವಿದ್ಯಾರ್ಥಿಯಾಗಿರಲು ತಕ್ಕವನಲ್ಲ ಎಂದರಂತೆ. ಆಗ ಸಿದ್ಧಯ್ಯ ಕೂಡ ಅಷ್ಟೇ ವೇಗವಾಗಿ ನನಗೂ ನಿಮ್ಮ ಶಿಷ್ಯನಾಗಿ ಮುಂದುವರಿಯಲು ಇಷ್ಟವಿಲ್ಲ ಎಂದು ಕ್ಲಾಸಿನಿಂದ ಹೊರಗೆ ಬಂದರಂತೆ. ಸ್ವಾಭಿಮಾನಿಯಾಗಿದ್ದ ಸಿದ್ಧಯ್ಯ ಮರುದಿನ ಗಣಿತ ಕ್ಲಾಸಿಗೆ ಹೋಗದೆ ತವಗ ಭೀಮಸೇನರಾಯರು ಕಲಿಸುತ್ತಿದ್ದ ಕನ್ನಡ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡರು. ಹೀಗೆ ಕನ್ನಡ ವಿಷಯ ಬಿಡಬೇಕೆಂದರೂ ಬಿಡಲಾಗಲಿಲ್ಲ. ಕಟ್ಟೆಯ ಕಲ್ಲು ಕಟ್ಟೆಗೆ ಸೇರಿತು. ಕಲಬುರ್ಗಿಯಲ್ಲಿ ಆಗ ಕನ್ನಡದ ಪುನರುಜ್ಜೀವನಕಾರ್ಯವನ್ನು ಕೈಗೆತ್ತಿಕೊಂಡ ಹಲವರಲ್ಲಿ ತವಗ ಭೀಮಸೇನರಾಯರು ಒಬ್ಬರು. ಸಿದ್ಧಯ್ಯನವರಿಗೆ ಹೊಸ ಕನ್ನಡ ಪುಸ್ತಕಗಳ ಭಂಡಾರವನ್ನೇ ಒದಗಿಸಿಕೊಟ್ಟಿದ್ದರು. ಕನ್ನಡ ಭಾಷೆ ಬಗ್ಗೆ ಮೊದಲೇ ಇದ್ದ ಗೌರವ ಮತ್ತಷ್ಟು ಹೆಚ್ಚಾಯಿತು.

ಕಲ್ಲಿನಾಥ ಶಾಸ್ತ್ರಿಗಳು ಇವರನ್ನು ಬ್ರಹ್ಮಪೂರದ ಚೌದಾಪುರಿ ಹಿರೇಮಠದ ಉಚಿತ ವಿದ್ಯಾರ್ಥಿ ನಿಲಯದಲ್ಲಿರಿಸಿದ್ದರು. ಶ್ರೀ ಶಾಂತವೀರಸ್ವಾಮಿಗಳು ಅದರ ಸಂಚಾಲಕ

ರಾಗಿದ್ದರು. ಒಮ್ಮೆ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕವನ ಬರೆಯುವ ಸ್ಪರ್ಧೆಯನ್ನಿಟ್ಟಿದ್ದರು. ಒಬ್ಬ ವಿದ್ಯಾರ್ಥಿ ಮಾತ್ರ ಕವನ ಕೊಟ್ಟಿದ್ದರಿಂದ ಇನ್ನೂ ಯಾರಾದರೂ ಕೊಡುವವರಿದ್ದರೆ ಕೊಡಬಹುದು ಎಂದು ಗುರುಗಳು ಹೇಳಿದರು. ಆಗ ಸಿದ್ಧಯ್ಯನವರು "ಬೆಳಗು" ಎಂಬ ವಿಷಯದ ಮೇಲೆ ಕವನ ಬರೆದು ಕೊಟ್ಟರು. ಅದೇ ಇವರ ಮೊದಲ ಕವಿತೆ. ಆದರೆ ಅದೇ ಕವನಕ್ಕೆ ಪ್ರಥಮ ಬಹುಮಾನ ದೊರಕಿ ಸಿದ್ಧಯ್ಯನವರನ್ನು ಕವಿಯಾಗಿ ಮಾಡಿತು. ನವೋದಯ ಸಂದರ್ಭದ ಕೆಲವು ಕವಿಗಳು ಷಟ್ಪದಿಯಲ್ಲಿಯೇ ತಮ್ಮ ಕಾವ್ಯ ಸೃಷ್ಟಿ ಪ್ರಾರಂಭಿಸಿದಂತೆ ಸಿದ್ಧಯ್ಯನವರು ಷಟ್ಪದಿಯಲ್ಲಿ ಪದ್ಯ ಬರೆದಿದ್ದರು. ತಂದೆ ಕಲ್ಲಿನಾಥ ಶಾಸ್ತ್ರಿಗಳು ಆ ಪದ್ಯವನ್ನು ಓದಿ ಸಂತೋಷಪಟ್ಟರು. ನಂತರ ಅದು ಜಯಕರ್ನಾಟಕ ಪತ್ರಿಕೆಯಲ್ಲಿ ಅಚ್ಚಾಯಿತು.

ಸಿದ್ಧಯ್ಯನವರಿಗೆ ಸಾಹಿತ್ಯದಲ್ಲಿರುವ ಆಸಕ್ತಿಯನ್ನು ಗಮನಿಸಿ, ತವಗ ಭೀಮಸೇನ ರಾಯರು ಅವರನ್ನು ಕನ್ನಡ ಸಾಹಿತ್ಯ ಸಂಘದಿಂದ ಪ್ರಕಟವಾಗುತ್ತಿದ್ದ "ಮಿಂಚು" ಎಂಬ ಕೈಬರಹದ ಮಾಸಪತ್ರಿಕೆಗೆ ಸಂಪಾದಕರನ್ನಾಗಿ ಮಾಡಿದರು. ಹೀಗೆ ಇವರಲ್ಲಿ ಸಾಹಿತ್ಯದ ಕಂಪು ಚಿಗುರ ತೊಡಗಿತು.

ತಾವಿದ್ದ ಪ್ರಸಾದ ನಿಲಯದ ಅವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ್ದರ ಪರಿಣಾಮವಾಗಿ ಅಲ್ಲಿಂದ ಹೊರಬಂದು ಗುರುಬಸವ ಮಠಕ್ಕೆ ಹೋಗಬೇಕಾಯಿತು. ಇಲ್ಲಿ ವಸತಿ ಸೌಕರ್ಯ ಮಾತ್ರವಿದ್ದಿತು. ಊಟಕ್ಕಾಗಿ ವಾರದಮನೆಗಳಿಗೆ ಹೋಗ ತೊಡಗಿದರು. ಅನ್ನಕ್ಕಿಂತ ಜ್ಞಾನ ಮುಖ್ಯವಾಗಿತ್ತು. ಅಲ್ಲಿದ್ದ ಮಿತ್ರರೊಡನೆ ಕೂಡಿ ಅಧ್ಯಯನ ಮಾಡುವುದು, ನಾಟಕಗಳನ್ನು ಬರೆಯುವುದು, ನಾಟಕಗಳನ್ನು ಆಡುವುದು ಇವರ ಕಾರ್ಯಗಳಾಗಿದ್ದವು. 'ಕಿತ್ತೂರು ಚೆನ್ನಮ್ಮ', 'ಸ್ತ್ರೀ' ಮೊದಲಾದ ನಾಟಕ ರಚಿಸಿ ಅದರಲ್ಲಿ ಪಾತ್ರಧಾರಿಗಳಾಗಿದ್ದರು.

ಕಲಬುರ್ಗಿಯಲ್ಲಿ ನಾಡಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಅನೇಕ ವಿದ್ವಾಂಸರನ್ನು ಕರೆಸಿ ಭಾಷಣ ಮಾಡಿಸುತ್ತಿದ್ದರು. ಶ್ರೀ. ಟಿ.ಕೆ.ತುಕೋಳರು ವಚನ ಸಾಹಿತ್ಯದ ಬಗ್ಗೆ, ಬೆಟಗೇರಿ ಕೃಷ್ಣಶರ್ಮರು ಆಧುನಿಕ ಸಾಹಿತ್ಯದ ಬಗ್ಗೆ ಉಪನ್ಯಾಸವನ್ನಿತ್ತರು. ಅದೇ ವರ್ಷ ಶ್ರೀ ಎ.ಆರ್.ಕೃಷ್ಣಶಾಸ್ತ್ರಿ, ಮಾಸ್ತಿವೆಂಕಟೇಶ ಅಯ್ಯಂಗಾರ್, ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ ಮೊದಲಾದ ಹಿರಿಯರ ಭಾಷಣಗಳಿಂದ ಸಿದ್ಧಯ್ಯನವರು ಪ್ರೇರಣೆ ಪಡೆದರು.

ಕಲಬುರ್ಗಿಯಲ್ಲಿ ಆಗಾಗ ಉರ್ದು ಕವಿಗೋಷ್ಠಿಗಳು (ಮುಷಾಯಿರಾ) ನಡೆಯುತ್ತಿದ್ದವು. ಕುತೂಹಲದಿಂದ ಸಿದ್ಧಯ್ಯನವರು ಅಲ್ಲಿಗೆ ಹೋಗಿ ಕುಳಿತು ಗಜಲ್ ಗಳನ್ನು ಕೇಳುತ್ತಿದ್ದರು. ಇದೇ ಅವಧಿಯಲ್ಲಿ ವೀರಶೈವ ತರುಣ ಸಂಘದ ಕಾರ್ಯ ದರ್ಶಿಗಳಾಗಿ ಕಾರ್ಯನಿರ್ವಹಿಸಿದರು. ಗುರು ಬಸವ ಮಠದ ಗೆಳೆಯರ ಒತ್ತಾಯದ



ಮೇರೆಗೆ 'ಬೆಳವಡಿ ಮಲ್ಲಮ್ಮ' ನಾಟಕ ರಚಿಸಿ ಶಿವಾಜಿಯ ಪಾತ್ರವನ್ನು ಸಿದ್ಧಯ್ಯನವರು ವಹಿಸಿದ್ದರು. ವರ್ಗದ ಚರ್ಚಾಕೂಟದ ಕಾರ್ಯದರ್ಶಿಯಾಗಿ ನೇಮಕರಾದರು. ಕಾಲೇಜಿನ ಪ್ರತಿಯೊಂದು ಕಾರ್ಯ ಚಟುವಟಿಕಗಳಲ್ಲಿ ಭಾಗವಹಿಸತೊಡಗಿದರು. ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಸ್ವಾಗತ, ಪರಿಚಯ, ನಿರ್ವಹಣೆ, ವಂದನಾರ್ಪಣೆಗಳಂತಹ ಕಾರ್ಯಗಳು ಇವರ ಪಾಲಿಗಿರುತ್ತಿದ್ದವು. ಮುಂದೆ ಒಳ್ಳೆಯ ಭಾಷಣಕಾರರಾಗುವ ಮುನ್ಸೂಚನೆಯನ್ನು ಕಾಣಬಹುದಾಗಿತ್ತು. ಇಷ್ಟೆಲ್ಲ ಚಟುವಟಿಕೆಗಳ ಮಧ್ಯ ಸಿದ್ಧಯ್ಯ ಓದುವದನ್ನು ಎಂದಿಗೂ ಬಿಡುತ್ತಿರಲಿಲ್ಲ.

ಆ ವರ್ಷ ಮೆಟ್ರಿಕ್ ಪರೀಕ್ಷೆಯಲ್ಲಿ ಕೆ.ಬಸವಣ್ಣನವರು ವಿಜ್ಞಾನ ಮತ್ತು ಗಣಿತದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮರಾಗಿ ಪಾಸಾಗಿದ್ದರು. ಆ ಕಾಲೇಜಿನಲ್ಲಿ ಇಂಗ್ಲೀಷ್‌ನಲ್ಲಿ ಅದುವರೆಗೆ ಯಾರೂ ಪ್ರಥಮಸ್ಥಾನ ಪಡೆದಿರಲಿಲ್ಲ. ಆದುದರಿಂದ ಪ್ರಾಚಾರ್ಯ ಹಕ್ಕಾನಿಯವರು ಸಿದ್ಧಯ್ಯನವರ ಜಾಣ್ಮೆ ಕಂಡು "ನೀನು ವಿಶ್ವವಿದ್ಯಾಲಯಕ್ಕೆ ಮೊದಲಿಗನಾಗಿ ಪಾಸಾಗಬೇಕು" ಎಂದು ಪ್ರೋತ್ಸಾಹಿಸಿದರು. ಅಜೀಜ್‌ಖಾನ ಸಾಹೇಬ ರಿಂದ ಇಂಗ್ಲೀಷ್ ಮನೆಪಾಠ ಹೇಳಿಸಿದರು. ಮಠದಲ್ಲಿರುವದನ್ನು ಬಿಡಿಸಿ ಸರಕಾರಿ ಹಾಸ್ಟೆಲಿಗೆ ಸೇರಿಸಿದರು. ಆಗ ಸಿದ್ಧಯ್ಯನವರು ಶಕ್ತಿ ಮೀರಿ ಪ್ರಯತ್ನಿಸುವೆ ಎಂದು ಗುರುಗಳಿಗೆ ನಮಸ್ಕರಿಸಿದರು. ಅದೇ ರೀತಿ ಕಷ್ಟ ಪಟ್ಟು ಓದಿ ಮೆಟ್ರಿಕ್ ಪರೀಕ್ಷೆಯಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಮೊದಲಿಗರಾಗಿ ವಿಶ್ವವಿದ್ಯಾಲಯಕ್ಕೆ ಮೂರನೆಯವರಾಗಿ ಪಾಸಾದರು. ಇದರಿಂದ ಹಕ್ಕಾನಿ ಸಾಹೇಬರಿಗೆ, ತಂದೆ ತಾಯಿಯವರಿಗೆ ಅತ್ಯಂತ ಸಂತೋಷವಾಯಿತು. ಹೀಗೆ ಹೆಚ್ಚಿನ ಅಂಕಗಳನ್ನು ಪಡೆದು ಪಾಸಾದದ್ದು ಅನುಕೂಲವೇ ಆಯಿತು. ಮುಂದಿನ ವಿದ್ಯಾಭ್ಯಾಸಕ್ಕೆ ಹಣಕಾಸಿನ ತೊಂದರೆಯಾಗಲಿಲ್ಲ. ಪ್ರತಿ ತಿಂಗಳು ೧೫ರೂ. ವಿದ್ಯಾರ್ಥಿವೇತನ ದೊರಕುತ್ತಿತ್ತು.

ಸಿದ್ಧಯ್ಯನವರ ತಂದೆ ಕಲ್ಲಿನಾಥ ಶಾಸ್ತ್ರಿಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಹಳ್ಳಿಗಳಲ್ಲಿ ಪುರಾಣ ಹೇಳಿಸುವುದು ಕಡಿಮೆಯಾಗಿತ್ತು. ಮನೆಯ ಆದಾಯಕ್ಕಿಂತ ಖರ್ಚು ಹೆಚ್ಚಾಗತೊಡಗಿತ್ತು. ಆದ್ದರಿಂದ ಅವರು ಆ ಹಿರಿಯ ವಯಸ್ಸಿನಲ್ಲಿಯೂ ಆಯುರ್ವೇದ ಪರೀಕ್ಷೆ ಪಾಸಾಗಿ ವೈದ್ಯಕೀಯ ವೃತ್ತಿಯನ್ನು ಮನೆಯಲ್ಲಿಯೇ ಮುಂದುವರೆಸಿದರು. ರಜೆಗೆ ಸಿದ್ಧಯ್ಯನವರು ಊರಿಗೆ ಹೋದಾಗ ಮಿತ್ರರಾರೂ ಅಲ್ಲಿರಲಿಲ್ಲ. ಅವರೆಲ್ಲ ಗೃಹಸ್ತರಾಗಿ, ರೈತರಾಗಿ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಆಗ ಸಿದ್ಧಯ್ಯ ತಂದೆಯವರಿಗೆ ಗಿಡಮೂಲಿಕೆಗಳನ್ನು ತಂದು ಕೊಡುತ್ತಿದ್ದರು. ಮೆಟ್ರಿಕ್ ಪರೀಕ್ಷೆ ಮುಗಿದ ಸಂದರ್ಭದಲ್ಲಿ, ತಂದೆ ಕಲ್ಲಿನಾಥ ಶಾಸ್ತ್ರಿಗಳಿಗೆ ಸಂಗ್ರಾಮಪ್ಪನವರು ಪತ್ರಬರೆದು, "ನಿಮ್ಮ ಮಗ ಸಿದ್ಧಯ್ಯನನ್ನು ಉದಗಿರಿಯ ಹಾವಗಿ ಮಠಕ್ಕೆ ಸ್ವಾಮಿಯಾಗಲು ಹೇಳಿರಿ" ಎಂದರಂತೆ. ಆಗ ತಂದೆ ಸಿದ್ಧಯ್ಯನೇ ನಿರ್ಣಯ ಕೈಕೊಳ್ಳಬೇಕು ಎಂದು, ಸಿದ್ಧಯ್ಯನನ್ನು ಕೇಳಲು ಅವರು ಸ್ಪಷ್ಟವಾಗಿ ಸನ್ಯಾಸ ನನ್ನಿಂದ

ಸಾಧ್ಯವಿಲ್ಲ ಎಂದು ಹೇಳಿದರಂತೆ. ಕಲ್ಲಿನಾಥ ಶಾಸ್ತ್ರಿಗಳು ಮಗನ ಇಚ್ಛೆಗೆ ವಿರುದ್ಧವಾಗಿ ಎಂದಿಗೂ ನಡೆದುಕೊಂಡಿರಲಿಲ್ಲ ಮತ್ತೆ ಮುಂದಿನ ವಿದ್ಯಾಭ್ಯಾಸಕ್ಕೆ ಕಲಬುರ್ಗಿಗೆ ಕಳಿಸಿಕೊಟ್ಟರು.

ವ್ಯಾಸಂಗ ಪ್ರವಾಸಕ್ಕೆಂದು ವಿಜಾಪೂರಕ್ಕೆ ಹೋದಾಗ ಗೋಲಗುಮ್ಮಟದ ಜೊತೆಗೆ ವಚನ ಗುಮ್ಮಟವೆಂದು ಖ್ಯಾತರಾದ ಫ.ಗು.ಹಳಕಟ್ಟಿಯವರನ್ನು ಸಂದರ್ಶಿಸಿ ಚರ್ಚೆಮಾಡಿ ಬಂದರು. ಕಾಲೇಜಿನಲ್ಲಿ ಅಳವಂಡಿ ಚೆನ್ನವೀರಸ್ವಾಮಿ, ಇನಾಮದಾರ, ಕುಕನೂರು ಕಲ್ಮಠದ ವಿರೂಪಾಕ್ಷಯ್ಯನವರು ಇದ್ದರು. ಇವರೊಂದಿಗೆ ಪರಿಚಯ ಸಂಪರ್ಕ ಬೆಳೆಯಿತು. ಕಾಲೇಜು ಯೂನಿಯನ್ನಿನಲ್ಲಿ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಅಂತರ ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸುವದಕ್ಕಾಗಿ ಹೈದ್ರಾಬಾದನ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಹೋಗಿದ್ದರು. ವಿಶ್ವವಿದ್ಯಾಲಯದ ಭವ್ಯ ಕಟ್ಟಡಗಳು ಹಾಸ್ಟೆಲ್, ಮೊದಲಾದವುಗಳನ್ನು ಮೊದಲ ಬಾರಿಗೆ ಕಂಡರು.

ಕಾಲೇಜಿನ ಮೊದಲ ವರ್ಷದ ವಿದ್ಯಾರ್ಥಿವೇತನ ಮಂಜೂರಾಗಿತ್ತು ಮಿತ್ರರ ಒತ್ತಾಯಕ್ಕೆ ಖಾದಿ ಬಿಟ್ಟು ರೇಷ್ಮೆ ಅಂಚಿನ ಪಂಚೆ, ಕೋಟು, ಶರಟು, ಬೂಟುಗಳನ್ನು ಖರೀದಿಸಿದರು. ತಂದೆ, ತಾಯಿ, ತಮ್ಮ, ತಂಗಿಯರಿಗೆ ಬಟ್ಟೆ ತೆಗೆದುಕೊಂಡು ದ್ಯಾಂಪುರಕ್ಕೆ ಹೋದರು. ಆಗ ಮನೆಯವರೆಲ್ಲ ಸಂತಸಪಟ್ಟರು. ಮಗ ತಮಗಾಗಿ, ಕಲಿಯುತ್ತಿರುವಾಗಲೇ ಹೊಸ ವಸ್ತ್ರಗಳನ್ನು ತಂದನೆಂದು ಎಲ್ಲರಿಗೂ ತೋರಿಸಿದರು. ಸಿದ್ಧಯ್ಯನವರು ಉಳಿದ ಹಣವನ್ನು ತಂದೆಯವರಿಗೆ ಕೊಟ್ಟು ನಮಸ್ಕರಿಸಿದರು. ಹೀಗೆ ಸಿದ್ಧಯ್ಯ ಮನೆಯವರೆಲ್ಲರ ಪ್ರೀತಿಗೆ ಪಾತ್ರರಾಗಿದ್ದರು.

ಕಾಲೇಜಿನ ಎರಡನೆಯ ವರ್ಷದಲ್ಲಿಯೂ ಪ್ರಥಮ ಸ್ಥಾನ ಪಡೆಯಬೇಕೆಂದು ಅಧ್ಯಯನ ಮಾಡತೊಡಗಿದರು. ಸಿದ್ಧಯ್ಯ ಮತ್ತು ಗುರುಗಳು ನಿರೀಕ್ಷಿಸಿದ್ದ ಸಮಯ ಬರುವಷ್ಟರಲ್ಲಿ ದೇಹ ಅನಾರೋಗ್ಯದಿಂದ ಕೈಕೊಟ್ಟಿತು. ಪರೀಕ್ಷಾ ಶುಲ್ಕ ಕಟ್ಟಿದ್ದರೂ ಪರೀಕ್ಷೆಗೆ ಹೋಗದಂತಾಯಿತು. ಕಲಬುರ್ಗಿಯಲ್ಲಿ ಪ್ರಾಚಾರ್ಯರು ವೈದ್ಯರ ಬಳಿ ತೋರಿಸಿ ಚಿಕಿತ್ಸೆ ಮಾಡಿಸಿದರು. ಆದರೂ ಗುಣ ಹೊಂದಲಿಲ್ಲ. ಆಗ ದ್ಯಾಂಪುರಕ್ಕೆ ಕಳಿಸಿಕೊಟ್ಟರು. ತಂದೆಯವರು ದ್ಯಾಂಪುರ, ಕುಕನೂರು, ಗದಗಿನ ವೈದ್ಯರುಗಳಿಗೆ ತೋರಿಸಿದರು. ಬೆಳಗಾವಿಗೆ ಹೋಗಿ ಎಕ್ಸರೇ ತೆಗೆಸಿದರು. ತಂದೆ ತಾಯಿಯವರಿಗೆ ತೊಂದರೆ ಕೊಡಬಾರದೆಂದು ಸಿದ್ಧಯ್ಯ ತಮ್ಮಲ್ಲಿದ್ದ ೫೦ರೂ ತೆಗೆದುಕೊಂಡು ಮದನಪಲ್ಲಿಗೆ ಹೋದರು. ಅಲ್ಲಿ ವೈದ್ಯರು "ನಿಮಗೇನೂ ಆಗಿಲ್ಲ ಆರೋಗ್ಯವಾಗಿದ್ದೀರಾ," ಎಂದು ಹೇಳಿ ಕಳಿಸಿದರು. ಹೀಗೆ ಅನಾರೋಗ್ಯದಿಂದಾಗಿ ಒಂದು ಶೈಕ್ಷಣಿಕ ವರ್ಷ ಹಾಳಾಯಿತು. ಪರೀಕ್ಷಾ ಶುಲ್ಕ ಕಟ್ಟಿ ಮನೆಯಲ್ಲಿದ್ದು ಓದಬೇಕೆಂದರು. ಆಗ ಗಂಗಾವತಿಯ ಮಿತ್ರರು ಹಂಪೆಯ ಪ್ರವಾಸಕ್ಕೆ ಹೋಗಬೇಕು ಎಂದು ಪತ್ರ ಬರೆದರು. ಇವರಿಗೆ



ಹಂಪಿ ನೋಡುವ ಉತ್ಸಾಹ, ಹೊರಟರು. ಸಂಪೂರ್ಣ ಗುಣವಾಗದೇ ಇದ್ದದ್ದರಿಂದ ಚಳಿ ಜ್ವರ ಮರಳಿ ಬಂದಿತು. ತಂದೆ ಇವರಿಗಾಗಿ ಗದಗಿನಲ್ಲಿ ಮನೆ ಮಾಡಿ ತೋರಿಸಿದರು. ತಾಯಿ ಈ ಸಂದರ್ಭದಲ್ಲಿ ತನ್ನ ಒಡವೆಗಳನ್ನು ಮಾರಿ ಮಗನ ಔಷಧೋಪಚಾರಕ್ಕೆ ಖರ್ಚು ಮಾಡಿದರಂತೆ. ಮತ್ತೆ ಗುಣಮುಖರಾಗಿ ದ್ಯಾಂಪುರಕ್ಕೆ ಬಂದು ಓದಲು ತೊಡಗಿದರು.

ಸಿದ್ಧಯ್ಯನವರ ಸೋದರ ಮಾವನ ಮಗಳು, ಹುಟ್ಟಿದಂದಿನಿಂದ ಸಿದ್ಧಯ್ಯನವರೆ ಪತಿ ಎಂದು ಬೆಳೆದವಳು. ಮನೆಯ ಹಿರಿಯರೆಲ್ಲ ಮಾವನ ಮಗಳನ್ನು ಮದುವೆಯಾಗಲು ಒತ್ತಾಯಿಸಿದರು. ಆದರೆ ಸಿದ್ಧಯ್ಯನವರಿಗೆ ಓದುವ ಆಶೆ. ಮದುವೆಯಾದ ಮೇಲೆ ಓದಬಹುದಲ್ಲ, ಎಂದು ಹಿರಿಯರು, ಏನು ಮಾಡುವದು ಎಂದು ಸಿದ್ಧಯ್ಯ ವಿಚಾರ ಮಾಡುತ್ತಿರುವಾಗ ತಕ್ಷಣ ಶ್ರೀ ಹರ್ಡೇಕರ ಮಂಜಪ್ಪನವರ ನೆನಪಾಗುವುದು. ಅವರು ಒಮ್ಮೆ "ಆಲಮಟ್ಟಿಗೆ ಬಾ" ಎಂದಿದ್ದರಂತೆ. ಆದ್ದರಿಂದ ಇದೇ ಯೋಗ್ಯ ಸಮಯ, ನಾನು ಅಲ್ಲಿಗೆ ಹೋಗಲೇಬೇಕು ಎಂದು ಯಾರಿಗೂ ಹೇಳದೆ ತಮ್ಮನಿಗೆ ಮಾತ್ರ ಹೇಳಿ ಅಲ್ಲಿಂದ ಹೊರಟರು.

## ಹರ್ಡೇಕರ ಮಂಜಪ್ಪನವರ ಪ್ರಭಾವ

ಆಲಮಟ್ಟಿ ಆಶ್ರಮದಲ್ಲಿ ಪ್ರತಿದಿನ ಅರಿವಿನ ತೊರೆಯಲ್ಲಿ ಮಿಂದು ಮಡಿಯಾಗ ತೊಡಗಿದರು. ಮಂಜಪ್ಪನವರ ವ್ಯಕ್ತಿತ್ವದಿಂದ ಪ್ರಭಾವಕ್ಕೊಳಗಾದರು. ಅವರ ಗ್ರಂಥ ಭಂಡಾರದಲ್ಲಿದ್ದ ಮಹತ್ವದ ಕೃತಿಗಳನ್ನು ಓದಿದರು. ಆಂಗ್ಲಸಾಹಿತ್ಯ, ವಚನಸಾಹಿತ್ಯ, ಪತ್ರಿಕೋದ್ಯಮ, ಅನುವಾದ, ಶಿಕ್ಷಣಪದ್ಧತಿ ಗ್ರಾಮೋದ್ಯೋಗಗಳ ಪರಿಚಯ, ಆರೋಗ್ಯ ವಿಜ್ಞಾನ, ದೇಶದ ಸಮಸ್ಯೆಗಳ ತಿಳುವಳಿಕೆ ಹೀಗೆ ಹಲವಾರು ವಿಷಯಗಳ ಬಗ್ಗೆ ಜ್ಞಾನ ಪಡೆದುಕೊಂಡರು. ಆಶ್ರಮದಲ್ಲಿದ್ದಾಗ ಸಿದ್ಧಯ್ಯನವರು 'ಕಾವ್ಯದೇವಿ' ಎಂಬ ಕವನ ಬರೆದರು ಈ ಕವನದ ಕೊನೆಯ ಎರಡು ಸಾಲು ಅತ್ಯಂತ ಮಹತ್ವದವಾಗಿದ್ದವು. ಆ ಸಾಲುಗಳಲ್ಲಿರುವ ಕಾವ್ಯಾನಂದವೆಂಬುದು ಸಿದ್ಧಯ್ಯನವರ ಕಾವ್ಯನಾಮವಾಯಿತು.

**"ನಿನ್ನಾತ್ಮವಾನಂದ ನನ್ನಾತ್ಮ ಕಾವ್ಯ**
**ಇಂತು ಕಾವ್ಯಾನಂದ ನಾಮ ಸುಶ್ರಾವ್ಯ"**

ಅಣ್ಣನವರ ಮಾರ್ಗದರ್ಶನದಲ್ಲಿ ಸಿದ್ಧಯ್ಯನವರು ಮುಪ್ಪಿನ ಷಡಕ್ಷರಿಯ ಹಾಡುಗಳ ಶುದ್ಧ ಹಸ್ತಪ್ರತಿಯನ್ನು ತಯಾರಿಸಿಕೊಟ್ಟರು. ಅದನ್ನು "ಸುಬೋಧ ಸಾರ"ವೆಂಬ ಹೆಸರಿನಲ್ಲಿ ಮಂಜಪ್ಪನವರು ಪ್ರಕಟಿಸಿದರು. ಅದಕ್ಕೆ ಮುನ್ನುಡಿಯನ್ನು ಸಿದ್ಧಯ್ಯ ನವರಿಂದಲೇ ಬರೆಸಿದರು. ಹೀಗೆ ಸಿದ್ಧಯ್ಯನವರು, ಕರ್ನಾಟಕ ಗಾಂಧಿ ಎಂದು

ಖ್ಯಾತರಾದ ಹರ್ಡೇಕರ ಮಂಜಪ್ಪನವರ ಬಳಿಯಲ್ಲಿದ್ದ ಆ ಕೆಲ ತಿಂಗಳುಗಳು ಅವರ ಜೀವನದಲ್ಲಿ ಮಹತ್ವದ ಹಾಗೂ ಎಂದೂ ಮರೆಯದಂತಹ ದಿನಗಳಾಗಿದ್ದವು.

ಆಲಮಟ್ಟಿಯಿಂದ ಬಂದು ಪರೀಕ್ಷೆಗಾಗಿ ಹೈದರಾಬಾದಿಗೆ ಹೋದರು. ಪರೀಕ್ಷಾ ಫಲಿತಾಂಶ ಪ್ರಕಟವಾಗಿ ಸಿದ್ಧಯ್ಯನವರು ವಿಶ್ವವಿದ್ಯಾಲಯಕ್ಕೆ ಮೂರನೆಯವರಾಗಿ ಕನ್ನಡ ಸಂಸ್ಕೃತಗಳಲ್ಲಿ ಪ್ರಥಮರಾಗಿ ಪಾಸಾಗಿದ್ದರು. ಮುಂದಿನ ಓದಿಗಾಗಿ ಹೈದರಾಬಾದಕ್ಕೆ ಹೋಗುವ ಸಿದ್ಧತೆಗಳು ನಡೆದವು. ಸರಕಾರಿ ಕಾಲೇಜಿನ ಪ್ರಾಚಾರ್ಯರಾದ ಹಕ್ಕಾನಿ ಸಾಹೇಬರು ಸಿದ್ಧಯ್ಯನವರ ಮುಂದಿನ ಓದಿಗೂ ಸಹಕರಿಸಿ ಹೈದರಾಬಾದನ ಆರ್ಟ್ಸ್ ಕಾಲೇಜಿನ ಪ್ರಾಚಾರ್ಯರಿಗೆ, "ಈ ವಿದ್ಯಾರ್ಥಿಗೆ ತಾವೇನು ಸಹಾಯ ಮಾಡಿದರೂ ಸಾರ್ಥಕವಾಗುವದೆಂದು" ಪತ್ರ ಬರೆದಿದ್ದರು. ಹೀಗೆ ಸಿದ್ಧಯ್ಯನವರು ವಿದ್ಯಾರ್ಥಿ ದೆಸೆಯಲ್ಲಿಯೇ ಎಲ್ಲರಿಗೂ ಪ್ರಿಯವಾದ ವ್ಯಕ್ತಿತ್ವವನ್ನು ಪಡೆದಿದ್ದರು.

## ಹೈದರಾಬಾದನಲ್ಲಿ ವಿದ್ಯಾಭ್ಯಾಸ

ಹಕ್ಕಾನಿ ಸಾಹೇಬರ ಪ್ರೋತ್ಸಾಹ ಹಾಗೂ ಶಿಫಾರಸ್ಸು ಪತ್ರದಿಂದಾಗಿ ಹುಸೇನ್ ಅಲಿ ಖಾನ್ ಸಾಹೇಬರು ಸಿದ್ಧಯ್ಯನವರಿಗೆ ಏನುಬೇಕು ಹೇಳು ಎಂದಾಗ ಶುಲ್ಕ ಮಾಫಿ ಮಾಡಿದರೆ ಅನುಕೂಲವಾಗುವುದೆನ್ನಲು ಅದನ್ನು ಮಾಡಿಕೊಡುವರು.

ಹೈದರಾಬಾದಿನಲ್ಲಿ ಅಧ್ಯಯನ ಮಾಡುವಾಗ ಅನೇಕ ಹಿರಿಯ ಸಾಹಿತಿಗಳಿಂದ ಪ್ರಭಾವಿತರಾದರು. ಜಿ.ಪಿ.ರಾಜರತ್ನಂ, ತೀ.ನಂ.ಶ್ರೀ, ಬಿಎಂಶ್ರೀಯವರಲ್ಲದೆ ಪ್ರೊ.ಡಿ.ಕೆ. ಭೀಮಸೇನರಾಯರ, ಮಾಸ್ತಿ ನರಸಿಂಗರಾಯರ ನೆಚ್ಚಿನ ವಿದ್ಯಾರ್ಥಿಯಾಗಿದ್ದರು. ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದು ಕವಿ ಸಮ್ಮೇಳನದಿಂದ ತುಂಬ ಪ್ರಭಾವಿತರಾದರು. ಕವಿತೆ ಬರೆಯುವುದು, ಮಿತ್ರರೆದುರು ಓದುವ ಕಾರ್ಯ ನಿರಂತರವಾಗಿ ಮುಂದುವರೆದಿತ್ತು. ಹೈದರಾಬಾದಿನಲ್ಲಿ ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗುವುದೆಂದು ಕೇಳಿ ತುಂಬಾ ಸಂತೋಷಪಟ್ಟರು. ಸಮ್ಮೇಳನದ ಅಧ್ಯಕ್ಷತೆ ಎ.ಆರ್.ಕೃಷ್ಣಶಾಸ್ತ್ರಿ ವಹಿಸಿದ್ದರು. ಕವಿಸಮ್ಮೇಳನ ಸಿದ್ಧಯ್ಯನವರಿಗೆ ಅತ್ಯಂತ ಮಹತ್ವದ ಘಟ್ಟವಾಗಿತ್ತು. ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ವಿ.ಕೃ.ಗೋಕಾಕ ಮೊದಲಾದ ಹಿರಿಯ ಕವಿಗಳೊಂದಿಗೆ ಸಿದ್ಧಯ್ಯ ಹಾಗೂ ಅವರ ಗೆಳೆಯರು ಕವನ ಓದಿದರು. ಆಗ ಮಾಸ್ತಿಯವರು ಸಿದ್ಧಯ್ಯನವರನ್ನು ಬದಿಗೆ ಕರೆದು "ಚೆನ್ನಾಗಿ ಬರೆಯುತ್ತೀಯಪ್ಪ, ಬರೆಯುವದನ್ನು ಬಿಡಬೇಡ, ಮುಂದುವರಿಸು, ನೀನು ಒಳ್ಳೆಯ ಕವಿಯಾಗುವಿ," ಎಂದು ಪ್ರೋತ್ಸಾಹಿಸಿದರು. ಸಿದ್ಧಯ್ಯನವರೊಂದಿಗೆ ಆಗ ಕಲಾನಂದ, ಅಮರಾನಂದರು ಕವನಗಳನ್ನು ಸುಶ್ರಾವ್ಯವಾಗಿ ಹಾಡಿದ್ದರು.



ಸಿದ್ಧಯ್ಯನವರು ಬಿ.ಎ ಪರೀಕ್ಷೆಯಲ್ಲಿ ಕನ್ನಡ, ಇಂಗ್ಲೀಷ್, ಸಂಸ್ಕೃತ ಮೂರು ವಿಷಯಗಳಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮರಾಗಿ ಪಾಸಾದರು. ತಂದೆ ಕಲ್ಲಿನಾಥ ಶಾಸ್ತ್ರಿಗಳು ತುಂಬಾ ಸಂತೋಷಪಟ್ಟರು. ತಮ್ಮ ಕನಸು ನನಸಾಗುವ ಕಾಲ ಬಂದಿತೆಂದು ಹಿಗ್ಗಿದರು. ಆಗ ಸರಕಾರಿ ಹುದ್ದೆಯನ್ನು ಬಯಸುವಂತಿರಲಿಲ್ಲವಾದ್ದರಿಂದ ವಕೀಲನಾಗಿ ಸ್ವತಂತ್ರವೃತ್ತಿ ಕೈಕೊಳ್ಳಲಿ ಎಂಬುದು ಅವರ ಅಭಿಲಾಷೆಯಾಗಿತ್ತು. ಸಿದ್ಧಯ್ಯನವರಿಗೆ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿಯಿದ್ದುದರಿಂದ ಎಂ.ಎ ಮಾಡಬೇಕೆಂದಿದ್ದರು. ಆದರೆ ತಂದೆಯವರ ಆಸೆಯಂತೆ ಎಲ್.ಎಲ್.ಬಿ.ಗೆ ಸೇರಿದರು. ಆ ವರ್ಷ ಪರೀಕ್ಷೆಯಲ್ಲಿ ಪಾಸಾಗಲಿಲ್ಲ. ಊರಿನಲ್ಲಿ ತಂಗಿ ವೀರಾಂಬೆಗೆ ಅನಾರೋಗ್ಯವುಂಟಾಗಿತ್ತು. ಸಿದ್ಧಯ್ಯನವರಿಗೆ ಶಿಷ್ಯ ವೇತನವು ದೊರಕುತ್ತಿರಲಿಲ್ಲ. ಆರ್ಥಿಕ ಪರಿಸ್ಥಿತಿ ತುಂಬ ಗಂಭೀರವಾಗಿತ್ತು. ವಿದ್ಯೆಯನ್ನು ನಿಲ್ಲಿಸಿ ನೌಕರಿ ಮಾಡಬೇಕೆಂದರು. ದೇಶದ ತುಂಬೆಲ್ಲಾ ಚಲೇಜಾವ್ ಚಳುವಳಿ ನಡೆದಿತ್ತು. ಮಹಾತ್ಮಾ ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ' ನಿನಾದ ಎಲ್ಲೆಡೆ ತುಂಬಿತ್ತು ಸಿದ್ಧಯ್ಯನವರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಸ್ವಾತಂತ್ರ್ಯ ಚಳುವಳಿ ಯಲ್ಲಿ ಭಾಗವಹಿಸಬೇಕೇ ಬೇಡವೇ ಎಂಬ ಗೊಂದಲದಲ್ಲಿದ್ದರು.

ಮನೆಗೆ ಹಿರಿಯ ಮಗನಾಗಿದ್ದರಿಂದ ಜವಾಬ್ದಾರಿ ಅರಿತುಕೊಂಡು ಯಾವುದಾದರೂ ನೌಕರಿ ಮಾಡಬೇಕೆಂದರು. ಅಷ್ಟರಲ್ಲಿ ೧೬ ತಹಸೀಲ್ದಾರ ಹುದ್ದೆಗಳಿಗೆ ಅರ್ಜಿ ಕರೆದಿದ್ದರು, ಅರ್ಜಿ ಹಾಕಿ ನೋಡೋಣ ಸಂದರ್ಶನಕ್ಕೆ ಕರೆಬಂದರೂ ಬರಬಹುದು ಎಂದು ಅನುಮಾನದಿಂದಲೇ ಅರ್ಜಿ ಹಾಕಿದ್ದರು. ಸಿದ್ಧಯ್ಯನವರ ಸುದೈವವೇ ಅಂಥದು. ಯಾವುದೇ ಜನ ಬಲ, ಧನ ಬಲವಿಲ್ಲದೆ ಅರ್ಹತೆಯನ್ನೇ ಆಧಾರವಾಗಿಸಿ ಸಂದರ್ಶನಕ್ಕೆ ಹೋದರು. ಆಶ್ಚರ್ಯವೆನ್ನುವಂತೆ ನಾಲ್ಕು ದಿನಗಳ ಸಂದರ್ಶನದ ನಾಲ್ಕು ಸುತ್ತಿನಲ್ಲೂ ಸೆಲೆಕ್ಟ್ ಆಗಿ ಐದನೆಯ ಸುತ್ತಿನಲ್ಲಿ ಆಯ್ಕೆಯಾದರು. ತರಬೇತಿಗೆ ಕರೆಯೂ ಬಂದಿತು.

## ತಹಸೀಲ್ದಾರ ಹುದ್ದೆಗೆ ಆಯ್ಕೆ

ಸಿದ್ಧಯ್ಯನವರು ತಮ್ಮ ಗುರುಗಳಿಂದ ಶಿಫಾರಸು ಪತ್ರಗಳನ್ನು ತಂದರು. ಪ್ರೊ.ಹುಸೇನ ಅಲಿ ಖಾನ ಸಾಹೇಬರು ಹಾಗೂ ತಾಜಿ ಸಾಹೇಬರು ಒಳ್ಳೆಯ ರೀತಿಯಿಂದ ಬರೆದು ಕೊಟ್ಟಿದ್ದರು. ದಿವಾನ ಸಂಗಯ್ಯನವರು ಅಧಿಕಾರಿಗಳಾದ ಕುರೇಷಿ ಸಾಹೇಬರಿಂದ ಸತ್ಕುಟುಂಬ ಸಂಜಾತವೆಂಬ ಸರ್ಟಿಫಿಕೇಟ ಕೊಡಿಸಿದರು. ಆಗ ಸಾಲಾರ ಜಂಗ ನವಾಬ ಬಹದ್ದೂರರಿಗೂ ಮತ್ತು ಕಂದಾಯ ಮಂತ್ರಿ ಗ್ರಿಗನ್ಸ್, ಹಾಗೂ ಕಂದಾಯ ಇಲಾಖೆಯ ಡೈರೆಕ್ಟರ ಲಿಲ್ಲಿ ಇವರಲ್ಲಿ ಅನ್ಯೋನ್ಯ ಸಂಬಂಧ ವಿದೆಯಂದು ಪತ್ರ ಪಡೆಯಲು ಸಿದ್ಧಯ್ಯನವರಿಗೆ ಸಲಹೆ ಮಾಡಿದರು. ಅದರಂತೆ ಸಿದ್ಧಯ್ಯನವರು ಧೈರ್ಯಮಾಡಿ ಕೇಳಿದರು. ಆಗ ಇಲ್ಲ ಎನ್ನದೇ ಸಂತೋಷದಿಂದ

ಪತ್ರ ನೀಡಿದರು ಆ ಪತ್ರದ ಮೇಲೆ "My Trust is in My God" ಎಂದು ಬರೆದಿತ್ತು. ಅದನ್ನು ನೋಡಿ ಸಿದ್ಧಯ್ಯನವರು ನನಗೂ ಯಾಕೆ ಈ ಸೂತ್ರ ಅನ್ವಯಿಸಬಾರದು ಎಂದು ಆ ಶಿಫಾರಸು ಪತ್ರಗಳನ್ನು ಅಂಚೆಪೆಟ್ಟಿಗೆಗೆ ಹಾಕದೆ ಮರಳಿ ಮನೆಗೆ ತಂದರಂತೆ. ಹೀಗೆ ಅರ್ಜಿ ಹಾಕುವಾಗ ಅನೇಕ ಅಡೆತಡೆಗಳನ್ನೆದುರಿಸಬೇಕಾಗುವದು. ಮುಲ್ಕಿ ಸರ್ಟಿಫಿಕೇಟ್ ಪಡೆಯುವದಕ್ಕೆ ಪಟ್ಟ ಕಷ್ಟ ನೆನೆಸಿಕೊಳ್ಳುತ್ತಾರೆ. ಒಬ್ಬ ಅಧಿಕಾರಿ ಮನಸ್ಸು ಮಾಡಿದರೆ ಕೆಲಸವನ್ನು ಎಲ್ಲಿ ಬೇಕಾದರೂ ಮಾಡಬಹುದೆಂಬ ನಿದರ್ಶನವನ್ನಿಲ್ಲಿ ಕಾಣಬಹುದಾಗಿದೆ. ಕಾರ್ಯಾಲಯದ ಹೊರಗೆ ಕೂಡ ಅಂದರೆ ರೈಲು ಹತ್ತಿ ಹೋಗುತ್ತಿದ್ದ ಅಬ್ದುಲ್ ಸತ್ತಾರ್ ಸಾಹೇಬರು ಓಡೋಡಿ ಬರುವ ಸಿದ್ಧಯ್ಯ ಹಾಗೂ ಗುಮಾಸ್ತರನ್ನು ಕಂಡು ಸಿದ್ಧಯ್ಯನನ್ನು ರೈಲಿನಲ್ಲಿ ಎಳೆದುಕೊಂಡು ಸಹಿ ಮಾಡಿ ಮುಂದಿನ ನಿಲ್ದಾಣದಲ್ಲಿಳಿಸಿ ಸ್ಟೇಶನ್ ಮಾಸ್ತರರಿಗೆ ಹೇಳಿ ಕಳಿಸುವ ಸೌಜನ್ಯ ಹೊಂದಿದ್ದರು. ಎಲ್ಲ ಅಧಿಕಾರಿಗಳು ಇದೇ ರೀತಿಯಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಸಿದ್ಧಯ್ಯನವರು ಈ ಘಟನೆಯನ್ನು ನೆನಪಿಸಿಕೊಳ್ಳುತ್ತಿದ್ದರು.

ಭಾರತ ದೇಶದಲ್ಲಿ ಆಗ "ಭಾರತ ಬಿಟ್ಟು ತೊಲಗಿ" ಆಂದೋಲನ ಪ್ರಾರಂಭವಾಗಿತ್ತು. ಗಾಂಧೀಜಿಯವರ "ಮಾಡು ಇಲ್ಲವೆ ಮಡಿ" ಮಂತ್ರಗಳನ್ನು ಕೇಳಿದಾಗ ಸಿದ್ಧಯ್ಯನವರು ವಿಚಲಿತರಾಗುತ್ತಿದ್ದರು. ಹೈದ್ರಾಬಾದ ಕರ್ನಾಟಕದಲ್ಲಿಯೂ ಶ್ರೀ ರಮಾನಂದ ತೀರ್ಥರು ರಾಜಕೀಯ ಸ್ವಾತಂತ್ರ್ಯಾಂದೋಲನ ಪ್ರಾರಂಭಿಸಿದ್ದರು. ಎರಡನೆಯ ಮಹಾಯುದ್ಧ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಹೈದ್ರಾಬಾದ ಕರ್ನಾಟಕದ ನಿಜಾಮನ ಸಮಸ್ಯೆ ಇವೆಲ್ಲವುಗಳಿದ್ದರೂ ಸಿದ್ಧಯ್ಯ ಮನೆಗೆ ಹಿರಿಯ ಮಗನಾಗಿ ತಂದೆ ತಾಯಿಗಳನ್ನು ಬಿಟ್ಟು ಹೋಗುವ ಮನಸ್ಸಿಲ್ಲದೆ, ದ್ವಂದ್ವದಲ್ಲಿದ್ದರು. ಸಿದ್ಧಯ್ಯನವರ ತಮ್ಮ ಅನ್ನದಾನಿ ಸ್ವಾತಂತ್ರ್ಯ ಹೋರಾಟಗಾರರ ಶಿಬಿರದಲ್ಲಿ ಭಾಗವಹಿಸಿದ್ದರು.

ತಹಸೀಲ್ದಾರ ಹುದ್ದೆಯ ಸಂದರ್ಶನಕ್ಕೆ ಕರೆ ಬಂದಿತ್ತು. ಇನಾಂದಾರ ಹಾಗೂ ಸಿದ್ಧಯ್ಯನವರು ಅರಳೆಯ ಕೋಟು, ಟೈ, ಬೂಟು ಖರೀದಿಸಿದರು. ಬೂಟಿನ ಡಬ್ಬಿಯ ಮೇಲೆ ಕ್ರಮವಾಗಿ ಸ್ಟುಡೆಂಟ್, ತಹಸೀಲ್ದಾರ ಎಂದು ಬರೆದಿತ್ತು. ಇಬ್ಬರೂ ಅದನ್ನು ಕಂಡು ಸಂತಸಪಟ್ಟರು. "ನೀನೆ ಆಗುವಿ ತಹಸೀಲ್ದಾರ" ಎಂದು ಇನಾಂದಾರ ಹೇಳಿದರು. ಸಂದರ್ಶನದ ಮೊದಲ ದಿನ ಬಂದದ್ದಕ್ಕೂ ಸಾರ್ಥಕ ಎನ್ನಿಸಿತು. ಅನೇಕ ರೀತಿಯ ವೇಷಭೂಷಣ ಟೊಪ್ಪಿಗೆಗಳು ನೋಡುವದಕ್ಕೆ ಸಿಕ್ಕವು. ಮರುದಿನ ೯೬ ಜನರು ಬರಬೇಕೆಂದು ಪ್ರಕಟಿಸಿದರು. ಆ ನಂತರ ೩೨ ಜನರಿಗೆ ಕರೆ ಬಂದಿತು. ಅಂದು ಕೂಡ ಸಿದ್ಧಯ್ಯನವರಿದ್ದರು ಐದನೆಯ ಬಾರಿಗೆ ಸಿದ್ಧಯ್ಯನವರೊಬ್ಬರನ್ನು ಕರೆಸಿದರು. ವಯಸ್ಸೆಷ್ಟು ಎಂದು ಕೇಳಿದರು ಇಪ್ಪತ್ನಾಲ್ಕು ಎಂದಾಗ ಇವನ ವಯಸ್ಸು ಮೀರುತ್ತಿರುವದರಿಂದ ಇವನನ್ನೇ ತೆಗೆದುಕೊಳ್ಳಬೇಕೆಂದರು. ಅನಾರೋಗ್ಯದ ಕಾರಣ ಒಂದೆರಡು



ವರ್ಷ ವಿದ್ಯಾಭ್ಯಾಸ ಮುಂದುವರಿಸಲಾಗದಿದ್ದರೂ ಈಗ ಸಹಾಯಕ್ಕೆ ಬಂದಿತು. ತಹಸೀಲ್ದಾರ ಹುದ್ದೆಗೆ ಆಯ್ಕೆಯಾದರು.

ಒಂದೆಡೆ ತಹಸೀಲ್ದಾರ ಹುದ್ದೆಯ ಆದೇಶ ಪಡೆದು ಸಂತಸವಾದರೆ ಸಿದ್ಧಯ್ಯನವರು ತಮ್ಮ ತಂಗಿ ವೀರಾಂಬೆ ಅನಾರೋಗ್ಯದಿಂದಾಗಿ ಮರಣ ಹೊಂದಿದ ವಾರ್ತೆ ಕೇಳಿ ಬಹಳ ನೊಂದುಕೊಂಡರು. ಒಂದು ವಾರದಲ್ಲಿ ತರಬೇತಿಗೆ ಹೋಗಬೇಕಾಗಿತ್ತು. ಅಷ್ಟರಲ್ಲಿ ಊರಿಗೆ ಹೋಗಿ ನೊಂದ ತಂದೆ ತಾಯಿಗಳನ್ನು ಭೇಟಿಯಾಗಿ ತಂಗಿಯ ಸಮಾಧಿ ನೋಡಬೇಕೆಂದರು. ಬನ್ನಿಕೊಪ್ಪ ನಿಲ್ದಾಣದಲ್ಲಿಳಿದರು. ಸಿದ್ಧಯ್ಯನವರ ಮಿತ್ರ ಇಟಗಿಯ ಶ್ರೀ. ಬಿ.ಎ.ಪಾಟೀಲರು ತಮ್ಮ ಗಾಡಿಯನ್ನು ಕಳಿಸಿದ್ದರು. ಅದರಲ್ಲಿ ದ್ಯಾಂಪೂರಕ್ಕೆ ಹೋದರು. ತಾಯಿಗೆ ಒಂದೆಡೆ ಮಗ ಅಧಿಕಾರಿಯಾದನೆಂಬ ಸಂತಸ. ಮತ್ತೊಂದೆಡೆ ಮಗಳ ಸಾವಿಗಾಗಿ ದುಃಖವಾಗಿತ್ತು. ಸಿದ್ಧಯ್ಯನವರು ತಂಗಿಯ ಸಮಾಧಿಗೆ ಹೋಗುವಾಗ ಹಲವಾರು ಜನ ಇವರೊಡನೆ ಬಂದಿದ್ದರು. ಕಂಬನಿಗರೆದರು. ಜನರೆಲ್ಲ "ಅಣ್ಣನ ಸಡಗರ ಒಂದು ದಿನಾರ ನೋಡಿ ಹೋಗಬೇಕಾಗಿತ್ತು ಸಣ್ಣವ್ವ" ಎಂದಾಗ "ಹೌದಮ್ಮ ಅಣ್ಣನ ಸಡಗರ ನೋಡುವ ಭಾಗ್ಯ ಅವಳಿಗೂ ಇರಲಿಲ್ಲ. ನನಗೂ ಕೊನೆಯ ದಿನಗಳಲ್ಲಿ ತಂಗಿಯ ಬಳಿ ಇರುವ ಭಾಗ್ಯ ಇರಲಿಲ್ಲ" ಎಂದು ಹೇಳುತ್ತ ಸಿದ್ಧಯ್ಯನವರು ಅತ್ತರು. ಕೊನೆಗೆ ಎಲ್ಲರಿಗೂ ಸಂತೈಸಿ ಅಂದೇ ರಾತ್ರಿ ಹೈದರಾಬಾದಿಗೆ ಬಂದರು. ರೈಲಿನಲ್ಲಿ ರಾತ್ರಿಯೆಲ್ಲ ತಂಗಿಯ ನೆನಪಿನಿಂದ ದುಃಖಿಪಟ್ಟರು. ಮರುದಿನ ತಮ್ಮ ಏಳ್ಗೆ ಬಯಸಿದವರೆಲ್ಲರಿಗೆ ಭೇಟಿಯಾಗಿ ತಮಗೆ ನೌಕರಿ ದೊರೆತ ಬಗ್ಗೆ, ತಂಗಿಯ ಮರಣದ ಬಗ್ಗೆ ಹೇಳಿದರು.

**

# ೪. ಸರ್ಕಾರಿ ಸೇವೆ, ಸಾಹಿತ್ಯಿಕ ಹಾಗೂ ಸಾಮಾಜಿಕ ಸೇವೆ

ತರಬೇತಿ, ಒಂದು ತಿಂಗಳು ದೇವನಿ ಹಾಗೂ ಎರಡು ತಿಂಗಳು ಹೈದ್ರಾಬಾದನಲ್ಲಿತ್ತು ನಾಂದೇಡಕ್ಕೆ ತಾಲೂಕದಾರರ ಭೂಮಿ ದಾಖಲೆಗಳ ಸಹಾಯಕರನ್ನಾಗಿ ೧೯೪೪ರಲ್ಲಿ ನೇಮಿಸಿದರು. ಇದನ್ನು ನೋಡಿ ಸಿದ್ಧಯ್ಯನವರು ಶ್ರೀ ಜಹೀರ್ ಅಹ್ಮದ್ ಸಾಹೇಬರನ್ನು ಕೇಳಿದಾಗ, ಅವರು "ಈಗ ಯುದ್ಧಕಾಲ. ತಹಸೀಲ್ದಾರ ಕೆಲಸ ತುಂಬಾ ಕಠಿಣ. ಇದನ್ನು ಮಾಡಿ, ಮುಂದೆ ನಿಮಗೆ ಎಲ್ಲ ದೊರಕುವುವು" ಎಂದು ಸಮಾಧಾನ ಮಾಡಿದರು. ನಾಂದೇಡಕ್ಕೆ ಹೋದಾಗ ಸಿದ್ಧಯ್ಯನವರ ಮಿತ್ರ ರಾಮರಾಯರು ಅಲ್ಲಿಗೆ ತಹಸೀಲ್ದಾರರಾಗಿ ಬಂದರು. ಆಗ ಲೇವಿ ವಸೂಲಿ ಮಾಡಬೇಕೆಂದು ಸುತ್ತೋಲೆ ಹೊರಡಿಸಿದರು. ರಾಮರಾಯರು ಎಲ್ಲ ಗ್ರಾಮಗಳಿಂದ ಬೇಗನೆ ಲೇವಿ ವಸೂಲಿ ಮಾಡಬೇಕೆಂದು ಆತುರದ ತೀರ್ಮಾನ ತೆಗೆದುಕೊಂಡರು. ರೈತರು ಪ್ಲೇಗು, ಬರಗಾಲಗಳಿಂದಾಗಿ ಮೊದಲೇ ಸಂಕಟದಲ್ಲಿದ್ದರು. ಲೇವಿಯನ್ನು ಕಡ್ಡಾಯಗೊಳಿಸಿದಾಗ ವ್ಯಗ್ರರಾಗಿ ರಾಮರಾಯರ ಕೊಲೆ ಮಾಡಿದರು. ರಾಮರಾಯರು ಬೇಡ ಬೇಡವೆಂದರೂ ಅಲ್ಲಿಗೆ ಹೋಗಿ, ಉದ್ರಿಕ್ತ ಜನರ ಕೋಪದಿಂದಾಗಿ ಅನ್ಯಾಯವಾಗಿ ಕೊಲೆಗೀಡಾದರು. ಇದರಿಂದ ಸಿದ್ಧಯ್ಯನವರಿಗೆ ಬಹಳ ದುಃಖವಾಯಿತು. ಇದರ ವರದಿಯನ್ನು ಮೇಲಧಿಕಾರಿಗಳಿಗೆ ಬರೆದುಕೊಟ್ಟರು. ರಾಮರಾಯರ ಕೊಲೆಯನ್ನು ನೋಡಿ ಉಳಿದ ಅಧಿಕಾರಿಗಳು ಲೇವಿ ವಸೂಲಿ ಮಾಡಲು ಹೋಗಲಿಲ್ಲ. ಹದಗಾಂವ್ ತಾಲೂಕಿನ ಜನರು ತಾವು ಲೇವಿ ಕೊಡುವುದಿಲ್ಲವೆಂದು ಘೋಷಿಸಿದರು. ಆಗ ಅಧಿಕಾರಿಗಳಿಗೆ ಇದೊಂದು ಸವಾಲಾಯಿತು. ಷಹಾಬುದ್ದೀನ್ ಖಾನ್ ಸಾಹೇಬರು ತುರ್ತು ಸಭೆ ಕರೆದು ಲೇವಿ ಸಂಗ್ರಹಿಸುವ ಗಂಡಸರು ಯಾರಿದ್ದೀರಿ ಎಂದು ಪ್ರಶ್ನಿಸಿದಾಗ ಎಲ್ಲರೂ ತಲೆ ತಗ್ಗಿಸಿದರು. ಸಿದ್ಧಯ್ಯನವರು ನಾನು ಸಂಗ್ರಹಿಸುವೆ ಎಂದರು. ನಿರ್ಗತಿಕರಿಗೆ ಪಡಿತರ ಚೀಟಿ ಕೊಡಲು ಅವಕಾಶಮಾಡಬೇಕು. ನನಗೆ ಒಬ್ಬ ಫೌಜದಾರ, ಒಬ್ಬ ಚಪರಾಸಿ ಇದ್ದರೆ ಸಾಕು ಎಂದರು. ಆಗ ಎಲ್ಲರೂ ಇವರಿಗೇನು ತಲೆ ಕೆಟ್ಟಿದೆಯೋ ರಾಮರಾಯನ ಸ್ಥಿತಿ ಇವರಿಗೂ ಆಗುತ್ತದೆ ಎಂದು ಏನೇನೋ ಮಾತನಾಡಿದರು. ಹಳ್ಳಿಗೆ ಹೋಗಿ ಹೇಳಿ ಕಳಿಸಿದರೂ ಯಾರೂ ಬಗಲಿಲ್ಲ ಸಿದ್ಧಯ್ಯನವರೇ ಮನೆಮನೆಗೆ ಹೋಗಿ ನಿಮಗೆ ನಾಳೆಗೆ ಜೋಳ, ಕಾಳು ಇವೆಯೇ ಎಂದು ಕೇಳಿದರು. ಇದುವರೆಗೆ



ಲೇವಿ ವಸೂಲಿ ಎಂದರೆ ಮನೆಯಲ್ಲಿರುವುದನ್ನು ದೋಚಿಕೊಂಡು ಹೋಗುತ್ತಿದ್ದರು. ನಿಮಗೆ ಕಾಳು ಇವೆಯೇ ಎಂದು ಯಾರೂ ಕೇಳಿರಲಿಲ್ಲ. ಅವರಿಗೆ ಆಶ್ಚರ್ಯವಾಯಿತು. ಬಡವರಿಗೆ ನಿರ್ಗತಿಕರಿಗೆ, ಪಡಿತರ ಚೀಟಿ ಇಲ್ಲದವರಿಗೆ, ಕಾರ್ಡುಗಳನ್ನು ಕೊಟ್ಟು ಆಹಾರ ಧಾನ್ಯ ತರುವಂತೆ ಹೇಳಿದರು. ಆಗ ಊರಿಂದ ಹೊರಗೆ ಹೋಗಿದ್ದ ಗಂಡಸರು ಚಾವಡಿಗೆ ಬಂದು ತಮ್ಮ ಪಾಲಿನ ಲೇವಿ ತಾವೆ ತಂದು ಕೊಟ್ಟರು. ಈ ಸುದ್ದಿ ಉಳಿದ ಗ್ರಾಮಗಳಿಗೂ ಹರಡಲು ಎಲ್ಲೆಡೆ ಲೇವಿ ವಸೂಲಿ ಸರಳವಾಗಿ ನೆರವೇರಿತು. ಎಂಟು ದಿನಗಳಲ್ಲಿ ಮೂವತ್ತು ಹಳ್ಳಿಗಳ ಲೇವಿ ವಸೂಲಾಯಿತು. ಸಿದ್ಧಯ್ಯನವರ ಕೆಲಸ ಕಂಡು ಮೇಲಧಿಕಾರಿಗಳು ಹೊಗಳಿದರು. ಹೀಗೆ ಸಿದ್ಧಯ್ಯನವರು ಲೇವಿ ವಸೂಲಿಯಲ್ಲಿ ಚಾಣಾಕ್ಷತೆಯನ್ನು ಮೆರೆದರು.

ಸಿದ್ಧಯ್ಯನವರಿಗೆ ನಾಂದೇಡದಲ್ಲಿರುವಾಗ ಅನೇಕ ಮರಾಠಿ ಸಾಹಿತಿಗಳ ಪರಿಚಯ ವಾಯಿತು. ಕಂದಾಯ ಅಧಿಕಾರಿಗಳ ಪರೀಕ್ಷೆಯಲ್ಲಿ ಕನ್ನಡ, ತೆಲುಗು, ಮರಾಠಿ, ಫಾರಸಿ ಭಾಷೆಗಳಲ್ಲಿ ಪಾಸಾದ ಏಕೈಕ ಅಧಿಕಾರಿಯೆಂದು ಬಹುಮಾನ ಪಡೆದಿದ್ದರು. ಕವಿರಾಜಮಾರ್ಗಕಾರ ಹೇಳಿದ ಗೋದಾವರಿ ನದಿ ನಾಂದೇಡದ ಹತ್ತಿರವೇ ಹರಿಯುತ್ತಿದ್ದುದರಿಂದ ಕರ್ನಾಟಕದ ಉತ್ತರದ ಗಡಿ ಇಲ್ಲಿಯವರೆಗಿದ್ದಿತೇ ಎಂಬ ಸಂದೇಹ ತಾಳಿದ್ದರು. ಆ ಭಾಗದಲ್ಲಿದ್ದ ಅನೇಕ ಶಾಸನಗಳು ಕನ್ನಡ ಭಾಷೆಯಲ್ಲಿದ್ದವು. ದೇಗಲೂರು ತಾಲೂಕಿನಲ್ಲಿ ಕೆಲವು ಹಳ್ಳಿಗಳು ಕನ್ನಡ ಹಳ್ಳಿಗಳೇ ಆಗಿದ್ದವು. 'ಕನ್ನಡ' ಎಂಬ ಹೆಸರು ಔರಂಗಾಬಾದ ಜಿಲ್ಲೆಯ ಒಂದು ತಾಲೂಕಿಗೆ ಇದ್ದಿತು. ಇದೆಲ್ಲ ಕನ್ನಡದ ನೆಲವೆಂಬುದು ಅವರಿಗೆ ಖಾತ್ರಿಯಾಗಿತ್ತು. ಅಲ್ಲಿನ ಮಹಮ್ಮದೀಯರು ಕನ್ನಡ ದಲ್ಲಿ ಮಾತನಾಡುತ್ತಿದ್ದರು.

## ಕಲಬುರ್ಗಿಯಲ್ಲಿ ಅಸಿಸ್ಟಂಟ್ ಕಲೆಕ್ಟರ್ ಹಾಗೂ ಅಸಿಸ್ಟಂಟ ಕಮೀಷನರ್ ಆಗಿ ಸೇವೆ

ವಿದ್ಯಾರ್ಥಿಯಾಗಿ ಕಲಬುರ್ಗಿಯಲ್ಲಿ ಹಲವಾರು ವರ್ಷ ಇದ್ದ ಸಿದ್ಧಯ್ಯ ನವರು ಮರಳಿ ಕಲಬುರ್ಗಿಗೆ ೧೯೪೫ರಲ್ಲಿ ಲ್ಯಾಂಡ ರಿಕಾರ್ಡ್ ವಿಭಾಗಕ್ಕೆ ಅಸಿಸ್ಟಂಟ ಕಲೆಕ್ಟರ ಆಗಿ ಬಂದರು. ಶ್ರೀ ಶರಣಬಸವೇಶ್ವರರಿಗೆ ನಮಸ್ಕರಿಸಿ ಶ್ರೀ ದೊಡ್ಡಪ್ಪಾ ಅಪ್ಪಾ ಅವರಿಂದ ಆಶೀರ್ವಾದ ಪಡೆದರು. ಅವರ ಮಿತ್ರರೆಲ್ಲ ಬಂದು ಭೇಟಿಯಾದರು. ಮಹಾಗಾಂವನ ಶ್ರೀ ಸಂಗಸೆಟ್ಟಿ ಪಾಟೀಲರು, ಕಮಲಾಪೂರದ ಶ್ರೀ ಶಂಕರ ಶೆಟ್ಟಿಯವರು, ಮಹಾಗಾಂವ್ ಶರಣಯ್ಯನವರು ಶ್ರೀ ಷಡಕ್ಷರಯ್ಯ ಪಲ್ಲಾಪೂರ ಮಠ, ಪ್ರಕಾಶಚಂದ್ರ ಕೊಠಾರಿ, ದತ್ತಾತ್ರೇಯ ಅವರಾದಿ, ಶರಣಗೌಡ ಇನಾಮದಾರ ಮೊದಲಾದವರು ಸಂತಸಪಟ್ಟರು.

ಕಲಬುರ್ಗಿಯಲ್ಲಿ ಸಿದ್ಧಯ್ಯನವರ ಸಾಹಿತ್ಯಿಕ ಚಟುವಟಿಕೆಗಳು ಹೆಚ್ಚಾದವು ಹರಪನಹಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಗೆ ಸಿದ್ಧಯ್ಯನವರು ಅಧ್ಯಕ್ಷರಾಗಿದ್ದು 'ಸಾಹಿತಿಯ ಸಮಾಜ ದರ್ಶನ' ಎಂಬ ವಿಷಯ ಕುರಿತು ಮಾತನಾಡಿದರು. ಆ ಸಮ್ಮೇಳನಕ್ಕೆ ಬಂದಿದ್ದ ಮಾಸ್ತಿಯವರು ಸಿದ್ಧಯ್ಯನವರನ್ನು ಶ್ರೀ ಜಿನರಾಜ ಹೆಗ್ಗಡೆಯವರಿಗೆ ಪರಿಚಯ ಮಾಡಿ ಕೊಡುತ್ತ 'ಈ ಹುಡುಗನಲ್ಲಿ ಪ್ರತಿಭೆಯಿದೆ' ಎಂದು ಇವನಿನ್ನೂ ವಿದ್ಯಾರ್ಥಿ ಆಗಿದ್ದಾಗಲೇ ಗುರುತಿಸಿದ್ದೆ. ನನ್ನೆಣಿಕೆ ಹುಸಿಯಾಗಲಿಲ್ಲ. ನನ್ನ ನಿರೀಕ್ಷೆಯಂತೆ ಬೆಳೆಯುತ್ತಿದ್ದಾನೆ "He is not a mere Writer he is thinker too" ಎಂದು ಹಿಗ್ಗಿ ಹೇಳಿದ್ದರು. ಸಿದ್ಧಯ್ಯನವರು ಅಧಿಕಾರಿ ಯಾಗಿದ್ದನ್ನು ಕೇಳಿ 'ಇದು ಕನ್ನಡಕ್ಕೊಂದು ನಷ್ಟ' ಎಂದರಂತೆ. ಈ ಅವಧಿಯಲ್ಲಿ ಹೈದ್ರಾಬಾದ್ ಸಂಸ್ಥಾನದ ಹೊರಗೆ ಕಾಂಗ್ರೆಸ್–ಲೀಗುಗಳ ಮಧ್ಯ ಕಂದರ ಹೆಚ್ಚಾದಂತೆ ಒಳಗೂ ಸಂಬಂಧಗಳು ಕೆಡುತ್ತ ಹೋದವು. ಸಿದ್ಧಯ್ಯನವರಿಗೆ ತರಬೇತಿಯಲ್ಲಿ ಮಿತ್ರ ರಾಗಿದ್ದ ಮದನ ಸಿಂಗರು ಕಲಬುರ್ಗಿಗೆ ತಾಲೂಕದಾರರ ಇನ್ನೊಬ್ಬ ಸಹಾಯಕರಾಗಿ ಬಂದರು. ೧೯೪೭ರಲ್ಲಿ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಪಂಜಾಬ ಬಾಂಗ್ಲಾಗಳಲ್ಲಿ ರಕ್ತದ ಕಾಲುವೆ ಹರಿದವು. ಮುಸ್ಲಿಂ ಸಿಖ್ ದ್ವೇಷ ಕಲಬುರ್ಗಿಗೂ ತಟ್ಟಿತು. ಮದನಸಿಂಗ್ ತುಂಬಾ ಹೆದರಿದ್ದರು. ಅವರ ರಕ್ಷಣೆಯ ಭಾರ ಸಿದ್ಧಯ್ಯನವರ ಮೇಲಿತ್ತು. ಇದೇ ವೇಳೆಗೆ ಸರ್ದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ದೇಶೀಯ ಸಂಸ್ಥಾನಗಳು ಭಾರತದ ಯೂನಿಯನ್ನಿನಲ್ಲಿ ಸೇರ್ಪಡೆಗೊಂಡವು. ಆದರೆ ಹೈದರಾಬಾದ್ ಸಂಸ್ಥಾನ ಸಿಡಿದು ನಿಂತಿತು. ಬಾಪೂಜಿಯವರ ಹತ್ಯೆ ದೇಶದ ಜನರನ್ನೆಲ್ಲ ಶೋಕ ಸಾಗರದಲ್ಲಿ ಮುಳುಗಿಸಿತು.

ಹೈದರಾಬಾದಿನಲ್ಲಿ ಸೈನ್ಯ ಹಾಗೂ ಶಸ್ತ್ರಾಸ್ತ್ರಗಳ ಸಂಗ್ರಹವಾಗತೊಡಗಿತು. ಎಲ್ಲೆಡೆಗೂ ರಜಾಕಾರರ ಜಾಲ ಹರಡತೊಡಗಿತು. ಹಿಂದೂಗಳು ಮನೆ ಮಾರು ಬಿಟ್ಟು ದೂರದ ಊರಿಗೆ ಹೋಗ ತೊಡಗಿದರು. ಸಿದ್ಧಯ್ಯನವರು ತಮ್ಮ ಪತ್ನಿಯನ್ನು ತಂದೆ ತಾಯಿಗಳು ಈಗಾಗಲೇ ಹೋಗಿದ್ದ ಮಣಕವಾಡಕ್ಕೆ ರೈಲಿನಲ್ಲಿ ಕಳಿಸಿದರು. ಅವರು ಕಳಿಸಿದ ಮರುದಿನದ ರೈಲಿನ ಮೇಲೆ ರಜಾಕಾರರು ದಾಳಿ ಮಾಡಿದ್ದರು. ಪ್ರಯಾಣಿಕರನ್ನೆಲ್ಲಾ ಹೊಡೆದು ಲೂಟಿ, ಹಾಗೂ ಹೆಂಗಸರ ಮಾನಭಂಗ ಮಾಡಿದ್ದರು. ಇಂಥ ದುರ್ಘಟನೆ ಗಳಿಂದ ಹಿಂದೂಗಳ ಸಂಖ್ಯೆ ಕಡಿಮೆ ಮಾಡುವುದು ಲಾಯಕ್ ಅಲಿ ಮಂತ್ರಿಮಂಡಲದ ಕಾಸಿಂ ರಜವಿಯವರ ನೀತಿಯೇ ಆಗಿತ್ತು. ಇದಲ್ಲದೆ ಈ ಭಾಗದ ನಾಣ್ಯಗಳೇ ಬೇರೆಯಾಗಿದ್ದವು. ಭಾರತ ಸರ್ಕಾರದ ರೂಪಾಯಿಗಳಿಗೆ ಇಲ್ಲಿನ ಹಾಲಿ ರೂಪಾಯಿ ಗಳನ್ನು ಪರಿವರ್ತಿಸಿ ಕಳಿಸಬೇಕಾಗುತ್ತಿತ್ತು. ಸಿದ್ಧಯ್ಯನವರಿಗೆ ತಂದೆಗೆ, ಪತ್ನಿಗೆ ಹಣ ಕಳಿಸುವುದು ಕೂಡ ಸಮಸ್ಯೆಯಾಗತೊಡಗಿತು. ಹಿಂದೂಗಳು ಊರು ಬಿಟ್ಟು ಹೋಗುವಾಗ ತಮ್ಮಲ್ಲಿರುವ ಬೆಲೆ ಬಾಳುವ ವಸ್ತುಗಳನ್ನು ತಂದು ಸಿದ್ಧಯ್ಯನವರಿಗೆ ಕೊಟ್ಟು ನಾವು ಬರುವವರೆಗೆ ನಿಮ್ಮ ಬಳಿ ಇರಲಿ ಎಂದು ಹೇಳಿ ಹೋಗುತ್ತಿದ್ದರು.



ಕೆಲವೊಮ್ಮೆ ರಜಾಕಾರರು ತಾವೇ ಸರ್ಕಾರಿ ಸೊತ್ತು ಲೂಟಿ ಮಾಡಿ ಸತ್ಯಾಗ್ರಹಿಗಳು ಮಾಡಿದರೆಂದು ಹೇಳುತ್ತಿದ್ದರು. ಕಚೇರಿಗಳಲ್ಲಿ ಪ್ರತಿದಿನ ರಜಾಕಾರರ ಲೂಟಿಯ ಬಗ್ಗೆ ಬರುವ ದೂರುಗಳೇ ಇರುತ್ತಿದ್ದವು. ಸಿದ್ಧಯ್ಯನವರು ಹಾಗೂ ಮದನಸಿಂಗರು ಪಠಾಣರ ಚಾಚಿದ ಕೋವಿಗಳ ನೆರಳಲ್ಲಿಯೇ ಕಚೇರಿಗೆ ಹೋಗಿ ಬರುತ್ತಿದ್ದರು. ಸಿದ್ಧಯ್ಯನವರು ಮದನಸಿಂಗರ ಜೊತೆಗೆ ಪ್ರತಿದಿನ ಒಂದೊಂದು ಮನೆಯಲ್ಲಿ ಮಲಗುತ್ತಿದ್ದರು. ಯಾರಿಗೂ ಅದರ ಸುಳಿವು ಕೊಡುತ್ತಿರಲಿಲ್ಲ.

## ರಜಾಕಾರರ ಹಾವಳಿ

ಕಲಬುರ್ಗಿಗೆ ಮುಜಾಹಿದ್–ಎ–ಆಜಮ್, ಫೀಲ್ಡ್‌ಮಾರ್ಷಲ್ ಕಾಸಿಮ ರಜವಿ ಯವರು ಬರುವವರಿದ್ದರು. ಹಿಂದೂಗಳೆಲ್ಲ ತುಂಬಾ ಹೆದರಿ ಜೀವ ಹಿಡಿದುಕೊಂಡಿದ್ದರು. ಲಕ್ಷಗಟ್ಟಲೆ ರಜಾಕಾರರು ಮೆರಣಿಗೆಯಲ್ಲಿ ಭಾಗವಹಿಸಿದ್ದರು. ಪ್ರತಿವರ್ಷ ಸೂಫಿ ಶ್ರೇಷ್ಠ ಖಾಜಾ ಬಂದೇ ನವಾಬರ ಉರುಸಿಗೆ ಬರುತ್ತಿದ್ದ ನಿಜಾಮರಿಗೂ ಇಂಥ ಸ್ವಾಗತ, ಅದ್ದೂರಿಯ ಮೆರವಣಿಗೆ ದೊರೆಯುತ್ತಿರಲಿಲ್ಲ. ಕೆಂಪು ಕೋಟೆಯ ಮೇಲೆ ನಿಜಾಮರ ಬಾವುಟ (ಲಾಲ್ ಕಿಲೆ ಪೇ ಆಸಫಿ ಪರಚಮ್) ಎಂಬುದು ಕಾಸಿಮರಜವಿ ಕೊಟ್ಟ ಕರೆಯಾಗಿದ್ದಿತು.

ಮಹಮ್ಮದ ಅಲಿ ಜಿನ್ನಾ ಅವರ ಮರಣದ ವಾರ್ತೆಯಿಂದ ಸ್ವತಂತ್ರ ಹೈದರಾಬಾದ ವಾದಿಗಳಿಗೆ ಸಿಡಿಲೆರಗಿದಂತಾಯಿತು. ಕೆಲವೇ ದಿನಗಳಲ್ಲಿ ಭಾರತ ಸೈನ್ಯ ಸೋಲಾಪೂರ ದಿಂದ ಹೊರಟು ನಳದುರ್ಗ ವಶಪಡಿಸಿಕೊಂಡು ಇತ್ತ ಬರುತ್ತಿದೆ ಎಂಬ ಸುದ್ದಿ ಕೇಳಿ ಪಠಾಣರೆಲ್ಲ ಓಡಿ ಹೋಗ ತೊಡಗಿದರು. ರಜಾಕಾರರೆಲ್ಲ ಮನೆಗಳಲ್ಲಿ ಅಡಗಿ ಕುಳಿತರು. ಸಿಡ್ನಿಕಾಟನ್ ಸರಬರಾಜು ಮಾಡಿದ ೩೦೩ ಗನ್ನುಗಳನ್ನು, ಸ್ಟೆನ್‌ಗನ್ನಗಳನ್ನು ಹೊತ್ತು ಕೊಂಡು ಓಡ ತೊಡಗಿದರು. ಸರ್ದಾರ್ ಪಟೇಲರು ಐದಾರು ದಿನಗಳಲ್ಲಿ ನಿಜಾಮ ಶರಣಾಗುವಂತೆ ಮಾಡಿದರು. ಆದರೆ ಕಲಬುರ್ಗಿಯ ಕಡೆ ಹೊರಟಿದ್ದ ಭಾರತೀಯ ಸೈನ್ಯಕ್ಕೆ ಆಳಂದ ಹತ್ತಿರ ರಜಾಕಾರರು ಅನಿರೀಕ್ಷಿತ ದಾಳಿ ಮಾಡಿದರು. ಹೇಗೂ ಸಾಯುತ್ತೇವೆ ಕೈಗೆ ಸಿಕ್ಕ ಹಿಂದೂಗಳನ್ನು ಕೊಂದು ಸಾಯುವೆವೆಂದು ಕೂಗುತ್ತ ಹೊರಟಿದ್ದರು. ರಜಾಕಾರರು ಹಿಂದುಗಳ ಮನೆಗೆ ಬೆಂಕಿ ಹಚ್ಚುವರೆಂಬ ಸುದ್ದಿ ಹಬ್ಬಿತು. ಆದರೆ ರಾತ್ರಿಯೆಲ್ಲ ಮಳೆ ಬಂದು ನಿರಪರಾಧಿಗಳ ರಕ್ಷಣೆಗೆ ನಿಸರ್ಗ ವಿಧಿಸಿದ್ದ ಕರ್ಫ್ಯೂ ಆಗಿತ್ತೆಂದು ಸಿದ್ಧಯ್ಯನವರು ನೆನಪಿಸಿಕೊಂಡರು. ಮರುದಿನ ಬೆಳಿಗ್ಗೆ ಭಾರತ ಸೈನ್ಯ ಬಂದಾಗ ಭಾರತ ಮಾತಾ ಕಿ ಜೈ, ಮಹಾತ್ಮಾ ಗಾಂಧೀಕಿ ಜೈ, ಸರ್ದಾರ ಪಟೇಲಕಿ ಜೈ ಎಂದು ಜನ ಸ್ವಾಗತಿಸಿದರು. ಅವ್ವಲ್ ತಾಲೂಕದಾರರ ಅಪೇಕ್ಷೆಯಂತೆ ತುಕಡಿಯ ಕಮಾಂಡರ್ ಕರ್ನಲ್ ಶಿವಚರಣ ಸಿಂಗರನ್ನು ಬಿಳಿಯ ಬಾವುಟದೊಂದಿಗೆ ಬರಮಾಡಿಕೊಳ್ಳಲು ಸಿದ್ಧಯ್ಯನವರು ಹಾಗೂ ಮದನಸಿಂಗರು ಹೋಗಿದ್ದರು.

ಪೋಲಿಸ್ ಕ್ರಿಯೆ ಎಂದು ಪ್ರಸಿದ್ಧವಾದ ಕ್ಷಿಪ್ರ ಕಾಳಗ ಈ ರೀತಿ ಕೊನೆಗೊಂಡಿತು. ಊರು ಬಿಟ್ಟು ಹೋದವರೆಲ್ಲ ಮರಳಿ ಬಂದು ಸಿದ್ಧಯ್ಯನವರ ಬಳಿ ಇರಿಸಿದ್ದ ತಮ್ಮ ವಸ್ತುಗಳನ್ನು ಮರಳಿ ಪಡೆದುಕೊಂಡರು.

## ಕಲಬುರ್ಗಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಅಧಿಕಾರಿಯಾಗಿದ್ದ ಸಿದ್ಧಯ್ಯ ಪುರಾಣಿಕರು ಸಾಹಿತ್ಯದಲ್ಲಿಯೂ ಹೆಸರು ಪಡೆದದ್ದರಿಂದ ಪ್ರೊ ಎಲ್.ಎಸ್.ಶೇಷಗಿರಿರಾಯರು ಕಲಬುರ್ಗಿಯಲ್ಲಿ ಸಮ್ಮೇಳನ ನಡೆಸಬೇಕೆಂದು ಸಿದ್ಧಯ್ಯನವರಿಗೆ ಪತ್ರ ಬರೆದಿದ್ದರು. ಆಗ ಪುರಾಣಿಕರು ಕನ್ನಡದ ಮಿತ್ರರೆಲ್ಲರನ್ನು ಸೇರಿಸಿ ವಿಷಯ ತಿಳಿಸಿದರು. ಶ್ರೀ ಶರಣಗೌಡರು, ಶ್ರೀ ಮಹಾದೇವಪ್ಪರಾಮಪುರೆ, ಶ್ರೀ ದತ್ತಾತ್ರೇಯ ಅವರಾದಿ ಮೊದಲಾದವರು ಸಾಹಿತ್ಯ ಸಮ್ಮೇಳನದೊಂದಿಗೆ ಕರ್ನಾಟಕ ಏಕೀಕರಣ ಸಮ್ಮೇಳನವನ್ನು ಮಾಡಬೇಕೆಂದು ಸೂಚಿಸಿದರು. ಕೊನೆಗೆ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸಿದ್ಧಯ್ಯಪುರಾಣಿಕರು ಸ್ವಾಗತ ಸಮಿತಿಯಲ್ಲಿ ಶ್ರೀ ಕಪಟರಾಳ ಕೃಷ್ಣರಾಯರು, ಪ್ರೊ. ತವಗ ಭೀಮಸೇನರಾಯರು, ಶ್ರೀ ಅಶ್ವತ್ಥರಾಯರು, ಶ್ರೀ ಘಾಟಗೆಯವರಿದ್ದರು. ಕುಕನೂರಿನ ಕಟ್ಟೆ ಸುಬ್ಬಾಚಾರ್ಯ ಅವರು ಕಾರ್ಯದರ್ಶಿಗಳಾದರು. ಸಾಹಿತ್ಯಗೋಷ್ಠಿಗೆ ಭೀಮಶೇನರಾವ್ ತವಗರು. ಏಕೀಕರಣ ಸಮ್ಮೇಳನಕ್ಕೆ ಶರಣ ಗೌಡರು, ಶ್ರೀ ಮಹಾ ದೇವಪ್ಪಾ ರಾಮಪುರೆ ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಶ್ರೀ ಮಹಾದೇವಪ್ಪ ರಾಂಪುರೆ ಅವರ ಮೂಲಕ ಕಲ್ಯಾಣ ಸ್ಮಾರಕೋತ್ಸವ ಮಾಡಬೇಕೆಂದು ಸಿದ್ಧಯ್ಯನವರು ಹೇಳಿದಾಗ ರಾಂಪುರೆ ಅವರು ಒಪ್ಪಿ ಅಧ್ಯಕ್ಷರಾಗಿ ಕಾರ್ಯಕ್ರಮ ನೆರವೇರಿಸಿದರು. ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

## ಹೈದರಾಬಾದಿನಲ್ಲಿ ಕನ್ನಡದ ಕೆಲಸ

ಕಲಬುರ್ಗಿಯಿಂದ ಹೈದ್ರಾಬಾದಿಗೆ ವರ್ಗವಾದಾಗ ಸಿದ್ಧಯ್ಯನವರಿಗೆ ಆತ್ಮೀಯವಾಗಿ ಸ್ನೇಹಿತರೆಲ್ಲ ಬೀಳ್ಕೊಡುವ ಸಮಾರಂಭ ಏರ್ಪಡಿಸಿದ್ದರು. ಹೈದರಾಬಾದ್‌ನಲ್ಲಿ ಪ್ರೊ ಡಿ.ಕೆ.ಭೀಮಸೇನರಾಯರು ಕನ್ನಡ ಸಾಹಿತ್ಯ ಮಂದಿರವನ್ನು ಪ್ರಾರಂಭಿಸಿದ್ದರು. ಅದಕ್ಕೆ ಸಿದ್ಧಯ್ಯನವರನ್ನು ಉಪಾಧ್ಯಕ್ಷರನ್ನಾಗಿ ಕೆಲವು ವರ್ಷ ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಶ್ರೀ ಇಟಗಿ ರಾಘವೇಂದ್ರರಾಯರು ಹೈದ್ರಾಬಾದಿನ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರೊಡನೆ ಸಿದ್ಧಯ್ಯನವರು "ಶ್ರೀಕಾರ" ಹಾಗೂ "ಪ್ರಬಂಧ ಮಾಲೆ" ಎಂಬ ಎರಡು ಕೃತಿಗಳನ್ನು ಸಂಪಾದಿಸಿ ಕರ್ನಾಟಕ ಸಾಹಿತ್ಯ ಮಂದಿರದಿಂದ ಪ್ರಕಟಿಸಿದರು. ಹೈದ್ರಾಬಾದಿಗೆ ಬರುವ ಸಾಹಿತಿಗಳಿಂದ ಒಂದು ಉಪನ್ಯಾಸ ಏರ್ಪಡಿಸುವ



ವ್ಯವಸ್ಥೆ ಪುರಾಣಿಕರು ಮಾಡುತ್ತಿದ್ದರು. ನಾಡಹಬ್ಬವನ್ನಾಚರಿಸುವ ಸಮಿತಿಗೆ ಅಧ್ಯಕ್ಷರಾಗಿದ್ದ ಡಾ. ಜಿ.ಎಸ್.ಮೇಲ್ಕೋಟೆಯವರೊಂದಿಗೆ ಸತತವಾಗಿ ಮೂರು ವರ್ಷ ನಾಡಹಬ್ಬವನ್ನು ಒಂಬತ್ತು ದಿನಗಳವರೆಗೆ ಅಚರಿಸಿದರು.

ಸಿದ್ಧಯ್ಯನವರು ಒಮ್ಮೆ ಕರ್ನಾಟಕಾಂಧ್ರ ಸಮ್ಮೇಳನ ನಡೆಸಿದರು ಆಗ ಅಲ್ಲಿನ ಮುಖ್ಯ ಮಂತ್ರಿಗಳಾಗಿದ್ದ ಬಿ.ರಾಮಕೃಷ್ಣರಾಯರು ಉದ್ಘಾಟನೆ ಮಾಡಿದ್ದರು. ತೆಲಗು ಕವಿಗಳಾದ ದಾಶರಥಿ, ಸಿ.ನಾರಾಯಣರೆಡ್ಡಿ, ರಾಮರಾಜು ಮೊದಲಾದವರು ಭಾಗವಹಿಸಿದ್ದರು. ಕವಿಗೋಷ್ಠಿ ತುಂಬಾ ಜನಪ್ರಿಯವಾಗಿತ್ತು.

ಸಿದ್ಧಯ್ಯನವರು ಅಧಿಕಾರಿಯಾಗಿ ಹೈದರಾಬಾದ್‌ನಲ್ಲಿದ್ದಾಗ ನೂರಾರು ಜಾಗೀರು ಗಳನ್ನು ರದ್ದುಗೊಳಿಸಿ ಜಾಗೀರುದಾರರಿಗೆ ಪರಿಹಾರ ಧನವನ್ನು ನೀಡುತ್ತಿದ್ದರು. ಮೊದಲು ವೈಭವದಿಂದ ಮರೆದ ಜಾಗೀರದಾರರು ಪರಿಹಾರ ಧನಕ್ಕಾಗಿ ಕಚೇರಿಗೆ ಬರುತ್ತಿದ್ದರು. ಒಂದು ದಿನ ಸಿದ್ಧಯ್ಯನವರು ಕಚೇರಿ ಅವಧಿ ಮುಗಿಸಿ ಹೊರಬಂದಾಗ ಜಾಗೀರದಾರ ರೊಬ್ಬರು ಬಂದು "ರಾಜಾ ನೀವೀಗ ನನ್ನ ಚೆಕ್ಕು ಕೊಡದಿದ್ದರೆ ನಾಳೆಯಿಂದ ಒಂದು ವಾರದ ರೇಷನ್ ಕಳೆದುಕೊಳ್ಳಬೇಕಾಗುತ್ತದೆ. ಎಂದು ಅತ್ಯಂತ ಕನಿಕರದಿಂದ ಹೇಳಿದಾಗ ಮತ್ತೆ ಮರಳಿ ಹೋಗಿ ಚೆಕ್ ಕೊಟ್ಟರಂತೆ. ಹೀಗೆ ಸಿದ್ಧಯ್ಯನವರು ಕಷ್ಟದಲ್ಲಿದ್ದವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿದ್ದರು.

ಶ್ರೀ. ಬಿ. ರಾಮಕೃಷ್ಣರಾಯರ ಮಂತ್ರಿಮಂಡಲದಲ್ಲಿ ಕಲಬುರ್ಗಿಯ ಗಣ್ಯ ವಕೀಲರೂ, ಕರ್ನಾಟಕ ಪರಿಷತ್ತಿನ ಮಾಜಿ ಅಧ್ಯಕ್ಷರೂ, ಲೋಕಸಭೆಯ ಮಾಜಿ ಸದಸ್ಯರೂ ಆಗಿದ್ದ ಶ್ರೀ ಅಣ್ಣಾರಾವ್ ಗಣಮುಖಿಯವರು ಸ್ಥಾನಿಕ ಸ್ವರಾಜ್ಯ, ವಸತಿ ಹಾಗೂ ನೀರು ಪೂರೈಕೆಯ ಮಂತ್ರಿಗಳಾಗಿದ್ದರು. ಸಿದ್ಧಯ್ಯನವರನ್ನು ತಮ್ಮ ಆಪ್ತ ಕಾರ್ಯದರ್ಶಿ ಯನ್ನಾಗಿಸಿಕೊಂಡರು. ಹಗಲಿರುಳೆನ್ನದೆ ನಗರ ಹಳ್ಳಿಗಳಲ್ಲಿ ಜನಕಲ್ಯಾಣ ಕಾರ್ಯ ಪ್ರಾರಂಭವಾದವು. ಕುಡಿಯುವ ನೀರಿನ ಯೋಜನೆ, ಚರಂಡಿ ಯೋಜನೆ, ರಸ್ತೆ ನಿರ್ಮಾಣ ಯೋಜನೆಗಳು ತೀವ್ರಗತಿಯಿಂದ ನಡೆದವು. ಈ ಸಂದರ್ಭದಲ್ಲಿ ದೆಹಲಿ, ಆಗ್ರಾ, ಹರಿದ್ವಾರ, ಹೃಷಿಕೇಶಗಳಿಗೆ ಪ್ರವಾಸ ಹೋಗಿ ಬಂದರು. ಸಾಹಿತ್ಯ ಸೃಷ್ಟಿ ಹಾಗೇ ಮುಂದುವರಿದಿತ್ತು ಅನೇಕ ಕವಿತೆಗಳನ್ನು ಪ್ರವಾಸದಲ್ಲಿ ರಚಿಸಿದ್ದರು. ಹೈದ್ರಾಬಾದ್ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಯಾದಗಿರಿಯಲ್ಲಿ ಎರಡನೆಯ ಕನ್ನಡ ಸಮ್ಮೇಳನ ನಡೆಯಿತು. ರಾಯಚೂರಿನಲ್ಲಿ ನಡೆದ ಮೊದಲ ಸಮ್ಮೇಳನಕ್ಕೆ ಪ್ರೊ.ಡಿ.ಕೆ.ಭೀಮಸೇನ ರಾಯರು ಅಧ್ಯಕ್ಷರಾಗಿದ್ದರು. ಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಎರಡನೆಯ ಸಮ್ಮೇಳನ ನಡೆಯಿತು. ಸುರಪುರದ ತಹಸೀಲ್ದಾರರಾಗಿದ್ದ ಕಡಗಂಚಿ ಸಿದ್ಧಯ್ಯನವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಸಮ್ಮೇಳನ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಶ್ರೀ ಅಣ್ಣಾರಾವ್ ಗಣಮುಖಿಯವರ ಸಹಕಾರದಿಂದ ಕನ್ನಡ ಸಂಘಗಳಿಗೆ ನಿವೇಶನಗಳನ್ನೊದಗಿಸಿಕೊಟ್ಟರು. ಬೀದರ ಜಿಲ್ಲೆಯ ಗಡಿಭಾಗದಲ್ಲಿ ಕನ್ನಡ ಶಾಲೆಗಳ ಸ್ಥಾಪನೆಯನ್ನು ಮಾಡಿಸಿದರು. ಯಾದಗಿರಿಯಲ್ಲಿ ಶ್ರೀ ಕೋನಪ್ಪ ಹಾಗೂ ವಿಶ್ವನಾಥರೆಡ್ಡಿ ಮುದ್ನಾಳರ ನೇತೃತ್ವದಲ್ಲಿ ಕಾಲೇಜೊಂದನ್ನು ಸ್ಥಾಪಿಸಿ ಉದ್ಘಾಟನೆಗೆ ಮುಖ್ಯಮಂತ್ರಿ ಬಿ.ರಾಮಕೃಷ್ಣರನ್ನು ಆಹ್ವಾನಿಸಿದ್ದರು.

ಮರಾಠಿ ಭಾಷೆಯ ಪ್ರಭಾವವೇ ಹೆಚ್ಚಾಗಿದ್ದ ಬೀದರ್‌ನಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಮಾಡಲೇಬೇಕೆಂಬ ಹಟದಿಂದ ಏಳು ದಿನಗಳ ನಾಡಹಬ್ಬದ ಸಿದ್ಧತೆ ಮಾಡಿಸಿದರು. ಪ್ರತಿದಿನ ಒಬ್ಬ ಮಂತ್ರಿ ಹಾಗೂ ಸಾಹಿತಿಗಳು ಕನ್ನಡದಲ್ಲಿ ಮಾತನಾಡುವಂತೆ ಮಾಡಿದರು.

ರಾಜಕೀಯದಲ್ಲಿ ಏರುಪೇರು ಸಾಮಾನ್ಯ. ಅಣ್ಣಾರಾವ್ ಗಣಮುಖಿಯವರು ಮಂತ್ರಿ ಮಂಡಲದಿಂದ ವಜಾ ಆದರು. ಆಗ ಡಾ. ಎಂ.ಚೆನ್ನಾರೆಡ್ಡಿಯವರು ಸಿದ್ಧಯ್ಯನವರನ್ನು ಕರೆಸಿ ಆಪ್ತ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ಕೃಷಿ, ಯೋಜನೆ, ನಾಗರಿಕ ಸರಬರಾಜು ಹಾಗೂ ಅಭಿವೃದ್ಧಿ ಇಲಾಖೆಗಳನ್ನು ಹೊಂದಿದ್ದ ಅವರು ಶ್ರಮವಹಿಸಿ ದುಡಿಯುತ್ತಲೂ ಇದ್ದರು. ಕೃಷಿಮಂತ್ರಿಗಳ ಸಭೆಯನ್ನು ಶ್ರೀನಗರದಲ್ಲಿ ಕರೆದಿದ್ದರು. ಆಗ ಮಂತ್ರಿಗಳೊಂದಿಗೆ ಸಿದ್ಧಯ್ಯನವರು ಶ್ರೀನಗರಕ್ಕೆ ಹೋಗಿದ್ದರು. ಆಗ ಕಾಶ್ಮೀರ ಕುರಿತು ಸಿದ್ಧಯ್ಯನವರು 'ಕಾಶ್ಮೀರದಲ್ಲಿ ಕಾರ್ಗಾಲ'ವೆಂಬ ಕವನವನ್ನು ರಚಿಸಿದರು.

೧೯೫೫ರಲ್ಲಿ ನಾಡಹಬ್ಬವನ್ನು ಅತ್ಯುತ್ಸಾಹದಿಂದ ಅನೇಕ ಸ್ಥಳಗಳಲ್ಲಿ ಆಚರಿಸಿದರು. ಹಿರಿಯ ಸಾಹಿತಿಗಳೊಡನೆ ಮೊದಲೇ ಪತ್ರ ವ್ಯವಹಾರ ಮಾಡಿ ಒಬ್ಬೊಬ್ಬರು ನಾಲ್ಕೈದು ನಾಡಹಬ್ಬಗಳಲ್ಲಿ ಭಾಗವಹಿಸುವಂತೆ ಅದರ ಕಾರ್ಯಕ್ರಮಗಳನ್ನು ರೂಪಿಸಿದ್ದುದರಿಂದ, ಕಡಿಮೆ ವೆಚ್ಚದಲ್ಲಿ ಕಾರ್ಯಕ್ರಮ ನಡೆಸುವಂತಾಯಿತು. ಸಿದ್ಧಯ್ಯನವರು ಒಂಬತ್ತು ದಿನ ಒಂದೊಂದೆಡೆ ಹೋಗಬೇಕಾದುದರಿಂದ ಹದಿನೈದು ದಿನ ರಜೆ ತೆಗೆದುಕೊಳ್ಳ ಬೇಕೆಂದು ಚೆನ್ನಾರೆಡ್ಡಿಯವರನ್ನು ಕೇಳಿದರಂತೆ. ಆಗ ಅವರು ಏತಕ್ಕೆ ರಜೆ ಎಂದಾಗ ಕಾರಣ ಹೇಳಿದರು. ಅದಕ್ಕೆ ಅವರು ನಗುತ್ತ ಕನ್ನಡದ ಕೆಲಸ ಸರಕಾರದ ಕೆಲಸವಲ್ಲವೆ? ಇದಕ್ಕೆ ರಜೆ ತೆಗೆದುಕೊಳ್ಳಬೇಕೆ? ನೀವು ಕೆಲಸದ ರಜೆಯ ಮೇಲೆ ಹೋಗಿ ಬನ್ನಿ ಎಂದರಂತೆ. ತೆಲುಗು ಮಾತೃಭಾಷೆಯಾಗಿದ್ದ ಅಧಿಕಾರಿಯೊಬ್ಬರು ಈ ರೀತಿ ಸಹಕರಿಸಿದ್ದನ್ನು ಸಿದ್ಧಯ್ಯನವರು ನೆನೆಯುತ್ತ ಕೆಲವೊಮ್ಮೆ ಕನ್ನಡ ನಾಡಿನಲ್ಲಿ ಕನ್ನಡ ನೆಲದಲ್ಲಿ ಕನ್ನಡದ ಅಧಿಕಾರಿಗಳೇ ಸಹಕರಿಸಲಿಲ್ಲ ಎಂದು ಹೇಳುತ್ತಿದ್ದರು.

ಹೈದರಾಬಾದಿನಲ್ಲಿ ನಡೆದ ಈ ನಾಡಹಬ್ಬದ ವಿವರ ತಿಳಿದು ಸಂತುಷ್ಟರಾದ ಮಾಸ್ತಿಯವರು ತಮ್ಮ ಪತ್ರಿಕೆಯಲ್ಲಿ "ನಮ್ಮ ಹೈದರಾಬಾದು ಕರ್ನಾಟಕದ ಮಿತ್ರರು ಈ ಸಲದ ನಾಡಹಬ್ಬವನ್ನು ಅನೇಕ ಕಡೆಗಳಲ್ಲಿ ಅತ್ಯುತ್ಸಾಹದೊಡನೆ ಆಚರಿಸಿದುದು ಪ್ರಶಂಸನೀಯವಾದುದಾಗಿದೆ. ಕರ್ಣಧಾರರಾಗಿದ್ದುಕೊಂಡು ಈ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಶ್ರೀ ಸಿದ್ಧಯ್ಯ ಪುರಾಣಿಕರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು" ಎಂದು ಬರೆದಿದ್ದರು.



ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ ಪರೀಕ್ಷೆಗಳನ್ನು ನಡೆಸಬೇಕೆಂದು 'ಕನ್ನಡ ಪ್ರಥಮ' ಪರೀಕ್ಷೆ ಪ್ರಾರಂಭಿಸಿ ಅದಕ್ಕೆ ಪಠ್ಯ ಪುಸ್ತಕಗಳನ್ನು ಸಂಪಾದಿಸಬೇಕೆಂದು ಮಾನ್ವಿಯವರು, ಸಿದ್ಧಯ್ಯನವರು ಸೇರಿ ಕವಿತಾವಲಿ ಹಾಗೂ ಕಥಾವಲಿ ಎಂಬ ಎರಡು ಪುಸ್ತಕಗಳನ್ನೂ ನಂತರ ಕನ್ನಡ ಪದ್ಯ ರತ್ನಾಕರವೆಂಬ ಪುಸ್ತಕವನ್ನು ಸಂಪಾದಿಸಿ ಪ್ರಕಟಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಎ.ಎನ್.ಮೂರ್ತಿರಾಯರು ಬೀದರ್‌ನಲ್ಲಿ ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸಲು ವ್ಯವಸ್ಥೆ ಮಾಡಿರೆಂದು ಸಿದ್ಧಯ್ಯನವರಿಗೆ ಪತ್ರ ಬರೆದಾಗ ಸಿದ್ಧಯ್ಯನವರು ವ್ಯವಸ್ಥೆ ಮಾಡಿಸಿದರಲ್ಲದೆ, ಪ್ರಚಾರ ಉಪನ್ಯಾಸಗಳನ್ನು ನೀಡಲು ಏರ್ಪಾಡುಮಾಡಿ ಕೊಟ್ಟರು.

ಏಕಾಂತರಾಮಯ್ಯನ ಸ್ಥಳವಾದ ಆಳಂದದಲ್ಲಿಯೂ, ಕನ್ನಡದ ಸ್ಥಿತಿ ಚಿಂತಾಜನಕ ವಾಗಿತ್ತು. ಆ ಸಂದರ್ಭದಲ್ಲಿ ಅಲ್ಲಿಗೆ ಬಂದ ಜೈನ ಗುರುಗಳು ಕನ್ನಡದಲ್ಲಿ ಪ್ರವಚನ ಮಾಡಿದರು. ಕನ್ನಡ ಮಾತನಾಡುವಂತೆ ತಿಳಿಹೇಳಿದರು. ಅವರಿಗೆ ಹೈದ್ರಾಬಾದ ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರವಚನ ಪರಮೇಷ್ಠಿ ಎಂಬ ಬಿರುದನ್ನಿತ್ತು ಸನ್ಮಾನಿಸಿದರು.

ಆಗಾಗ ಅಲ್ಲಲ್ಲಿ ಕವಿ ಸಮ್ಮೇಳನಗಳು ನಡೆಯುತ್ತಿದ್ದವು. ಕೆಲವೊಂದು ಕಡೆ ಪಂಚ ಭಾಷಾ ಕವಿಸಮ್ಮೇಳನ ನಡೆದವು. ಉದಗೀರ, ಮೆಹಬೂಬನಗರ, ಜಹೀರಾಬಾದ, ಕಮ್ಮಮ್‌ಗಳಲ್ಲಿ ಕನ್ನಡ, ತೆಲುಗು, ಮರಾಠಿ, ಹಿಂದಿ, ಉರ್ದು ಭಾಷೆಯ ಕವಿಗಳು ಸೇರುತ್ತಿದ್ದರು. ದಾಶರಥಿ, ಸಿ.ನಾರಾಯಣರೆಡ್ಡಿ ತೆಲುಗಿನಲ್ಲಿ ಭವಾನಿಪ್ರಸಾದ ಮಿಶ್ರ, ಆರ್ಯೇಂದ್ರಶರ್ಮಾ ಹಿಂದಿಯಲ್ಲಿ, ಆರ್.ಎಂ.ಜೋಶಿ ಮರಾಠಿಯಲ್ಲಿ, ಷಾಹಿದ್ ಹಾಗೂ ಸರವರ್ ದಂಡಾ ಉರ್ದುವಿನಲ್ಲಿ ಕವಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಸಿದ್ಧಯ್ಯ ಪುರಾಣಿಕರು ಮಾನ್ವಿ ನರಸಿಂಗರಾಯರು ಕನ್ನಡದ ಕೆಲಸವನ್ನು ಸ್ವಂತ ಖರ್ಚಿನಿಂದ ಮತ್ತು ಆರಾಧನಾ ದೃಷ್ಟಿಯಿಂದ ಮಾಡುತ್ತಿದ್ದರು. ಕನ್ನಡ ಭಾಷೆ ಸಾಹಿತ್ಯ ವನ್ನು ಅನ್ಯ ಭಾಷಿಗರಿಗೆ ತಲುಪಿಸುವ ಪ್ರಯತ್ನ ಮಾಡುತ್ತ ಮಾನ್ವಿಯರು **"ಕನ್ನಡ ಸಾಹಿತ್ಯ ಪರಿಚಯ"** ಹಿಂದಿಯಲ್ಲಿ ಪ್ರಕಟಿಸಿದರು. ಸಿದ್ಧಯ್ಯನವರು ಹಿಂದಿ ಪತ್ರಿಕೆಗಳಲ್ಲಿ ಮಾಸ್ತಿ, ಮಧ್ವಾಚಾರ್ಯ ಹಾಗೂ ಬಸವೇಶ್ವರರ ಬಗ್ಗೆ ಲೇಖನಗಳನ್ನು ಬರೆದರು. ಹೈದರಾಬಾದ ಕರ್ನಾಟಕ ಸಾಹಿತ್ಯ ಮಂದಿರವನ್ನು ಲೇಖಕರ ತ್ಯಾಗ ಪರಿಶ್ರಮದಿಂದ ಆರ್ಥಿಕವಾಗಿ ಸುಭದ್ರವಾಗುವಂತೆ ಮಾಡಿ ಪುಸ್ತಕ ಪ್ರಕಟಿಸ ತೊಡಗಿದರು.

ಸಿದ್ಧಯ್ಯನವರು ವಿಶ್ವಕಥಾ ಸಾಹಿತ್ಯದಿಂದ ಕಥೆಗಳನ್ನು ಆರಿಸಿ ಅನುವಾದಿಸಿ **"ಕಥಾಮಂಜರಿ"** ಎಂಬ ಕಥಾ ಸಂಗ್ರಹ ಸಂಪಾದಿಸಿ ಪ್ರಕಟಿಸಿದರು. ಅದೇ ರೀತಿಯಾಗಿ

ಸಿದ್ಧಯ್ಯನವರು ಮಕ್ಕಳ ಸಾಹಿತ್ಯ ಸೃಷ್ಟಿಸತೊಡಗಿದ್ದು ಆಕಸ್ಮಿಕವಾಗಿ ಎಂದೇ ಹೇಳಬೇಕು. ಒಮ್ಮೆ ಡಿ.ಕೆ.ಭೀಮಸೇನರಾಯರು ಪಠ್ಯಪುಸ್ತಕ ರಚನೆಯಲ್ಲಿ ಮಗ್ನರಾಗಿದ್ದಾಗ ಸಿದ್ಧಯ್ಯನವರು ಅಲ್ಲಿಗೆ ಹೋದರು. ಆಗ ಅವರು ಎರಡನೆಯ, ಮೂರನೆಯ ತರಗತಿಯ ಪಠ್ಯಗಳಿಗೆ ಎರಡು ಮಕ್ಕಳ ಪದ್ಯ ಬೇಕು ಈಗಲೇ ಬರೆದುಕೊಡು ಎಂದು ಹೇಳಿ ಕಾಗದ ಪೆನ್ನು ಮುಂದಿಟ್ಟಾಗ ಆಗಲಿ ಪ್ರಯತ್ನಿಸುವೆ ಎಂದು ಹೇಳಿ ಅಲ್ಲಿಯೇ ಕುಳಿತು **'ಕುದುರೆ'** ಮತ್ತು **'ಕರಡಿಯ ಕುಣಿತ'** ಎಂಬೆರಡು ಪದ್ಯ ಬರೆದರು. ಭೀಮಸೇನರಾಯರು "ಬಹಳ ಚೆನ್ನಾಗಿ ಬರೆಯುತ್ತೀರಿ, ಬಿಡಬೇಡಿರಿ ಬರೆಯುತ್ತಾ ಹೋಗಿ" ಎಂದು ಪ್ರೋತ್ಸಾಹವನ್ನಿತ್ತರು. ನಂತರ "ತುಪ್ಪಾರೊಟ್ಟಿ ಗೇಗೇಗೇ" "ತಿರುಗಲೆ ತಿರುಗಲೆ ತಿರುಗುಯ್ಯಾಲೆ" ಎಂಬ ಎರಡು ಮಕ್ಕಳ ಕವನ ಸಂಕಲನಗಳನ್ನು ಪ್ರಕಟಿಸಿದರು.

ಆಗ ಮಹತ್ವದ ಕವಿಗಳೆನಿಸಿದ್ದ ಶಾಂತರಸರು, ಕಲಾನಂದರು, ಅಮರಾನಂದರು, ಶಂಕರಣ್ಣ ಮೊದಲಾದವರು ಸೇರಿ 'ಸಂಗಡಿಗರ ಸಮಿತಿ'ಯನ್ನು ಪ್ರಾರಂಭಿಸಿದರು. 'ಮುಸುಕು ತೆರೆ' ಎಂಬ ಗದ್ಯ ಪದ್ಯ ಸಂಕಲನವನ್ನು ಹೊರತಂದರು. ಇದರಲ್ಲಿ ಈ ಭಾಗದ ಕವಿಗಳ, ಲೇಖಕರ ಪರಿಚಯವಾಯಿತು. ಸಿದ್ಧಯ್ಯನವರು "ಜಲಪಾತ" ಕವನ ಸಂಕಲನ ಪ್ರಕಟಿಸಿದಾಗ ಪ್ರಕಾಶಕರಿಂದುಂಟಾದ ಅಡೆತಡೆ ಗಮನಿಸಿ ತಮ್ಮದೇ ಆದ ಒಂದು ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಬಗೆದು ತಮ್ಮ ಸಹೋದರ ಅನ್ನದಾನಿಯವರನ್ನು ಆ ಕೆಲಸಕ್ಕೆ ತೊಡಗಿಸಿ, "ಶ್ರೀ ಭಾರತಿ ಪ್ರಿಂಟರಿ" ಎಂಬ ಮುದ್ರಣಾಲಯವನ್ನು, "ಸಹ ಜೀವನ ಸಾಹಿತ್ಯ ಮಾಲೆ" ಎಂಬ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿದರು. ಅದರಿಂದ **"ಕರುಣಾ ಶ್ರಾವಣ"**ವೆಂಬ ಕವನ ಸಂಕಲನ, **"ತುಷಾರ ಹಾರ"**ವೆಂಬ ಕಿರುಗತೆಗಳ ಸಂಗ್ರಹ ಪ್ರಕಟಿಸಿದರು. ಮಾನ್ವಿಯವರ **ಸಂಸಾರ ನೀತಿ**, ಅನ್ನದಾನಿಯವರ **ಚೆನ್ನಬಸವ ಸಾಹಿತ್ಯ** ಪ್ರಕಟವಾದವು.

ಸಿದ್ಧಯ್ಯನವರು ಅನೇಕ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ರೂಪಕಗಳನ್ನು ನಾಟಕಗಳನ್ನು ಬರೆಯುತ್ತಿದ್ದರು. ಶ್ರೀ ದೇವೇಂದ್ರಕುಮಾರ ಹಕಾರಿ, ಕೃಷ್ಣಮೂರ್ತಿ, ಎಚ್.ಜೆ.ಉಪಾಧ್ಯಾಯ, ಶ್ರೀ ಶರಣಬಸವ ಜಾವಳಿ ಮೊದಲಾದವರು ಆಗ ಉದಯೋನ್ಮುಖ ಕವಿಗಳಾಗಿದ್ದರು. ಎಲ್ಲರೂ ಕುಳಿತು ಒಬ್ಬೊಬ್ಬರ ಕವಿತೆ ಕೇಳಿ ಚರ್ಚಿಸುತ್ತಿದ್ದರು. ವಾರ್ಷಿಕೋತ್ಸವಗಳಲ್ಲಿ ನಾಡಹಬ್ಬಗಳಲ್ಲಿ ಇವರೆಲ್ಲ ಸಹಕರಿಸುತ್ತಿದ್ದರು. ಹೈದರಾಬಾದ್‌ನಲ್ಲಿ ಮಾನ್ವಿಯವರ ಹಿರಿತನದಲ್ಲಿ ಅನೇಕ ಸಾಹಿತ್ಯ ಚಟುವಟಿಕೆಗಳು ನಡೆಯುತ್ತಿದ್ದವು.

ಹೈದರಾಬಾದಗೆ ಪ್ರೊ.ಎಚ್.ಬಿ.ಕುಲಕರ್ಣಿಯವರು ಬಂದದ್ದು ಸಿದ್ಧಯ್ಯನವರಿಗೆ ಬಲಬಂದಂತಾಗಿತ್ತು. ಡಾ.ಜಿ.ಎಸ್.ಮೇಲ್ಕೋಟೆ, ವಿದ್ವಾನ್‌ಎಫ್.ಜಿ.ಮಠದ, ಪ್ರೊ.ಪದ್ಮನಾಭ ಪುರಣಿಕ, ಶ್ರೀ ಜಿ.ವಿ.ಸೂಳಿಭಾವಿ, ಗಣೇಶ ಜೋಶಿ, ಪ್ರೊ ರಾಮ



ಚಂದ್ರರಾವ್ ಪಟವಾರಿ, ಪಾಂಡುರಂಗಾಚಾರ್ಯವೈದ್ಯ, ಪ್ರೊ ಅಚ್ಚುತರಾವ್, ಶ್ರೀ ಎನ್.ಎಸ್.ರಾಘವನ್, ಸಿ.ರಂಗಾಚಾರ್, ಕೃಷ್ಣಾಚಾರ್ಯ ಜೋಶಿ, ಜಿ.ರಾಮಾಚಾರ್, ಜನಾರ್ಧನರಾವ್ ದೇಸಾಯಿ, ಎಲ್.ಜಿ.ಹೊಂಬಳ, ಸೌ ಮೈನಾತಾಯಿ ಖೇಣಿ, ಅನ್ನಪೂರ್ಣ ಸ್ವಾಮಿಗಳು, ದಿವಾನ್ ಸಂಗಯ್ಯನವರು, ಮಧ್ವರಾವ ಅನ್ವರಿ, ಜಯಾಚಾರ್ಯ ಪುರಾಣಿಕ ಮೊದಲಾದ ಕನ್ನಡಿಗರು ಕನ್ನಡ ಆಂದೋಲನದ ಆಧಾರ ಸ್ತಂಭಗಳಂತಿದ್ದರು.

ಪೋಲೀಸ್ ಕಾರ್ಯಾಚರಣೆಯ ತರುವಾಯ ತಹಸೀಲ್ದಾರರಾಗಿ ಆಯ್ಕೆಗೊಂಡವರಲ್ಲಿ ಅನೇಕ ಕನ್ನಡ ಯುವಕರಿದ್ದರು. ಅವರಲ್ಲಿ ಲೇಖಕರೆಂದರೆ ಶ್ರೀ ಜಯತೀರ್ಥ ರಾಜಪುರೋಹಿತರು. ಒಳ್ಳೆಯ ಕವಿಯಾಗಬಹುದಾಗಿದ್ದ ರಾಮರಾವ್ ಆಗಲೇ ತೀರಿ ಹೋಗಿದ್ದರು. ಒಳ್ಳೆಯ ಕಥೆಗಾರರಾಗಿದ್ದ ಕಠಾವಿಯವರು ಬರೆಯುವದನ್ನು ನಿಲ್ಲಿಸಿದ್ದರು. ನರಸಿಂಗರಾವ್ ಮದರಕಲ್ ಅವರೂ ಮುಂದುವರಿಸಲಿಲ್ಲ.

## ಪ್ರಾದೇಶಿಕ ಸಾಹಿತ್ಯ ಸಮ್ಮೇಳನ

ಹೈದ್ರಾಬಾದ ಪ್ರದೇಶದ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಹಾಪೂರ ತಾಲೂಕಿನ ಯಾಳಗಿ ಎಂಬ ಗ್ರಾಮದಲ್ಲಿ ನಡೆಸಿದರು. ಶ್ರೀ ಮಾನ್ವಿ ನರಸಿಂಗರಾಯರು ಅಧ್ಯಕ್ಷರಾಗಿದ್ದರು. ಶ್ರೀ ಎಲ್.ಎನ್.ಗುಪ್ತಾ ಅವರು ಉದ್ಘಾಟಕರಾಗಿದ್ದರು. ಅಲ್ಲಿಯ ಶೇಷಗಿರಿರಾವ್ ಹೊಳಿ. ಸಗರ ಕೃಷ್ಣಾಚಾರ್ಯರು, ರಂಗಂಪೇಟೆಯ ಬುದ್ಧಿವಂತ ಶೆಟ್ಟರು, ಯಾದಗಿರಿಯ ವೀರೇಶ್ವರ ಶಾಸ್ತ್ರಿಗಳು, ಗುರುಸಿದ್ಧ ಶಾಸ್ತ್ರಿಗಳು ಶಹಾಪೂರದ ವಿರೂಪಾಕ್ಷಶಾಸ್ತ್ರಿಗಳು, ಪಂಚಾಕ್ಷರಿ ಗವಾಯಿಗಳು ಇನ್ನೂ ಅನೇಕ ಆಸಕ್ತರ ಸಹಾಯ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಯಿತು.

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಮ್ರಾ ಗ್ರಾಮದಲ್ಲಿ ಹೈದ್ರಾಬಾದ್ ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕೊನೆಯ ಸಮ್ಮೇಳನ ನಡೆಯಿತು. ಡಾ.ಪದ್ಮನಾಭ ಪುರಾಣಿಕರು ಅಧ್ಯಕ್ಷರಾಗಿ ಶ್ರೀ ನಿಜಲಿಂಗಪ್ಪನವರು ಉದ್ಘಾಟಕರಾಗಿ ಆಗಮಿಸಿದ್ದರು. ಮರುವರ್ಷ ಕರ್ನಾಟಕದ ಏಕೀಕರಣವಾದುದರಿಂದ ಪ್ರತ್ಯೇಕ ಸಮ್ಮೇಳನ ಮಾಡುವ ಅವಶ್ಯಕತೆಯಿರಲಿಲ್ಲ.

ಮೈಸೂರಿನಲ್ಲಿ ನಡೆದ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶಿವರಾಂ ಕಾರಂತರು ಅಧ್ಯಕ್ಷರಾಗಿದ್ದರು. ಲೇಖಕರ ಗೋಷ್ಠಿಯ ಅಧ್ಯಕ್ಷತೆಯನ್ನು ಸಿದ್ಧಯ್ಯನವರು ವಹಿಸಿದ್ದರು. ಆಗ ಕುಲಪತಿಗಳಾಗಿದ್ದ ಕುವೆಂಪು ಅವರೇ ಸ್ವಾಗತಾಧ್ಯಕ್ಷರಾಗಿದ್ದರು. ಈ ಸಂದರ್ಭದಲ್ಲಿ ಹಲವಾರು ವಿದ್ವಜ್ಜನರ ಪರಿಚಯ ಹಾಗೂ ಸ್ನೇಹ ಸಿದ್ಧಯ್ಯ ಪುರಾಣಿಕರಿಗಾಯಿತು.

ಅವರಲ್ಲಿ ದೇ.ಜವರೇಗೌಡ, ಕೆ.ವಿ.ರಾಘವಾಚಾರ್ಯ, ಅಮೇರಿಕೆಯಿಂದ ಆಗ ತಾನೇ ಮರಳಿದ್ದ ಹಾ.ಮಾ.ನಾ ಮುಂತಾದವರು ಪ್ರಮುಖರು.

## ಡೆಪ್ಯುಟಿ ಕಲೆಕ್ಟರ್, ತಾಂಡೂರ

೧೯೫೫ರಲ್ಲಿ ಸಿದ್ಧಯ್ಯನವರಿಗೆ ತಾಂಡೂರಿಗೆ ವರ್ಗವಾಯಿತು. ಯಾದಗಿರಿ ಸಬ್ ಡಿವಿಜನ್ನಿನ ಆಡಿಷನಲ್ ಚಾರ್ಜು ತೆಗೆದುಕೊಳ್ಳಬೇಕಾಯಿತು. ಯಾದಗಿರಿಯಲ್ಲಿ ಪ್ರಾರಂಭವಾಗಿದ್ದ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೆಲಸ ಆಗಿರಲಿಲ್ಲ. ಅದನ್ನು ಯಶಸ್ವಿಗೊಳಿಸಬೇಕೆಂಬುದೇ ಜಹೀರ್ ಅಹಮ್ಮದ್ ಸಾಹೇಬರ ಉದ್ದೇಶವಾಗಿದ್ದುದರಿಂದ ಸಿದ್ಧಯ್ಯನವರಿಗೆ ಆ ಜವಾಬ್ದಾರಿ ಹೊರಿಸಿದರು. ತಾಂಡೂರಿನಲ್ಲಿ ಎಂ.ರಾಘವೇಂದ್ರ ರಾವ್ ತಹಸೀಲ್ದಾರ್ ಹಾಗೂ ಶ್ರೀ ಶಾಂತಗಿರಿ ಸಬ್ ಇನ್ಸ್‌ಪೆಕ್ಟರಾಗಿದ್ದರು. ಸಾರ್ವಜನಿಕರ, ಕಾರ್ಯಕರ್ತರ ಸಹಕಾರ ಕೂಡ ದೊರೆಯಿತು. ಅನೇಕ ಜನಹಿತ ಕಾರ್ಯಗಳನ್ನು ಪ್ರಾರಂಭಿಸಿದರು. ಕರ್ನಾಟಕ ಏಕೀಕರಣವಾದ ಮೇಲೆ ಸಿದ್ಧಯ್ಯನವರು ಆಂಧ್ರದಲ್ಲಿ ಉಳಿದಿದ್ದರೆ ಅವರಿಗೆ ಇನ್ನೂ ಹೆಚ್ಚಿನ ಲಾಭವಾಗುತ್ತಿದ್ದಿತ್ತು. ಆದರೆ ಅವರು ಕರ್ನಾಟಕಕ್ಕೆ ಬರುತ್ತೇನೆಂದುದು ಅವರ ಕನ್ನಡ ನಾಡು ನುಡಿಯ ಮೇಲಿನ ಅಭಿಮಾನವನ್ನು ಸೂಚಿಸುತ್ತದೆ.

ತಾಂಡೂರಲ್ಲಿರುವಾಗ ವಿನೋಬಾಭಾವೆ ಅವರ ಭೂದಾನ ಯಾತ್ರೆ ನಡೆದಿತ್ತು. ಶ್ರೀ ವೀರೇಂದ್ರಪಾಟೀಲರ ಪ್ರಯತ್ನದಿಂದ ಚಿಂಚೋಳಿ ತಾಲೂಕಿಗೆ ಒಂದು ರಾಷ್ಟ್ರೀಯ ವಿಸ್ತರಣಾ ಯೋಜನೆ ದೊರೆಯಿತು. ಮತ್ತು ಶಹಾಪೂರ ತಾಲೂಕಿಗೂ ಮಂಜೂರಾಯಿತು. ಇವೆಲ್ಲವುಗಳಿಗೆ ಸಿದ್ಧಯ್ಯನವರನ್ನು ಪ್ರಾಜೆಕ್ಟ್ ಎಕ್ಸಿಕ್ಯುಟಿವ್ ಆಫೀಸರರನ್ನಾಗಿ ಮಾಡಿದರು.

## ದಸರಾ ಕವಿ ಸಮ್ಮೇಳನ

ಏಕೀಕೃತ ಕರ್ನಾಟಕದ ಪ್ರಥಮ ದಸರಾ ಮಹೋತ್ಸವದ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನ ಬಂದಿತು. ಶ್ರೀ ದ.ರಾ.ಬೇಂದ್ರೆಯವರು ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಸಿದ್ಧಯ್ಯನವರು "ರಾಷ್ಟ್ರ ರಾಜೇಶ್ವರಿ"ಗೆ ಎಂಬ ಕವನ ಓದಿದರು.

## ಅಭಿವೃದ್ಧಿಕಾರ್ಯ

ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವುದಕ್ಕಾಗಿ ಗ್ರಾಮಗಳಲ್ಲಿ ಬಾವಿಗಳನ್ನು ತೋಡಿಸಿ, ಕೆರೆಯ ದುರಸ್ತಿ ಮಾಡಿಸಿ, ಸಣ್ಣ ನೀರಾವರಿ ಕಾಮಗಾರಿಗಳನ್ನು



ಪ್ರಾರಂಭಿಸಿದರು. ಶಹಾಪೂರ ಕ್ಷೇತ್ರದಲ್ಲಿ ಶಾಲಾ ಕಟ್ಟಡಗಳನ್ನು ಕೈಗೆತ್ತಿಕೊಂಡರು. ಸಲಹಾ ಸಮಿತಿಯ ಅನುಮತಿ ಪಡೆದು ಒಂದು ಕೆಲಸಕ್ಕೆಂದು ನಿಗದಿಯಾದ ಹಣವನ್ನು ಬೇರೊಂದಕ್ಕೆ ಬಳಸದೇ ಅವಶ್ಯಕತೆಗನುಗುಣವಾಗಿ ಹಣ ಖರ್ಚು ಮಾಡುತ್ತಿದ್ದರು.

ಅಧಿಕಾರದ ಅವಧಿಯಲ್ಲಿ ನಡೆದ ಕೆಲವು ಘಟನೆಗಳನ್ನು ಸಿದ್ಧಯ್ಯನವರು ನೆನಪಿಸಿಕೊಂಡು ಹೇಳುತ್ತಿದ್ದರು. "ಒಂದು ಹಳ್ಳಿಯಲ್ಲಿ ಶ್ರೀಮಂತ ದೇವಾಲಯ ಅದಕ್ಕೊಂದು ದೇವಾಲಯ ಸಮಿತಿ. ಅದರ ಅಧ್ಯಕ್ಷ ದೇವಾಲಯದ ಆಭರಣಗಳನ್ನು ಅಪಹರಿಸಿರುವನೆಂಬ ದೂರು ಬಂದಾಗ ಸಿದ್ಧಯ್ಯನವರು ಅವನ ಮನೆಯ ಮೇಲೆ ಹೇಳದೆ ಕೇಳದೆ ದಾಳಿ ಮಾಡಿದಾಗ ಆಭರಣಗಳೆಲ್ಲ ಹೊರಬಿದ್ದವು. ಅಂದಿನಿಂದ ಆ ಆಭರಣಗಳು ತಹಸೀಲ್ದಾರರ ಜವಾಬ್ದಾರಿಯಲ್ಲಿರುವಂತೆ ಮಾಡಿದರು. ಆ ಸಮಿತಿಯನ್ನು ಬದಲಿಸಿ ಪ್ರಾಮಾಣಿಕರನ್ನು ನೇಮಿಸಿದರು."

ಇನ್ನೊಬ್ಬ ಸರಪಂಚ ಪಂಚಾಯತಿಯಲ್ಲಿರುವ ರೇಡಿಯೋ ತನ್ನ ಮನೆಯಲ್ಲಿರಿಸಿಕೊಂಡಿದ್ದ. ಅದು ಎಲ್ಲರಿಗಾಗಿರುವುದರಿಂದ ಪಂಚಾಯತಿಯಲ್ಲಿಟ್ಟು ಸಂಜೆ ಎಲ್ಲರೂ ಕೇಳುವಂತೆ ಮಾಡಿದರು. ಪಂಚಾಯತಿ ನೌಕರರನ್ನು ತಮ್ಮ ಹೊಲಗಳಲ್ಲಿ ದುಡಿಸಿಕೊಳ್ಳುತ್ತಿದ್ದ ಸರಪಂಚರಾರೋ, ಪಂಚಾಯತಿಯ ಕಾರ್ಯಾಲಯಕ್ಕೆ ತಮ್ಮ ಕೊಠಡಿಯನ್ನು ಕೊಟ್ಟು ಬಾಡಿಗೆ ಪಡೆಯುತ್ತಿದ್ದವರಾರೋ, ತಮ್ಮ ಮನೆಯ ಮುಂದೆ ಮಾತ್ರ ಪಂಚಾಯತಿಯ ವೆಚ್ಚದಲ್ಲಿ ದೀವಟಿಗೆ ಉರಿಸುತ್ತಿದ್ದವರಾರೋ, ಇಂಥವು ಸಾಕಷ್ಟು ನಡೆಯುತ್ತಿದ್ದವು.

ಬರಗಾಲ ಕಾಮಗಾರಿಗಳೆಂದು ರಸ್ತೆಗಳ ಕಾರ್ಯಕ್ರಮ ರೂಪಿಸಿದರು. ಹೊಲಗಳ ಒಡೆಯರು ಸಂತೋಷದಿಂದ ಭೂಮಿ ಬಿಟ್ಟುಕೊಟ್ಟರು. ಒಬ್ಬ ಅಧಿಕಾರಿ ಬೇಡುವುದು ಹೆಚ್ಚೋ, ನಾವು ಕೊಡುವುದು ಹೆಚ್ಚೋ ಎನ್ನುತ್ತಿದ್ದರು. ಆದರೆ ಒಂದೆಡೆ ಮಾತ್ರ ಒಬ್ಬ ರೈತ ತನ್ನ ಹೊಲದಲ್ಲಿ ರಾತ್ರೋರಾತ್ರಿ ಒಂದು ಸಣ್ಣ ಗುಡಿ ಕಟ್ಟಿ ಅದರಲ್ಲಿ ಒಂದು ಗುಂಡು ಕಲ್ಲನ್ನಿಟ್ಟು ವಿಭೂತಿ ಕುಂಕುಮ ಹಚ್ಚಿದ್ದ. ಅಲ್ಲಿಯ ವಿಕಾಸ ಮಂಡಲದ ಅಧ್ಯಕ್ಷ ಇದನ್ನು ಬಂದು ಹೇಳಿದ. ಆಗ ಸಿದ್ಧಯ್ಯನವರು ಉಪಾಯ ಹೇಳಿದರು. ಅಂದೇ ರಾತ್ರಿ ಗುಡಿ ಒಡೆದು ರಸ್ತೆ ನಿರ್ಮಾಣ ಮಾಡಿದರು. ಆ ರೈತನಿಗೆ ಏನೂ ಮಾತನಾಡಲಾಗಲಿಲ್ಲ. ವಕೀಲರನ್ನು ಕೇಳಿದ. ಗುಡಿ ಇದ್ದುದಕ್ಕೆ ಸಾಕ್ಷಿ ಏನಿದೆ. ಊರಿನವರೊಂದಿಗೆ ಹೊಂದಿಕೊಂಡಿರು ಎಂದು ಹೇಳಿ ಕಳಿಸಿದರಂತೆ. ಹೀಗೆ ಯಾವುದೇ ಕಾರ್ಯ ಮಾಡಬೇಕಾದರೂ ಊರವರ ವಿಶ್ವಾಸ ಗಳಿಸಿಕೊಂಡರೆ ಲೀಲಾಜಾಲವಾಗಿ ಕೆಲಸ ಮಾಡಬಹುದೆಂಬುದಕ್ಕೆ ಉದಾಹರಣೆ ಇದು.

ಸಿದ್ಧಯ್ಯನವರು ಎಂಥ ದಕ್ಷ ಆಡಳಿತಗಾರರು ಎಂಬುದನ್ನು ಒಬ್ಬ ಮುದುಕ, ಶ್ರೀ ಲಿಂಗಣ್ಣ ಸತ್ಯಂಪೇಟೆಯವರಿಗೆ ಹೇಳಿದ್ದು ಹೀಗೆ "ಯಾದಗಿರಿ ತಾಲೂಕಿನಲ್ಲಿ ನಜರಾಪುರ

ಎಂಬುದು ಚಿಕ್ಕಹಳ್ಳಿ. ಆ ಹಳ್ಳಿಗೆ ರಸ್ತೆಯಿಲ್ಲ. ಗುಡ್ಡದ ವಾರ್‍ಯಾಗಿದೆ. ಒಂದು ಸಲ ಏನಾಯ್ತಂದ್ರೆ ಗುಡಿಸಲುಗಳಿಗೆಲ್ಲ ಬೆಂಕಿ ಬಿದ್ದು ಆರವತ್ತೆಪ್ಪತ್ತು ಗುಡಿಸಲು ಸುಟ್ಟು ಬೂದಿ ಆದವು. ಎಲ್ಲ ಜನ ಕೆಲಸಕ್ಕೆ ಹೋದ ಮೇಲೆ ಮಕ್ಕಳು ಒಲೆ ಉರಿ ಹಚ್ಚಿದಾಗ ಗುಡಿಸಲಿಗೆ ಹತ್ತಿಕೊಂಡು ಮೂರ್ನಾಲ್ಕು ಹುಡುಗರು, ಒಬ್ಬ ಮುದುಕ ಸುಟ್ಟು ಸುಣ್ಣಾ ಆಗಿದ್ರು. ಕೆಲಸಕ್ಕೆ ಹೋದ ಮಂದಿ ಬಂದಿತು. ಕಾಳು ಕಡಿ ರೊಕ್ಕ ರೂಪಾಯಿ ಬಟ್ಟೆ ಬರಿ ಎಲ್ಲಾ ಸುಟ್ಟು ಎಲ್ಲರೂ ಅಳುತ್ತ ಗೋಳಾಡುತ್ತಿದ್ದರು. ಆಗ ಒಮ್ಮೆಲೆ ಭರ್ ಎಂದು ಸಪ್ಪಳಾಯಿತು. ಊರಿಗೆ ಎಂದೂ ವಾಹನ ಬಂದಿರಲಿಲ್ಲ. ಅದರಿಂದ ಅಧಿಕಾರಿ ಯೊಬ್ಬರು ಇಳಿದರು. ಭಾಳ ದಿನದಿಂದ ಗುರ್ತ ಇರೋರ ಹಂಗ ಮಾತಾಡ್ಸಿದ್ರು. ಬಹಳ ಸರಳ. ಅಧಿಕಾರಿ ಅನ್ನುವ ಬಿಗುಮಾನ ಇರಲಿಲ್ಲ. ಅವರೇ ಸಿದ್ಧಯ್ಯ ಪುರಾಣಿಕ ಎಂದು ನಂತರ ತಿಳಿಯಿತು. ಇಂಥ ಅಧಿಕಾರಿಯನ್ನ ಜೀವಮಾನದಲ್ಲೇ ನೋಡಿರಲಿಲ್ಲ. ನಾವೇ ಕಚೇರಿ ಮುಂದೆ ಹೋಗಿ ನಿಂತರೂ ಕೇಳೋರು ದಿಕ್ಕಿರುವದಿಲ್ಲ. ಅವರು ಬರುವಾಗ ಹಾಗೇ ಬಂದಿರಲಿಲ್ಲ. ಧಾನ್ಯ, ಜಮಖಾನಿ, ಚಾದರ, ತಗಡಿನ ಟೀನು ಎಲ್ಲಾ ತಂದಿದ್ದರು. ಇಂಥವರು ಎಲ್ಲಿ ಸಿಗುತ್ತಾರೆ. ಊರಿಗೆ ದಾರಿಯೇ ಇಲ್ಲ. ಬೆಟ್ಟದ ಪಕ್ಕದಲ್ಲಿ ಚಕ್ಕಡಿ ಬರೋದೂ ಕಷ್ಟ. ಅಂಥದ್ದರಲ್ಲಿ ಹೇಗೆ ಬಂದಿರಬಹುದು ಎಂದು ಡ್ರೈವರನ್ನು ಕೇಳಿದರೆ, "ಆದದ್ದಾಗಲಿ ಅಲ್ಲಿ ಬೆಂಕಿ ಹತ್ತಿ ಎಷ್ಟು ಜನ ಸತ್ತಿದ್ದಾರೋ ಏನೋ? ಇಲ್ಲಿ ಬಿದ್ದು ಸತ್ತರೆ ನಾವಿಬ್ರೂ ಸಾಯೋಣ, ಅದ್ಕೇನಂತೆ ಶಿವನಿದ್ದಾನೆ. ಅನುಮಾನ ಮಾಡದೆ ಜೀಪು ಬಿಡು" ಎಂದ್ರಂತೆ. "ಎಲ್ಲೋರು ತನ್ನಂಗೆ, ಎಲ್ಲೋರ ಜೀವಾನು ತನ್ನಂಗೆ ಎಲ್ಲೋರ ಸಲುವಾಗಿ ತನ್ ಜೀವ ಹೋದ್ರು ಪರವಾ ಇಲ್ಲ! ಅಂತ ನಡಕೊಂಡವನೀಗಿ ಶಿವ ಹೆಂಗ ಕೈ ಬಿಡ್ತಾನ?" ಎಂದು ಅಜ್ಜ ಹೇಳಿದ್ದು ಕೇಳಿದರೆ ಸಿದ್ಧಯ್ಯನವರು ಎಂಥ ಅಧಿಕಾರಿಗಳೆಂಬುದು ತಿಳಿದು ಬರುತ್ತದೆ.

ಕೆಲವೊಮ್ಮೆ ಹಳ್ಳಿಯ ಗೌಡ, ಹಿರಿಯರ ಮನವೊಲಿಸಿ ಅವರ ಊರುಗಳಲ್ಲಿ ಶಾಲೆ ಗಳನ್ನು ರಸ್ತೆಗಳನ್ನು ಮಾಡಿಸುವದಕ್ಕಾಗಿ ಹಲವು ಬಾರಿ ತಂತ್ರಗಳನ್ನು ಉಪಯೋಗಿಸ ಬೇಕಾಗುತ್ತಿತ್ತು. ಜಿಪುಣರಾಗಿದ್ದವರನ್ನು ಉದಾರಿಗಳನ್ನಾಗಿ, ಮೂಢನಂಬಿಕೆಗಳಿಗೆ ಬಲಿ ಯಾದವರನ್ನು ಸುಸಂಸ್ಕೃತ ಮಾಡುವ ಸನ್ನಿವೇಶಗಳು ಬರುತ್ತಿದ್ದವು.

ಯಾದಗಿರಿಯಲ್ಲಿ ಮಹಿಳಾಮಂಡಲ ಸ್ಥಾಪಿಸಿದರು. ಸಿದ್ಧಯ್ಯನವರ ಪತ್ನಿ ಸೌ.ಗಿರಿಜಾದೇವಿಯವರೇ ಅಧ್ಯಕ್ಷರಾಗಿದ್ದರು. ಶಿಶುವಿಹಾರ, ಹೊಲಿಗೆ ತರಬೇತಿ ನಡೆಸು ತ್ತಿದ್ದರು. ಅನೇಕ ಉಪನ್ಯಾಸ ಏರ್ಪಡಿಸುತ್ತಿದ್ದರು. ನಿಧಿ ಸಂಗ್ರಹಿಸಿ ಸ್ವಂತ ಕಟ್ಟಡ ಕಟ್ಟಿಸಿದರು. ಉಚಿತ ನೇತ್ರ ಪರೀಕ್ಷಾ-ಚಿಕಿತ್ಸಾ ಶಿಬಿರ ಏರ್ಪಡಿಸಿದರು ಅಲ್ಲಿ ಡಾ. ಎಂ.ಸಿ.ಮೋದಿ ಅವರು ಬಂದಿದ್ದರು. ಊರವರೆಲ್ಲರ ಸಹಕಾರ ಮಹಿಳಾ ಮಂಡಲದ ಸಹಕಾರದಿಂದ ಯಾವುದೇ ಕಾರ್ಯಕ್ರಮಗಳಿರಲಿ ಯಶಸ್ವಿಯಾಗುತ್ತಿದ್ದವು.



ನಂತರ ಯಾದಗಿರಿಯಿಂದ ಬೆಂಗಳೂರಿಗೆ ಅಣ್ಣಾರಾವ ಗಣಮುಖಿಯವರ ಅಧೀನ ಕಾರ್ಯದರ್ಶಿಯಾಗಿ ಹೋದರು.

ಯಾದಗಿರಿಯ ಪುರಜನರು ಸಿದ್ಧಯ್ಯಪುರಾಣಿಕರನ್ನು ಅತ್ಯಂತ ಪ್ರೀತಿಯಿಂದ ಬೀಳ್ಕೊಟ್ಟರು. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮುಂದುವರಿಸಿದರು. ಕಾರ್ಯಭಾರ ಹೆಚ್ಚಾದುದರಿಂದ ದೇಹಾರೋಗ್ಯ ಕೆಟ್ಟಿತು. ಬೌರಿಂಗ್ ಆಸ್ಪತ್ರೆಗೆ ಸೇರಿಸಿದ್ದರು. ಅದೃಷ್ಟ ಚೆನ್ನಾಗಿದ್ದುದರಿಂದ ಮತ್ತೆ ಮೊದಲಿನ ಆರೋಗ್ಯ ಪಡೆದರು. ಈ ಇಲಾಖೆಗೆ ಬಂದಾಗ ಹಳೆಯ ಕಡತಗಳ ವಿಲೇವಾರಿಗೇ ಹೆಚ್ಚು ದಿನ ಕಳೆಯಿತು. ಹಳ್ಳಿಗಳಲ್ಲಿ ಹೊಸ ಶಾಲೆಗಳನ್ನು ತೆರೆಸಿದರು. ಕನ್ನಡ ವಿಶ್ವಕೋಶ ಯೋಜನೆ, ಕನ್ನಡ ನಿಘಂಟು ಯೋಜನೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ, ಮಧ್ಯಾಹ್ನ ಉಪಹಾರದ ಯೋಜನೆ ಮೊದಲಾದವು ಗಳನ್ನು ಜಾರಿಗೆ ತಂದರು. ಅಚ್ಚಾಗದ ಉನ್ನತಮಟ್ಟದ ಕನ್ನಡದ ಕೃತಿಗಳ ಪ್ರಕಟನೆಗಾಗಿ ಸಹಾಯಧನ ನೀಡುವ ಪದ್ಧತಿ ಪ್ರಾರಂಭಿಸಿದರು.

## ಬೀದರ್‌ನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

೧೯೬೦ ಫೆಬ್ರುವರಿಯಲ್ಲಿ ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ವೈಭವ ಹಾಗೂ ಉತ್ಸಾಹದಿಂದ ಬೀದರನಲ್ಲಿ ನಡೆಯಿತು. "ಸಾಹಿತ್ಯ ರಚನಾಲಯ"ವನ್ನು ಪ್ರಾರಂಭಿಸಿದರು. ಬೇರೆ ಬೇರೆ ಜಿಲ್ಲೆಗಳಿಂದ ಮಕ್ಕಳ ಸಾಹಿತಿಗಳನ್ನು ಕರೆಸಿ ಅವರಿಗೆ ಆ ವಿಷಯದಲ್ಲಿ ಸಮಗ್ರವಾದ ತರಬೇತಿ ಕೊಡುವುದೇ ಉದ್ದೇಶವಾಗಿತ್ತು. ಇಂಥ ಹೊಸ ಪ್ರಯೋಗವನ್ನು ಸಿದ್ಧಯ್ಯನವರು ಮಾಡಿದ್ದರು. ತರಬೇತಿಯಲ್ಲಿ ಬರೆದವುಗಳನ್ನೆಲ್ಲ ಸಂಗ್ರಹಿಸಿ "ಮಕ್ಕಳ ಮುತ್ತು" ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಸಿದ್ಧಯ್ಯ ಪುರಾಣಿಕರನ್ನು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ನಿರ್ದೇಶಕರೆಂದು ನೇಮಿಸಿದರು. ಇದೇ ಸಂದರ್ಭದಲ್ಲಿ ಸಿದ್ಧಯ್ಯನವರು ಐ.ಎ.ಎಸ್ ಅಧಿಕಾರಿಗಳಾದರು. ಸಿದ್ಧಯ್ಯನವರು ದಕ್ಷಿಣ ಭಾರತದ ಪ್ರಚಾರಾಧಿಕಾರಿಗಳಿಗೆ ಒಂದು ಶಿಕ್ಷಣ ಶಿಬಿರವನ್ನು ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಮಾರ್ಗದರ್ಶಿಗಳಾಗಿ ಕೆಲಸ ಮಾಡಲು ಪದವೀಧರರಿಗೆ ಧಾರವಾಡದಲ್ಲಿ ಶಿಕ್ಷಣ ಶಿಬಿರವೊಂದನ್ನು ನಡೆಸಿದರು.

ಆಗ ಧೂಮಕೇತುವಿನಂತೆ ಚೀಣೀಯರ ದ್ರೋಹಪೂರ್ಣ ದಾಳಿ ಬಂದಿತು. ವಾರ್ತಾ ಇಲಾಖೆಗಳ ನಿರ್ದೇಶಕರ ಸಭೆಯನ್ನು ಗೃಹ ಮಂತ್ರಿಗಳು ಕರೆದರು ಆಗ ಸಿದ್ಧಯ್ಯನವರು ಹೋಗಿದ್ದರು. ಅಲ್ಲಿ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂ ಅವರು ಮಾತನಾಡಿದರು. "ದೇಶಕ್ಕೆ ದೇಶವೇ ಒಂದು ವ್ಯಕ್ತಿಯಂತೆ ಎದ್ದು ನಿಂತು, ಸಡ್ಡು ಹೊಡೆದು, ಸರ್ವಸಾಮರ್ಥ್ಯದೊಡನೆ, ಈ ದಾಳಿಯನ್ನು ಎದುರಿಸಬೇಕೆಂಬುದೇ ಅಂದಿನ ಅವರ ವೀರ ವಾಣಿಯಾಗಿದ್ದಿತು."

ಯುದ್ಧದ ಸನ್ನಿವೇಶವಾದ್ದರಿಂದ ಭಿತ್ತಿ ಪತ್ರಗಳ ವಿತರಣೆ, ಸಭೆ, ಮೆರವಣಿಗೆಗಳ ಸಂಘಟನೆ, ರಕ್ಷಣಾ ನಿಧಿ ಸಂಗ್ರಹ, ವೀರಗೀತೆಗಳ ಪ್ರಸಾರ ಇತ್ಯಾದಿ ಕಾರ್ಯಕ್ರಮಗಳು ಹಗಲಿರುಳೆನ್ನದೆ ಅವ್ಯಾಹತವಾಗಿ ನಡೆದವು. "ಜಯಭೇರಿ" ಎಂಬ ವಾರ ಪತ್ರಿಕೆ ಹೊರಡಿಸಿದರು. ಅದರ ಸಂಪಾದಕೀಯಗಳು ಓದುಗರನ್ನು ಎಚ್ಚರಿಸುವಂತಿದ್ದವು. ಸಿದ್ಧಯ್ಯನವರು "ಯುದ್ಧಸ್ವ" ಎಂಬ ರಣಗೀತೆ ಆಕಾಶವಾಣಿಗಾಗಿ ಬರೆದರು. **ಭಾರತ ವೀರ** ಎಂಬ ನಾಟಕ ರಚನೆಗೊಂಡದ್ದು ಈ ಸಂದರ್ಭದಲ್ಲಿಯೇ. ಅನೇಕ ಕಡೆ ನಾಟಕ ಅಭಿನಯಿಸಲ್ಪಟ್ಟಿತು. **'ರಕ್ಷಣಾ ಯಾಗ'**ವೆಂಬ ಸಾಕ್ಷಚಿತ್ರ ಪ್ರದರ್ಶಿತವಾಗತೊಡಗಿತು. ಇವೆಲ್ಲ ಕೆಲಸ ಕಾರ್ಯಗಳಲ್ಲಿ ಸಿದ್ಧಯ್ಯನವರೊಡನೆ ಎನ್.ಎಸ್.ವೆಂಕೋಬರಾಯರು ಸಹಾಯ, ಸಹಕಾರ ಸಲ್ಲಿಸಿದರು.

ಚೀಣೀಯರ ದುರಾಕ್ರಮಣ ಪೂರಿತ ಯುದ್ಧ ಮುಗಿದರೂ ಅದರ ಪರಿಣಾಮವಾಗಿ ಅನುಷ್ಠಾನಕ್ಕೆ ಬಂದಿದ್ದ ಸುವರ್ಣ ನಿಯಂತ್ರಣಾಜ್ಞೆಯಿಂದ ಅಕ್ಕಸಾಲಿಗರು ನಿರುದ್ಯೋಗಿಗಳಾದರು. ಅವರ ಪುನರ್ ವಸತಿ ಕಾರ್ಯಕ್ಕಾಗಿಯೇ ರಾಜ್ಯಕ್ಕೊಬ್ಬರಂತೆ ಗೋಲ್ಡ್ ಕಂಟ್ರೋಲ್ ಆಫೀಸರರು ನಿಯುಕ್ತರಾದರು. ಕರ್ನಾಟಕದಲ್ಲಿ ಅಂಥದೊಂದು ಹುದ್ದೆ ಮಂಜೂರಾಗಿ ಸಿದ್ಧಯ್ಯನವರು ಹಣಕಾಸು ಇಲಾಖೆಯ ಉಪಕಾರ್ಯದರ್ಶಿ ಹಾಗೂ ಸುವರ್ಣ ನಿಯಂತ್ರಣಾಧಿಕಾರಿಯೆಂದು ನೇಮಕರಾದರು. ಅಕ್ಕಸಾಲಿಗರನ್ನು ಕಾರ್ಖಾನೆ ಹಾಗೂ ಮುದ್ರಣಾಲಯಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಸೇರಿಸುವ, ಭೂಮಿಯನ್ನು ಕೊಡಿಸುವ ಕಾರ್ಯವನ್ನು ಸೂರಾಚಾರ್ ವಕೀಲರ ಸಹಾಯದಿಂದ ಮಾಡಿದರು. ಸಣ್ಣ ಉಳಿತಾಯ ಯೋಜನೆಯಲ್ಲಿ ಸಿದ್ಧಯ್ಯನವರು ಪಾದಯಾತ್ರೆ ಮೂಲಕ ಅರ್ಧ ಕೋಟಿ ಹಣ ಸಂಗ್ರಹ ಮಾಡಿದರು.

## ಕೊಡಗಿನ ಜಿಲ್ಲಾಧಿಕಾರಿಯಾಗಿ

ಕೊಡಗಿಗೆ ವರ್ಗವಾದಾಗ ಸಿದ್ಧಯ್ಯನವರಿಗೆ ಬಹಳ ಅನಾನುಕೂಲವಾಯಿತು. ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಮಕ್ಕಳು ಉನ್ನತ ವ್ಯಾಸಂಗದಲ್ಲಿರುವುದರಿಂದ ಒಬ್ಬರೇ ಕೊಡಗಿಗೆ ಹೋದರು. ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳುವುದು ತುಂಬಾ ಕಷ್ಟವಾಯಿತು. ಜನರ ಸಮಸ್ಯೆಗಳನ್ನು ಬಗೆಹರಿಸಿದುದರಿಂದ ಬೇಗನೆ ಜನಪ್ರಿಯರಾದರು. ಅದೇ ವೇಳೆಗೆ ಪಾಕಿಸ್ಥಾನ ಯುದ್ಧ ಪ್ರಾರಂಭವಾಯಿತು. ಕೊಡಗಿನ ವೀರರಿಂದ ಸಾಕಷ್ಟು ಹಣವನ್ನು ಸಂಗ್ರಹಿಸಿ ರಕ್ಷಣಾನಿಧಿಗೆ ಕಳುಹಿಸಿದರು. ರಕ್ಷಣಾನಿಧಿ, ಸೈನಿಕಭರ್ತಿ, ಸಣ್ಣ ಉಳಿತಾಯ ಈ ಮೂರು ಕ್ಷೇತ್ರಗಳಲ್ಲಿ ಕೊಡಗು ಜಿಲ್ಲೆ ಪ್ರಥಮಸ್ಥಾನ ಪಡೆಯಿತು. ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಸಿದ್ಧಯ್ಯನವರನ್ನು ಹೊಗಳಿದರು. ೧೯೬೭ರಲ್ಲಿ ಸಾರಿಗೆ ಕಮಿಷನರ್ ಆಗಿ ಮರಳಿ ಬೆಂಗಳೂರಿಗೆ ವರ್ಗವಾಯಿತು.



ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಲೆಂದು ಹಲವು ಕ್ರಮಗಳನ್ನು ಕೈಗೊಂಡರು. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಬಸ್ಸುಗಳ ಸೌಕರ್ಯ ಒದಗಿಸಿದರು.

ಒಮ್ಮೆ ಸಿದ್ಧಯ್ಯನವರು ವಿಮಾನನಿಲ್ದಾಣದಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರನ್ನು ಕಂಡು "ಕನ್ನಡಕ್ಕಾಗಿ ಏನಾದರೂ ಮಾಡಿರಿ" ಎಂದು ಕೇಳಿಕೊಂಡಾಗ "ಏನು ಮಾಡಬೇಕು. ಇಲ್ಲಿಯೆ ಬರೆದು ಕೊಡಿರಿ" ಎಂದರಂತೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಪೂರ್ವಸಿದ್ಧತೆಯಾಗಿ ಕನ್ನಡದಲ್ಲಿ ಕಾರ್ಯಾಲಯ ಕೈಪಿಡಿಯೊಂದು ರಚಿಸಬೇಕೆಂದು ಕೇಳಿದರು. ಅದಕ್ಕೆ ಅಧ್ಯಕ್ಷರಾಗಿ ಮಾಸ್ತಿಯವರನ್ನು ಮತ್ತು ಕಾರ್ಯದರ್ಶಿಯಾಗಿ ಸಿದ್ಧಯ್ಯನವರನ್ನು ನೇಮಿಸಿದ್ದರು. ಸ್ಥಳದಲ್ಲಿಯೇ ಅಂಗೀಕಾರ ಪಡೆದಿದ್ದರು ಸಿದ್ದಯ್ಯನವರು. ಮುಂದೆ ಆ ಕೃತಿ ಅಚ್ಚಾಗಿ, ಎಲ್ಲ ಕಾರ್ಯಾಲಯಗಳಿಗೆ ತಲುಪಿತು.

ಗಾಲಿಬ್‌ಶತಮಾನೋತ್ಸವ, ಗಾಂಧೀ ಶತಮಾನೋತ್ಸವ, ಬಸವಣ್ಣನವರ ಅಷ್ಟ ಶತಮಾನೋತ್ಸವಗಳಲ್ಲಿ ಸಿದ್ಧಯ್ಯನವರು ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀ ಬಿ.ಡಿ. ಜತ್ತಿಯವರು ವಿದ್ವಾಂಸರೊಡನೆ, ಪ್ರಮುಖರೊಡನೆ ಸಮಾಲೋಚನೆ ಮಾಡಿ ಬಸವ ಸಮಿತಿಯನ್ನು ರಚಿಸಿದ್ದರು. ಸಿದ್ಧಯ್ಯನವರು ಸಂಸ್ಥಾಪಕ ಸದಸ್ಯರಾಗಿದ್ದರು. ಸಿದ್ಧಯ್ಯನವರ ಸಹೋದರರಾದ ಅನ್ನದಾನಿಯವರು ಪ್ರಧಾನ ಕಾರ್ಯದರ್ಶಿಯಾಗಿದ್ದರು, ಬಾಗೇವಾಡಿ, ಕೂಡಲಸಂಗಮಗಳಲ್ಲಿ ಸಮಾರಂಭಗಳು ನಡೆದು ಬಸವಕಲ್ಯಾಣದಲ್ಲಿ ಸಮಾರೋಪ ಸಮಾರಂಭ ನಡೆಯಿತು. ಉಪರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿಯವರು ಉದ್ಘಾಟಕರಾಗಿ ಆಗಮಿಸಿದ್ದರು.

ಸಿದ್ಧಯ್ಯನವರ ಕವನ ಸಂಕಲನಗಳಾದ 'ಕಲ್ಲೋಲಮಾಲೆ' ಹಾಗೂ 'ಮೊದಲು ಮಾನವನಾಗು' ಎಂಬ ಕವನ ಸಂಗ್ರಹಗಳನ್ನು ಶ್ರೀ ಪಂಚಾಕ್ಷರಿ ಹಿರೇಮಠರು ಪ್ರಕಟಿಸಿದರು. ಹುಕ್ಕೇರಿ ಬಾಳಪ್ಪನವರು "ಮೊದಲು ಮಾನವನಾಗು" ಎಂಬ ಕವಿತೆಯನ್ನು ಹಾಡಿ ಜನಪ್ರಿಯಗೊಳಿಸಿದ್ದರು.

ಸಿದ್ಧಯ್ಯ ಪುರಾಣಿಕರ ತಂದೆ ಕಲ್ಲಿನಾಥಶಾಸ್ತ್ರಿಗಳು ದೈವಾಧೀನರಾದುದು ಸಿದ್ಧಯ್ಯನವರಿಗೆ ಅತ್ಯಂತ ದುಃಖದ ಘಟನೆಯಾಗಿತ್ತು. ಅನಾಥನಾದೆ ಎಂದು ದುಃಖಿಸಿದರು.

ಸಿದ್ಧಯ್ಯನವರಿಗೆ ಬೆಳಗಾವಿಗೆ ಜಿಲ್ಲಾಧಿಕಾರಿಯಾಗಿ ವರ್ಗವಾಯಿತು. ಬೆಳಗಾವಿಯಲ್ಲಿ ಭಾಷಾ ವಿವಾದ, ಗಡಿ ವಿವಾದ ಹೀಗೆ ಅನೇಕ ಸಮಸ್ಯೆಗಳಿದ್ದವು. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಎಂ.ಕೆ.ಹುಬ್ಬಳ್ಳಿಯ ಸಕ್ಕರೆ ಕಾರ್ಖಾನೆ ತೆರೆಯುವದಕ್ಕಿದ್ದ ಅಡಚಣೆ ಎದುರಿಸಿ ಮತ್ತೆ ಅದಕ್ಕೆ ಜೀವಕೊಟ್ಟರು. ಈ ಜಿಲ್ಲೆಗೆ ಸಂಬಂಧಿಸಿದ ಇನ್ನೊಂದು ಮಹತ್ವದ ಕಾರ್ಯವೆಂದರೆ, ಮಲಪ್ರಭಾ ಯೋಜನೆಗೆ ಸಂಬಂಧಿಸಿದ್ದು. ಮುಳುಗಡೆ ಆಗಲಿದ್ದ ಪ್ರದೇಶದ ಜನರಿಗೆಲ್ಲಾ ಪುನರ್ವಸತಿ ಒದಗಿಸಿಕೊಟ್ಟರು.

ಸಿದ್ಧಯ್ಯನವರು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಅಧ್ಯಕ್ಷೀಯ ಭಾಷಣ ಮುಗಿಸಿ ಹೊರಬಂದಾಗ ವಿಭಾಗಾಧಿಕಾರಿಗಳ ಕರೆ ಬಂದಿತ್ತು. "ಬಾಂಗ್ಲಾಯುದ್ಧ ಪ್ರಾರಂಭವಾಗಿದೆ. ಬೇಗ ಬನ್ನಿ" ಎಂದು. ಬೆಳಗಾವಿ ಜಿಲ್ಲೆಯ ನೂರಾರು ಯೋಧರು ಯುದ್ಧ ರಂಗದಲ್ಲಿ ಮಡಿದಿದ್ದರು. ಕೆಲವರು ಗಾಯಗೊಂಡಿದ್ದರು. ಅವರ ಕುಟುಂಬದವರಿಗೆ ಉದ್ಯೋಗ ಮತ್ತು ಪರಿಹಾರ ಒದಗಿಸಿಕೊಟ್ಟರು. ಒಂದು ಸಮಸ್ಯೆ ಬಗೆಹರಿಸುವಾಗ ಮತ್ತೊಂದು ಸಮಸ್ಯೆ ಎದುರಾಗುತ್ತಿತ್ತು. ಬರಗಾಲ ಪೀಡಿತ ಪ್ರದೇಶಗಳಿಗೆ ಭೇಟಿಯಾಗಿ ಕಾಮಗಾರಿಗಳನ್ನು ಮಂಜೂರು ಮಾಡಿದರು. ಗೋಧಿ ಅಲ್ಲಿನ ಜನಕ್ಕೆ ಒಗ್ಗುತ್ತಿರಲಿಲ್ಲ. ಸಿದ್ಧಯ್ಯನವರು ಬೇರೆ ಕಡೆಯಿಂದ ಜೋಳವನ್ನು ತರಿಸಿಕೊಟ್ಟರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸ್ ಅವರು ಬೆಳಗಾವಿಗೆ ಭೇಟಿ ನೀಡಿ ಅಲ್ಲಿನ ಕಾರ್ಯಗಳನ್ನು ಗಮನಿಸಿ ಸಂತೋಷ ಪಟ್ಟು ಸಿದ್ಧಯ್ಯ ಪುರಾಣಿಕರನ್ನು ಅಭಿನಂದಿಸಿದ್ದರು.

**ಕಾರ್ಮಿಕ ಕಮಿಷನರ್**

೧೯೭೨ರಲ್ಲಿ ಪುರಾಣಿಕರು ಬೆಂಗಳೂರಿಗೆ ಮರಳಿ ಕಾರ್ಮಿಕ ಕಮಿಷನರ್ ಆಗಿ ಬಂದರು. ಆಗ ಅಜೀಜ ಸೇಠ ಅವರು ಕಾರ್ಮಿಕ ಮಂತ್ರಿಗಳಾಗಿದ್ದರು. ಕಾರ್ಮಿಕರಿಗೂ, ಮಾಲೀಕರಿಗೂ ಇದ್ದ ಅಂತರವನ್ನು ಕಡಿಮೆ ಮಾಡಿ ಇಬ್ಬರಿಗೂ ಸೌಹಾರ್ದ ರೀತಿಯಲ್ಲಿ ಸಂಧಾನ ಮಾಡಿದರು. ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿಗೆ ಬರುವಂತೆ ಮಾಡಿದರು. ಜವಳಿ ಗಿರಣಿಗಳಲ್ಲಿದ್ದ ಅಸಮಾನ ವೇತನಗಳನ್ನು ಸರಿಪಡಿಸಿದರು. ಇದೇ ಸಂದರ್ಭದಲ್ಲಿ ಸಿದ್ಧಯ್ಯ ಪುರಾಣಿಕರು ನಾಲ್ಕು ತಿಂಗಳು ವಿದೇಶ ಪ್ರವಾಸ ಮಾಡಿದರು. ಸಿದ್ಧಯ್ಯನವರ ಮಗಳು ಡಾ.ಶಿವಗೀತಾ, ಅಳಿಯ ಡಾ.ಗಂಗಾಧರ ಪೂಜಾರಿ ನ್ಯೂಯಾರ್ಕನಲ್ಲಿದ್ದರು. ಶ್ರೀ. ಬಿ.ಡಿ.ಜತ್ತಿಯವರ ಅಪೇಕ್ಷೆಯ ಮೇರೆಗೆ, ನ್ಯೂಯಾರ್ಕ್‌ನಲ್ಲಿ 'ಬಸವ ಸಮಿತಿ'ಯನ್ನು ಸ್ಥಾಪಿಸಿ ಮರಳಿ ಭಾರತಕ್ಕೆ ಬಂದರು.

ಸೇವಾಜೀವನ ಮುಗಿಯುತ್ತ ಬಂದುದು ಸಿದ್ಧಯ್ಯನವರಿಗೆ ಹಿಗ್ಗಿನ ಬುಗ್ಗೆಯಾಗಿದ್ದಿತು. ವಚನವೊಂದನ್ನು ಬರೆದರು. "ಸುಖ... ಸೇವಾಜೀವನದ ಶಿಕ್ಷೆಯನ್ನು ಮುಗಿಸಲಿಹೆನಯ್ಯ ಅನತಿದೂರದಲ್ಲಿ"

ಹೀಗೆ ವಿವಿಧ ಇಲಾಖೆಗಳಲ್ಲಿ ಪುರಾಣಿಕರು ತಮ್ಮ ಕರ್ತವ್ಯ, ಸೇವೆ ಮುಗಿಸಿದರು. ತಮ್ಮ ಅಧಿಕಾರದ ಅವಧಿಯಲ್ಲಿ ಯಾರಿಗೂ ಕಿರುಕುಳ ಕೊಡಲಿಲ್ಲ. ದರ್ಪದಿಂದ ಮೆರೆಯಲಿಲ್ಲ. ಸರಕಾರಿ ಸೇವೆಗೆ ಹಗಲು ರಾತ್ರಿ ದುಡಿದು ೧೯೭೬ರಲ್ಲಿ ಸೇವಾಜೀವನವನ್ನು ಮುಗಿಸಿ ಸ್ವತಂತ್ರರಾದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹೆಸರಾದ ಪುರಾಣಿಕರಿಗೆ ತಮ್ಮ ಕೆಲಸಕ್ಕೆ ದೊರೆತ ಪ್ರತಿಫಲವೇನು ಎಂದು ಕೇಳಿದಾಗ ಅವರು, "ಒಳ್ಳೆಯ



ಕೆಲಸಕ್ಕೆ ಸಿಗುವ ಪ್ರತಿಫಲವೆಂದರೆ ಮತ್ತಷ್ಟು ಕೆಲಸ ಹೇಳುವುದು" ಎಂದು ನಗುತ್ತಾ ಹೇಳಿದ್ದರು.

ಡಾ.ಸಿದ್ಧಯ್ಯ ಪುರಾಣಿಕರು ಉನ್ನತಾಧಿಕಾರಿಗಳಾಗಿದ್ದು ಕನ್ನಡ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಆಡಳಿತ ಯಂತ್ರವನ್ನು ನಿರ್ವಹಿಸಿರುವರು. ೧೯೪೪ರಲ್ಲಿ ತಹಸೀಲ್ದಾರಿಕೆಯಿಂದ ಪ್ರಾರಂಭಿಸಿ ಐ.ಎ.ಎಸ್. ಅಧಿಕಾರಿಗಳಾಗಿ, ಕಮಿಷನರ್ ಆಗಿ ೩೩ ವರ್ಷಗಳವರೆಗೆ ಸೇವೆ ಸಲ್ಲಿಸಿ ೧೯೭೬ರಲ್ಲಿ ನಿವೃತ್ತರಾದರು. ಅವರು ಅನುಸರಿಸಿದ ಆಡಳಿತ ವಿಧಾನಗಳು ಅಚ್ಚರಿಯನ್ನುಂಟು ಮಾಡುವಷ್ಟು ಸಧರ್ಮದಿಂದ ಕೂಡಿದ್ದವು. ಅವರ ಆಡಳಿತ ಪದ್ಧತಿಗೆ ಪುರಾಣಿಕ ಪದ್ಧತಿ ಎಂದು ಕರೆಯುವಷ್ಟು ವಿನೂತನ ರೀತಿಯಿಂದ ಅವರು ಹಳ್ಳಿಗರ ಸೇವೆ ಮಾಡಿದರು. ಆಡಳಿತಗಾರರಾಗಿ ಅವರು ತೋರಿದ ಪ್ರಾಮಾಣಿಕತೆ, ನಿಸ್ಪೃಹತೆ, ಕರ್ತವ್ಯನಿಷ್ಠೆಗಳು, ಸಹನ ಶೀಲತೆಗಳು ಅನುಕರಣೀಯವಾದವು. "ಇವರೊಬ್ಬ ಸಾತ್ವಿಕ ಕಾಯಕಯೋಗಿ. ಬಸವಣ್ಣನವರ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿರುವ ಒಬ್ಬ ಸಾತ್ವಿಕ ಕಾಯಕಯೋಗಿ" ಎಂದು ಬಿ.ಡಿ.ಜತ್ತಿಯವರು ಹೇಳಿದ್ದರು. ಸಿದ್ಧಯ್ಯನವರು ಎಲ್ಲಿಗೆ ಹೋದರೂ ಯಾವ ಇಲಾಖೆಯಲ್ಲಿದ್ದರೂ ಬಡವರ ಬಂಧುವಾಗಿ ದುಡಿದು ದುರ್ಬಲರ ಕಲ್ಯಾಣಕ್ಕಾಗಿ ಶ್ರಮಿಸಿದರು.

ಯಾವ ಕೆಲಸಕ್ಕೆ ಯಾವಾಗ ಕರೆದರೂ ಸಿದ್ಧರಾಗಿರುತ್ತಿದ್ದುದರಿಂದ "ಸರ್ಕಾರಿ ಸೇವೆಯಲ್ಲೂ ಕಮಿಟ್‌ಮೆಂಟ್ ಎಂಬುದೊಂದಿರುವುದಾದರೆ, ಅದಕ್ಕೆ ಸಾರ್ಥಕತೆ ಒದಗಿಸಿದ ಕೆಲವು ಅಧಿಕಾರಿಗಳ ಸಾಲಿನಲ್ಲಿ ಸಿದ್ಧಯ್ಯನವರ ಹೆಸರನ್ನು ಸೇರಿಸುತ್ತ, ಯಾವ ಕೆಲಸಕ್ಕೆ ಕರೆದರು ಸಿದ್ಧಯ್ಯ" ಎನ್ನಬೇಕು ಎಂದು ಬಿ.ಎ.ಸನದಿಯವರು ಅಭಿಪ್ರಾಯಪಟ್ಟಿದ್ದರು. ಸಿದ್ಧಯ್ಯನವರು ಕೆಲಸವೆಂದರೆ ಬೇಸರ ಪಟ್ಟುಕೊಂಡವರೇ ಅಲ್ಲ. ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪ್ರಜೆಗಳಿಗೆ ತಲುಪಿಸುವ ಕಾರ್ಯವನ್ನು ನಿರ್ವಂಚನೆಯಿಂದ ಮಾಡಿದ್ದಾರೆ. "ನಾವು ಮಾಡುವ ಕೆಲಸಕ್ಕೆ ಎಂಥದೋ ಪ್ರತಿಫಲ ಸಿಗುವುದೆಂದರೂ ಮಾಡಿದ ಕೆಲಸದಲ್ಲಿ ತೃಪ್ತಿಯುಂಟಾದಾಗ ಆಗುವ ಆನಂದ ಯಾವ ವೇತನ ಪ್ರತಿಫಲಗಳಿಂದಲೂ ಸಿಗಲಾರದು. ನಮ್ಮ ಸೇವೆಯಿಂದ, ಕೆಲಸದಿಂದ ತೃಪ್ತಿ ಪಡೆದು ನಾಲ್ಕು ಸಾಮಾನ್ಯ ಜೀವಿಗಳು ಆನಂದಿಸುವುದನ್ನು ಕಂಡು ನಾವು ಆನಂದಿಸುವುದರಲ್ಲಿ ಧನ್ಯತೆಯಿರುತ್ತದೆ." ಇಂಥ ಒಂದು ಒಳ್ಳೆಯ ದೃಷ್ಟಿಯನ್ನು ಪುರಾಣಿಕರು ಇಟ್ಟುಕೊಂಡಿದ್ದರೆಂದು ಜಯತೀರ್ಥ ರಾಜಪುರೋಹಿತರು ಹೇಳಿದ್ದರು. ಪುರಾಣಿಕರು ವೃತ್ತಿ ಜೀವನದಲ್ಲಿ ತೃಪ್ತಿಯನ್ನು ಕಂಡಿದ್ದರು. ಪ್ರತಿಫಲಾಪೇಕ್ಷೆಯಿಲ್ಲದೆ ಸಾರ್ಥಕ ಬದುಕನ್ನು ಬಾಳಿದ್ದಾರೆ. ಅವರಿಗಿರುವ ವೇಳೆಯ ಅಭಾವದಲ್ಲಿಯೇ ಆಯಾ ಕೆಲಸಗಳನ್ನು ಆಯಾ ಕಾಲದಲ್ಲಿ ನಿಷ್ಠೆಯಿಂದ ಮಾಡುತ್ತಿದ್ದುದರಿಂದಲೇ ಎರಡೂ ಕ್ಷೇತ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆಯುವುದು ಸಾಧ್ಯವಾಯಿತು.

ಕಾನೂನುಬದ್ಧವಾಗಿ ಅಧಿಕಾರದ ಚೌಕಟ್ಟಿನಲ್ಲಿ ಜನತೆಗೆ ಎಷ್ಟು ಸಹಾಯ ಮಾಡಲು ಸಾಧ್ಯವೋ ಅಷ್ಟನ್ನೂ ಪ್ರಾಮಾಣಿಕ ರೀತಿಯಲ್ಲಿ ಮಾಡುತ್ತಿದ್ದರು. ಅಧಿಕಾರದ ದುರುಪಯೋಗವನ್ನೆಂದೂ ಮಾಡಿಕೊಳ್ಳಲಿಲ್ಲ. ಹಂಪನಾ ಅವರು ಸಿದ್ಧಯ್ಯನವರ ಬಗ್ಗೆ ಹೀಗೆ ಹೇಳುತ್ತಾರೆ: "ಡಾ. ಮಾಸ್ತಿಯವರು, ಶ್ರೀ ಎಚ್.ಎಲ್.ನಾಗೇಗೌಡರು ಹಾಗೂ ಸಿದ್ಧಯ್ಯ ಪುರಾಣಿಕ ಅವರು ದಕ್ಷ ಆಡಳಿತಗಾರರಾಗಿ, ಸಮರ್ಥ ಲೇಖಕರಾಗಿ ಕನ್ನಡ ನಾಡಿನಲ್ಲಿ ತ್ರಿಮೂರ್ತಿಗಳಂತೆ, ರತ್ನತ್ರಯರಂತೆ ಮನೆ ಮಾತಾಗಿದ್ದಾರೆ. ಸಿದ್ಧಯ್ಯ ಪುರಾಣಿಕರನ್ನು ಪ್ರಸಿದ್ಧಯ್ಯ ಪುರಾಣಿಕರೆಂದು ಕರೆದಿರುವದು ಕೇವಲ ಶಬ್ದಲಾಲಿತ್ಯದಿಂದ ಮಾತ್ರ ಹೇಳಿದ ಮಾತಾಗಿರದೆ ಅರ್ಥಪೂರ್ಣ ಹೇಳಿಕೆಯೂ ಆಗಿದೆ."

ನಿವೃತ್ತರಾದ ಮೇಲೆ ಸಂಪೂರ್ಣವಾಗಿ ಸಾಹಿತ್ಯಿಕ ಚಟುವಟಿಕೆಗಳಿಗೆ ತಮ್ಮ ಸಮಯವನ್ನು ಮೀಸಲಾಗಿಟ್ಟರು. ಬಸವ ಸಮಿತಿಯ ಬಸವ ಪಥ, ಬಸವ ಜರ್ನಲ್‌ಗಳ ಪ್ರಧಾನ ಸಂಪಾದಕರಾಗಿ, ಸಂಶೋಧನ-ಪ್ರಕಟನಾ ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಡಾ.ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಒಂದು ವ್ಯಾಸಂಗ ಸಮಿತಿಯನ್ನು ಕಟ್ಟಿದರು. ತಿಂಗಳಿಗೆ ಒಬ್ಬ ಮಹಾಕವಿಯ ಬಗ್ಗೆ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಅದರಲ್ಲಿ ಡಾ.ಕೆ.ಮುದ್ದಣ್ಣ, ಶ್ರೀ ಜಯತೀರ್ಥರಾಜಪುರೋಹಿತರು ಮೊದಲಾದವರು ಭಾಗವಹಿಸಿದರು. ೧೯೭೭ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದವು. ತುರ್ತುಪರಿಸ್ಥಿತಿ ಎದುರಿಸಿದ ತರುವಾಯ ಜನತಾಪಕ್ಷದ ಪ್ರಚಾರ ಮಾಡಿದರು. "ಲೇಖಕರ ಒಕ್ಕೂಟ" ಪಕ್ಷ ಕಟ್ಟಿ ಹಿ.ಚಿ.ಬೋರಲಿಂಗಯ್ಯ ಅವರನ್ನು ಅಭ್ಯರ್ಥಿಯನ್ನಾಗಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಾಗ ದೇ.ಜ.ಗೌ. ಅವರ ಪರವಾಗಿ ಪ್ರಚಾರ ಮಾಡಿದರು.

"ಲೋಕವಾಣಿ" ಪತ್ರಿಕೆಯ ಸಂಪಾದಕರಾಗಿ ಒಂದು ವರ್ಷ ಕೆಲಸ ಮಾಡಿದರು. ಬಸವ ಸಮಿತಿಯ ಕೋಶಾಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕನ್ನಡ ನಿಘಂಟು ಸಮಿತಿಯ ಸದಸ್ಯರಾಗಿ ಜ್ಞಾನಗಂಗೋತ್ರಿಯ ಸಂಪಾದಕ ಸಮಿತಿಯ ಸದಸ್ಯರಾಗಿ, ಕೇಂದ್ರ ಹಾಗೂ ಸಾಹಿತ್ಯ ಅಕಾಡೆಮಿಗಳ ಸದಸ್ಯರಾಗಿ ಪಠ್ಯಪುಸ್ತಕ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಸಿದ್ಧಯ್ಯ ಪುರಾಣಿಕರು ಹಲವಾರು ಸನ್ಮಾನ ಸಮಿತಿಗಳ ಅಧ್ಯಕ್ಷರಾಗಿದ್ದಾರೆ. ಶಂಬಾಜೋಶಿ ಹಾಗೂ ಬಾಳಪ್ಪ ಹುಕ್ಕೇರಿಯವರ ಸನ್ಮಾನ ಸಮಿತಿಗೆ ಅಧ್ಯಕ್ಷರಾಗಿದ್ದರು. ಗೋಕಾಕ ಚಳುವಳಿಯಲ್ಲಿ ಸಿದ್ಧಯ್ಯನವರು ಸಕ್ರಿಯವಾಗಿ ಭಾಗವಹಿಸಿದರು. ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಸ್ಥಾನ ದೊರಕಿಸಿಕೊಡಲು ದೇಜಗೌ ಅವರೊಂದಿಗೆ ಉಪವಾಸ ಸತ್ಯಾಗ್ರಹ ಮಾಡಿದರು. ಅನೇಕ ಶಾಲೆ ಕಾಲೇಜುಗಳಿಗೆ ಭಾಷಣಕ್ಕೆ ಹೋಗಿದ್ದಾರೆ. ಅನೇಕ ಸಂಘ ಸಂಸ್ಥೆಗಳೊಂದಿಗೆ ನಿರಂತರ ಸಂಬಂಧ ಮುಂದುವರಿಸಿಕೊಂಡು



ಬಂದಿದ್ದರು. ಸಿದ್ಧಯ್ಯ ಪುರಾಣಿಕರಿಗೆ ಕನ್ನಡಿಗರ ಸಮಸ್ಯೆಗಳ ಬಗ್ಗೆ ತಿಳುವಳಿಕೆಯಿತ್ತು. ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಿಂದಿನ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಕನ್ನಡಿಗರ ಅಭಿಮಾನ ಶೂನ್ಯತೆ, ರಾಜಕಾರಣಿಗಳ ನಿಷ್ಕ್ರಿಯತೆ ಹಾಗೂ ಅನ್ಯಭಾಷೆಗಳ ಅಕ್ರಮಣವಾಗುತ್ತಿರುವದರಿಂದ ಕನ್ನಡ ಉಳಿಸಿಕೊಳ್ಳುವದಕ್ಕಾಗಿ ಹೋರಾಟ ಮಾಡಬೇಕಾಗಿದೆ ಎಂದು ಹೇಳಿದ್ದರು. ಸಿದ್ಧಯ್ಯ ಪುರಾಣಿಕರು ಕರ್ನಾಟಕ ವಿಕಾಸವೇದಿಕೆಯ ಅಧ್ಯಕ್ಷರಾಗಿದ್ದರು. ಕಾವೇರಿ ಜಲವಿವಾದದ ಬಗೆಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ಸಿದ್ಧಯ್ಯ ಪುರಾಣಿಕರು ಇಷ್ಟೆಲ್ಲವನ್ನು ಮಾಡುವವರೊಂದಿಗೆ ಸಾಹಿತ್ಯ ಸೃಷ್ಟಿಯನ್ನು ಮುಂದುವರಿಸಿದ್ದರು. ಇನ್ನೊಂದು ಬೃಹತ್ ಕಾದಂಬರಿ ಬರೆಯಬೇಕೆನ್ನುವದು ಇವರ ಉದ್ದೇಶವಾಗಿತ್ತು. ತಾವು ಅಧಿಕಾರಿಯಾಗಿ ತಿರುಗಾಡಿದ ಎಲ್ಲ ಪ್ರದೇಶಗಳನ್ನು ಒಂದೇ ಗ್ರಂಥದಲ್ಲಿ ತರಬೇಕೆಂದರು. ಅದು ಈಡೇರಲಿಲ್ಲ. ದಿನಾಂಕ ೦೫-೧೯-೯೪ರಂದು ದೈವಾಧೀನರಾದರು. ಅವರ ಭೌತಿಕ ಶರೀರ ಕಣ್ಣಿಂದ ಮರೆಯಾದರೂ ಅವರ ಐವತ್ತಕ್ಕೂ ಮೇಲ್ಪಟ್ಟ ಕೃತಿಗಳು ಅವರನ್ನು ಚಿರಸ್ಥಾಯಿಗೊಳಿಸಿವೆ.

**

# ೫. ಕೌಟುಂಬಿಕ ಬದುಕು

ಸಿದ್ಧಯ್ಯ ಪುರಾಣಿಕರ ಕೌಟುಂಬಿಕ ಜೀವನ ಸಮೃದ್ಧವೂ ಸಂತೃಪ್ತವೂ ಆಗಿತ್ತು. ಸುಸಂಸ್ಕೃತ ಮನೆತನದ ದೈವಭಕ್ತರಾದ ಕಲ್ಲಿನಾಥಶಾಸ್ತ್ರಿ ದಾನಮ್ಮನವರ ಹಿರಿಯ ಮಗ ಸಿದ್ಧಯ್ಯ. ದ್ಯಾಂಪುರದ ಕೆಲವೆ ವಿದ್ಯಾವಂತ ಮನೆತನದಲ್ಲಿ ಇವರದೂ ಒಂದಾಗಿತ್ತು.

ಕಲ್ಲಿನಾಥ ಶಾಸ್ತ್ರಿಗಳಿಗೆ ಮೂವರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದರು. ಸಿದ್ಧಯ್ಯ, ಅನ್ನದಾನಿ, ಬಸವರಾಜ, ವೀರಾಂಬೆ ಹಾಗೂ ಶರಣಮ್ಮ.

ಸಿದ್ಧಯ್ಯನವರು ಸರಕಾರಿ ಸೇವೆಗೆ ಸೇರಿದ ಮೇಲೆ, ಮದುವೆ ಮಾಡಿಕೊಳ್ಳಬೇಕೆಂಬ ಹಿರಿಯರ ಒತ್ತಾಯಕ್ಕೆ ಮಣಿದು ಧಾರವಾಡದ ಚರಂತಿ ಮಠದ ಸೌ.ಗಿರಿಜಾದೇವಿಯನ್ನು ಮದುವೆಯಾದರು. ಗಿರಿಜಾದೇವಿಯವರು ಮೆಟ್ರಿಕ್ಯುಲೇಶನ್ ಮುಗಿಸಿದ್ದು ಪತಿಯ ಕಾರ್ಯಗಳಲ್ಲಿ ಸಹಭಾಗಿಯಾಗಿದ್ದರು. "ನಾನು ಸಾಹಿತಿಯಾಗಿ ಬೆಳೆಯುವದಕ್ಕೆ ಮತ್ತು ಅಧಿಕಾರದಲ್ಲಿ ಪ್ರಾಮಾಣಿಕನಾಗಿ ಉಳಿಯಲಿಕ್ಕೆ ಕಾರಣ ನನ್ನ ಹೆಂಡತಿಯೇ ಹೊರತು ಬೇರೆ ಯಾರೂ ಅಲ್ಲ. ನನ್ನ ಸಾಹಿತ್ಯಕ್ಕೆ ಸ್ಫೂರ್ತಿಯ ಸೆಲೆಯಾಗಿ ನನಗೆ ಶಕ್ತಿಯಾಗಿ ಬೆಂಬಲವಿತ್ತಿದ್ದಾಳೆ ಅವಳು. ನನ್ನ ಲೇಖನಿಗೆ ಚೈತನ್ಯ ತುಂಬಿದವಳೂ ಅವಳೇ. ನನ್ನ ಸರ್ಕಾರಿ ಕಚೇರಿಗಳ ಕೆಲಸವನ್ನು ನಿರ್ಯೋಚನೆಯಿಂದ ನಡೆಸಿಕೊಂಡು ಹೋಗಲು ಸಹಕರಿಸಿದವಳು ಅವಳೆ" ಎಂದು ಸಿದ್ಧಯ್ಯ ಪುರಾಣಿಕರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯ ಏಳ್ಗೆಯ ಹಿಂದೆ ಓರ್ವ ಸ್ತ್ರೀ ಇರುತ್ತಾಳೆಂಬುದು ಇವರಿಗೆ ಚೆನ್ನಾಗಿ ಅನ್ವಯಿಸುತ್ತದೆ.

ಸರಳ ಹಾಗೂ ಸೌಜನ್ಯದ ಮೂರ್ತಿಯಾದ ಗಿರಿಜಾದೇವಿಯವರು ಸುಖ ದುಃಖಗಳನ್ನು ಸಮನಾಗಿ ಕಂಡವರು. ಸುಖ ಬಂತೆಂದು ಹಿಗ್ಗಲಿಲ್ಲ. ದುಃಖ ಬಂದಾಗ ಕುಗ್ಗಲಿಲ್ಲ. ರಜಾಕಾರರ ಹಾವಳಿಯ ಸಂದರ್ಭದಲ್ಲಿ ಚಿಕ್ಕಮಕ್ಕಳನ್ನು ಕರೆದುಕೊಂಡು ಒಬ್ಬರೇ ತಿರುಗಾಡುವಂತಾಗಿತ್ತು. ಮಣಕವಾಡ, ಪುಣೆಯಲ್ಲಿದ್ದುಕೊಂಡು ಸಂಸಾರದ ಜವಾಬ್ದಾರಿಯನ್ನು ತಾವು ಹೊತ್ತುಕೊಂಡು ಪತಿಗೆ ಹೊರೆಯಾಗದಂತೆ ಸಹಕರಿಸುತ್ತಿದ್ದರು. ಯಾದಗಿರಿಯಲ್ಲಿದ್ದಾಗ ಸಮಾಜ ಸೇವೆಯಲ್ಲಿ ತೊಡಗಿದ್ದರು. ಮಹಿಳಾಸಂಘದ ಅಧ್ಯಕ್ಷರಾಗಿ ಹೊಲಿಗೆ, ಹೆಣಿಕೆಗಳಲ್ಲಿ ತರಬೇತಿ ನೀಡುವ ಕೇಂದ್ರ ಸ್ಥಾಪಿಸಿದರು.



ಹೈದ್ರಾಬಾದ್‌ನಲ್ಲಿರುವಾಗ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಸಾಹಿತ್ಯಾಸಕ್ತಿ ಇದ್ದುದರಿಂದ ಪತಿ ಬರೆದವುಗಳನ್ನು ಓದಿ ಮೊದಲ ಓದುಗ ಹಾಗೂ ವಿಮರ್ಶಕರಾಗಿದ್ದರು. ಸದಾ ಹಸನ್ಮುಖಿಗಳಾಗಿದ್ದ ಇವರು ಮನೆಗೆ ಬಂದವರನ್ನು ಸಂತೋಷದಿಂದ ಸ್ವಾಗತಿಸಿ ಸತ್ಕರಿಸುತ್ತಿದ್ದರು.

ಡಾ.ಸಿದ್ಧಯ್ಯ ಪುರಾಣಿಕರಿಗೆ ನಾಲ್ಕು ಮಕ್ಕಳಿದ್ದು ಮೂವರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ. ಹಿರಿಯ ಮಗಳು ಶ್ರೀಮತಿ ವಿಜಯಲಕ್ಷ್ಮೀ. ಇವರ ಪತಿ ಶ್ರೀ ಕೆ.ಎಸ್.ನಂದೀಶ್ವರ. ಇವರು ಬೆಂಗಳೂರಿನಲ್ಲಿದ್ದಾರೆ. ಎರಡನೆಯ ಮಗಳು ಡಾ.ಶಿವಗೀತಾ. ಇವರ ಪತಿ ಡಾ.ಗಂಗಾಧರ ಪೂಜಾರಿ ಇವರು ಅಮೇರಿಕಾದಲ್ಲಿದ್ದಾರೆ. ಮೂರನೆಯವರು ಶ್ರೀ ಪ್ರಸನ್ನಕುಮಾರ. ಇವರ ಪತ್ನಿ ಲತಾಪುರಾಣಿಕ. ಇವರು ಬೆಂಗಳೂರಿನಲ್ಲಿದ್ದಾರೆ. ಕೊನೆಯ ಮಗಳು, ಶ್ರೀಮತಿ ಭಾರತಿ. ಇವರ ಪತಿ ಶ್ರೀ ಎಸ್.ಎಂ.ಮೃತ್ಯುಂಜಯಪ್ಪ. ಇವರು ಭದ್ರಾವತಿಯಲ್ಲಿ ನೆಲೆಸಿದ್ದಾರೆ.

ಹೀಗೆ ಪುರಾಣಿಕರು ಮಕ್ಕಳು, ಮೊಮ್ಮಕ್ಕಳ ಮಧ್ಯ ಸಮೃದ್ಧ ಜೀವನ ನಡೆಸುತ್ತಿದ್ದರು. ಪುರಾಣಿಕರದು ಎತ್ತರದ ನಿಲುವು. ಆಜಾನುಬಾಹು ವ್ಯಕ್ತಿತ್ವ ಸದಾ ಮುಗುಳ್ನಗೆಯಿಂದ ಕೂಡಿದ ಮುಖ. ಇವರನ್ನು ಕಂಡಾಗ ಎಂಥವರಿಗೂ ಗೌರವ ಭಾವನೆ ಮೂಡುತ್ತಿತ್ತು. ಆದರಾತಿಥ್ಯಕ್ಕೆ ಎತ್ತಿದ. ಕೈ ಮನೆಗೆ ಬಂದವರನ್ನು ಸತ್ಕರಿಸುತ್ತಿದ್ದರು. ಸಿದ್ಧಯ್ಯ ಪುರಾಣಿಕರ ತಮ್ಮಂದಿರಾದ ಶ್ರೀ ಅನ್ನದಾನಯ್ಯ ಪುರಾಣಿಕರು ವಕೀಲಿ ವೃತ್ತಿ ಕೈಕೊಂಡು ಬೆಂಗಳೂರಿನಲ್ಲಿ ವಾಸವಾಗಿದ್ದರು. ಇನ್ನೋರ್ವ ತಮ್ಮ ಶ್ರೀ ಬಸವರಾಜರು ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ನಿವೃತ್ತರಾಗಿ ಬೆಂಗಳೂರಲ್ಲಿ ನೆಲೆಸಿದ್ದರು.

**

# ೬. ಸಾಹಿತ್ತಿಕ ಪರಿಸರ

ಕಲ್ಯಾಣ ಕರ್ನಾಟಕದ ಈ ಭಾಗವು ಸಾಹಿತ್ಯ, ಸಮೃದ್ಧಿ ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಬಹು ಮುಖ್ಯವಾಗಿದೆ. ಈ ನಾಡಿನಲ್ಲಿ ಅನೇಕ ಕವಿಗಳು ಹುಟ್ಟಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸವನ್ನು ಗಮನಿಸಿದರೆ, ಪ್ರಥಮ ಕೃತಿಯಾದ ಕವಿರಾಜಮಾರ್ಗ ರಚಿತವಾದದ್ದು ಈ ನಾಡಿನಲ್ಲೆಂಬುದು ಹೆಮ್ಮೆಯ ಸಂಗತಿ ಅದೇ ರೀತಿ ಈ ಭಾಗದಲ್ಲಿರುವ ಸನ್ನತಿ ಬೌದ್ಧ ಧರ್ಮದ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಕವಿರಾಜ ಮಾರ್ಗಕಾರ ಹೇಳುವಂತೆ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಾಗಿದ್ದರು ಈ ನಾಡ ಜನ. ಈ ನಾಡು ಕಾಲಕಾಲಕ್ಕೆ ರೂಪ, ರಚನೆ, ಛಂದಸ್ಸುಗಳಲ್ಲಿ ಹೊಸತನದಿಂದ ಕೂಡಿದ ಕಾವ್ಯಗಳನ್ನು ಕೊಟ್ಟಿದೆ. ಇಡೀ ದೇಶಕ್ಕೆ ಮಾದರಿಯಾಗಬಲ್ಲ ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಗಳು ಹುಟ್ಟಿದ್ದು ಈ ಭಾಗದಲ್ಲಿಯೇ. ಆದ್ಯ ವಚನಕಾರ ಜೇಡರ ದಾಸಿಮಯ್ಯ ಈ ನಾಡಿನವನು. ಈ ಭಾಗ ಸಾಹಿತ್ಯ ಸಂಗೀತ ಕಲೆಗಳಿಗೂ ಹೆಸರಾಗಿದೆ. ಕಾವೇರಿಯಿಂದ ಗೋದಾವರಿ ಯವರೆಗೆ ಹಬ್ಬಿದ ಕನ್ನಡನಾಡು ಹದಿಮೂರನೆಯ ಶತಮಾನದಲ್ಲಿ ಹರಿದು ಹಂಚಿ ಹೋಯಿತು. ಕನ್ನಡ ಭಾಷೆಗೆ ಸಂಪೂರ್ಣ ಕುತ್ತೊದಗಿತು. ಉರ್ದುವಿನ ಪ್ರಾಬಲ್ಯ ಹೆಚ್ಚಾಯಿತು. ರಾಯಚೂರಿನಲ್ಲಿ ಕನ್ನಡಕ್ಕೆ ಚೈತನ್ಯ ನೀಡಿದವರು ದಾಸರು. ಅವರಲ್ಲಿ ವಿಜಯದಾಸರು, ಗೋಪಾಲದಾಸರು, ಮಾನ್ವಿಯವರಾದ ಜಗನ್ನಾಥ ದಾಸರು, ಲಿಂಗಸುಗೂರಿನ ಪ್ರಾಣೇಶದಾಸರು ಕನ್ನಡದಲ್ಲಿ ಕೀರ್ತನೆಗಳನ್ನು ವೇದಾಂತ ಕೃತಿಗಳಿಗೆ ಟೀಕೆಗಳನ್ನೂ ರಚಿಸಿದರು. ಅದರಂತೆ ಕೆಲವರು ಅನುಭಾವಿ ಕವಿಗಳು ಕನ್ನಡ ಉಳಿಸುವ ಕಾರ್ಯ ಮಾಡಿದರು. ಅವರಲ್ಲಿ ಕೂಡಲೂರು ಬಸವಲಿಂಗ ಶರಣರು, ಘನಮಠದ ನಾಗಭೂಷಣ ಶಿವಯೋಗಿಗಳು ಮುಂತಾದವರೆಲ್ಲ ಖಿಲವಾಗುತ್ತಿದ್ದ ಕನ್ನಡ ಭಾಷೆ ಸಾಹಿತ್ಯಗಳಿಗೆ ಊರುಗೋಲುಗಳಾದರು. ನಂತರ ಕೆಲ ಕಾಲ ಕನ್ನಡದ ಕಲಿಕೆ ನಿಂತು ಹೋಯಿತು. ಮಾತನಾಡುವ ಭಾಷೆಯಾಗಿ ಮಾತ್ರ ಉಳಿಯಿತು. ಉರ್ದು, ಮರಾಠಿ, ಮೋಡಿ ಬರಹದ ಭಾಷೆಗಳಾಗಿದ್ದವು. ಕನ್ನಡದ ಶಾಲೆಗಳು ಅಪರೂಪವಾದವು. ಆಗ ಪ್ರಾಚೀನ ಕನ್ನಡ ಕಾವ್ಯ ಪರಂಪರೆಯನ್ನು ಮುಂದುವರೆಸುವದರ ಜೊತೆಗೆ ಕನ್ನಡದ ಪುನರುಜ್ಜೀವನಕ್ಕೆ ಕಾರಣರಾದವರಲ್ಲಿ ಮಹಾಗಾಂವಿನ "ಗುರುಲಿಂಗ ಸಿದ್ಧ" ಕವಿಗಳು, ಐನಾಪೂರ ಕರಿಬಸವ ಕವಿಗಳು, ದ್ಯಾಂಪೂರ ಚೆನ್ನಕವಿಗಳು ಪಂಡಿತ ಕಲ್ಲಿನಾಥ ಶಾಸ್ತ್ರಿಗಳು, ಸಗರನಾಡಿನ ಬಸವ ಕವಿಗಳು ಮೊದಲಾದವರು ಪ್ರಮುಖರು. ಯಾದಗಿರಿಯ ನಾಯ್ಕಲ ಬಸವರಾಜ ಶಾಸ್ತ್ರಿಗಳು "ಧರ್ಮ ಸಂಜೀವಿನಿ" ಎಂಬ ಕನ್ನಡ ಪತ್ರಿಕೆಯನ್ನು ತೆಗೆದರು. ಇದು ಕನ್ನಡದ ಈ ಭಾಗದ ಪ್ರಥಮ ಪತ್ರಿಕೆ ಎಂಬ ಹೆಗ್ಗಳಿಕೆ ಪಡೆದಿತ್ತು. ಕೆಲಕಾಲ ನಡೆದು ನಿಂತುಹೋಯಿತು. ಪ್ರತಿಯೊಂದು ಹಳ್ಳಿಗಳಲ್ಲಿ ಮಠಗಳಿರು ತ್ತಿದ್ದವು. ಅಲ್ಲಿ ಕನ್ನಡ ಶಾಲೆಗಳು ನಡೆಯುತ್ತಿದ್ದವು. ಮಠಗಳು ಕನ್ನಡ ಭಾಷೆ ಸಾಹಿತ್ಯವನ್ನು ಉಳಿಸಿಕೊಂಡು ಬಂದವು. ಪುರಾಣ ಪ್ರವಚನಗಳನ್ನು ಏರ್ಪಡಿಸಿ ಸಂಸ್ಕೃತಿ ಸಂವರ್ಧನೆಯ ಕಾರ್ಯಮಾಡಿದವು. ಶರೀಫ್ ಸಾಹೇಬರು, ಕಡಕೋಳ ಮಡಿವಾಳೇಶ್ವರರು, ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ ಜೀವನವನ್ನು ಜನಸಾಮಾನ್ಯರಿಗಾಗಿ ಮುಡುಪಾಗಿಟ್ಟು ಜನರನ್ನು ಪಾರಮಾರ್ಥಿಕದತ್ತ ಸೆಳೆಯುವ ಸಾಧನವಾಗಿ ಅನುಭಾವ ಗೀತೆಗಳನ್ನು ರಚಿಸಿದರು. ಆ ಮೂಲಕ ವಿನಾಶದ ಅಂಚಿನಲ್ಲಿದ್ದ ಕನ್ನಡ ಭಾಷೆ ಸಾಹಿತ್ಯಕ್ಕೆ ಊರುಗೋಲುಗಳಾದರು.

**

# ೭. ಪ್ರಭಾವ-ಪ್ರೇರಣೆ

ಡಾ.ಸಿದ್ಧಯ್ಯ ಪುರಾಣಿಕರು ಸುಸಂಸ್ಕೃತ ಮನೆತನದಲ್ಲಿ ಜನಿಸಿದ್ದರಿಂದ ಬಾಲ್ಯದಿಂದಲೇ ಅಧ್ಯಯನಶೀಲರಾಗಿದ್ದರು. ತಂದೆಯವರು ಬರೆದ ಪುರಾಣ, ನಾಟಕ, ಭಜನೆ ಪದ, ಡೊಳ್ಳಿನ ಪದ, ಜೋಗುಳ ಪದ, ಮಂಗಳಾರತಿ, ಒಗಟು ಇವುಗಳನ್ನು ನೋಡಿದಾಗಲೆಲ್ಲ 'ನಾನು ಎಂದಾದರೂ ಹೀಗೆ ಬರೆಯ ಬಲ್ಲೆನೆ' ಎಂದು ವಿಚಾರ ಮಾಡುತ್ತಿದ್ದರು. ಸೋದರ ಮಾವ, ತಂದೆ ನಾಟಕ ಆಡಿಸುವಾಗ ನಟರು ಬರದಿದ್ದರೆ ಇವರೇ ಪಾತ್ರಧಾರಿಗಳಾಗುತ್ತಿದ್ದರು. ಪ್ರತಿದಿನ ನೋಡುತ್ತಿದ್ದುದರಿಂದ ಎಲ್ಲ ಪಾತ್ರಗಳ ಮಾತು ಕಂಠಪಾಠ ಆಗಿರುತ್ತಿದ್ದವು. ಅಜ್ಜ ಚೆನ್ನಕವಿಗಳ ಮನೆಯಲ್ಲಿ ಸಾಹಿತ್ಯಿಕ ಚರ್ಚೆ ನಡೆದಿರುತ್ತಿತ್ತು ಆದುದರಿಂದ ಸಹಜವಾಗಿಯೇ ಓದುವ ಹವ್ಯಾಸ ಇವರಿಗಂಟಿಕೊಂಡಿತು. ಈ ಹವ್ಯಾಸಕ್ಕೆ ನೀರೆರೆದು ಬೆಳೆಸಿದವರು ಮೊದಲು ತಂದೆ. ನಂತರ ವಿದ್ಯಾನಂದ ಗುರುಕುಲದ ಶಿಕ್ಷಕರಾದ ಶ್ರೀ ಪಾ.ಭಿ.ದೇಸಾಯಿಯವರು. ಪ್ರತಿದಿನ ಒಂದೊಂದು ಪುಸ್ತಕ ಓದಲು ಕೊಡುವ ಮೂಲಕ ಇವರಿಗಿದ್ದ ಜ್ಞಾನ ಲಾಲಸೆಯನ್ನು ಹೆಚ್ಚಿಸಿದರು. ಕನ್ನಡ ಸಾಹಿತ್ಯದ ಸಮಗ್ರ ಅಧ್ಯಯನಗೈದ ಇವರು ಪ್ರಭಾವಿತಗೊಂಡಿದ್ದು ವಚನಕಾರರ ವಚನಗಳಿಂದ. ಬಸವಣ್ಣ ಗಾಂಧಿ ಹಾಗೂ ಹರ್ಡೇಕರ ಮಂಜಪ್ಪ ಇವರ ಆದರ್ಶ ವ್ಯಕ್ತಿಗಳಾದರು. ಖಾದಿ ವಸ್ತ್ರ ಧರಿಸಿದರು, ತಕಲಿಯಿಂದ ನೂಲು ತೆಗೆದರು. ಮಾನವರೆಲ್ಲ ಒಂದೇ ಎಂಬ ಸಮಾನತಾ ತತ್ವ ಅನುಸರಿಸಿದರು. ಅಂದಿನ ದೇಶದ ಸಮಸ್ಯೆಗಳು, ಸ್ವಾತಂತ್ರ್ಯದ ಹಂಬಲ, ದೇಶಭಕ್ತಿ, ಕನ್ನಡ ನಾಡುನುಡಿಯ ಮೇಲಿನ ಅಭಿಮಾನ, ಇವುಗಳೇ ಹಂತ ಹಂತದಲ್ಲಿ ಪ್ರೇರಣೆಗಳಾಗತೊಡಗಿದವು. ದೇಶಭಕ್ತಿ ಪ್ರೇರಕ ನಾಟಕಗಳನ್ನು ನೋಡಿ ಪ್ರಭಾವಿತರಾದರು.

ಕಲಬುರ್ಗಿಯಲ್ಲಿ ಅಧ್ಯಯನ ಮಾಡುತ್ತಿರುವಾಗ ಅಲ್ಲಿಗೆ ಬಂದ ಹಿರಿಯ ಸಾಹಿತಿಗಳನ್ನು ಕವಿಗಳನ್ನು ಸಮೀಪದಿಂದ ಕಂಡರು. ಅವರ ನುಡಿಗಳಿಂದ ಆಕರ್ಷಿತರಾದರು. ಬೇಂದ್ರೆ, ಕುವೆಂಪು, ಬಿ.ಎಂ.ಶ್ರೀ, ಮಾಸ್ತಿ, ವಿ.ಕೃ.ಗೋಕಾಕ, ರಂ.ಶ್ರೀ.ಮುಗಳಿ, ಶಿವರಾಮಕಾರಂತ, ತೀನಂಶ್ರೀ, ಡಿ.ಎಲ್.ಎನ್ ಮೊದಲಾದವರ ಭಾಷಣಗಳನ್ನು ಕೇಳಿ ಪ್ರಭಾವಿತರಾದರು. ಶ್ರೀ ತವಗ ಭೀಮಸೇನರಾಯರು ಶ್ರೀ ಮಾನ್ವಿ ನರಸಿಂಗರಾಯರು ಗುರುಗಳಾಗಿ ಪ್ರಭಾವ ಬೀರಿದ್ದರು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ವಿದ್ಯಾರ್ಥಿ ಸಂಘ,



ಕರ್ನಾಟಕ ಸಂಘಗಳಲ್ಲಿ ಪದಾಧಿಕಾರಿಯಾಗಿ ಹಲವಾರು ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಇವರು ಒಳ್ಳೆಯ ಸಂಘಟಕರೂ ಆಗಿದ್ದರು. ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ಸಿದ್ಧಯ್ಯನವರು ಚಿಕ್ಕವರಿರುವಾಗಲೇ ಸಂಘ ಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸತೊಡಗಿದರು. ಕಲಬುರ್ಗಿ ಕನ್ನಡ ಸಾಹಿತ್ಯ ಸಂಘದ ಕೈ ಬರಹದ ಮಾಸಪತ್ರಿಕೆ 'ಮಿಂಚು'ದ ಸಂಪಾದಕರಾದರು ವೀರಶೈವ ತರುಣ ಸಂಘದ ಕಾರ್ಯದರ್ಶಿಯಾಗಿ ಸಭೆ ಸಮಾರಂಭಗಳಲ್ಲಿ ಭಾಗವಹಿಸತೊಡಗಿದರು ಹಂತಹಂತವಾಗಿ ಬೆಳೆಯುತ್ತ ಒಳ್ಳೆಯ ಭಾಷಣಕಾರರಾಗಿ ರೂಪುಗೊಂಡರು. ಅನೇಕ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಕವಿಗೋಷ್ಠಿಗಳಲ್ಲಿ ಭಾಗವಹಿಸ ತೊಡಗಿದರು. ೨೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿ ಹಿರಿಯ ಕವಿಗಳಿಂದ ಮೆಚ್ಚುಗೆ ಪಡೆದರು.

ವೃತ್ತಿಗೆ (ನೌಕರಿಗೆ) ಸೇರಿದ ಮೇಲೆ ಸಾಹಿತ್ಯಾಸಕ್ತಿ ಕಡಿಮೆಯಾಗಲಿಲ್ಲ, ಬದಲಿಗೆ ದ್ವಿಗುಣಗೊಂಡಿತು. ೧೯೪೮ರಲ್ಲಿ ಕಲಬುರ್ಗಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದರು. ನಂತರ ಹೈದರಾಬಾದದಲ್ಲಿ ಕರ್ನಾಟಕ ಸಾಹಿತ್ಯ ಮಂದಿರದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಈ ಭಾಗದಲ್ಲಿ ಆಗ ನಾಡಹಬ್ಬಗಳನ್ನು ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಿದ್ದರು. ಒಂಬತ್ತು ದಿನಗಳವರೆಗೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು. ಪ್ರತಿದಿನ ಸಾಹಿತಿಯೊಬ್ಬರ ಉಪನ್ಯಾಸವನ್ನು ಏರ್ಪಡಿಸುತ್ತಿದ್ದರು. ಅದಕ್ಕಾಗಿ ಪೂರ್ವ ಸಿದ್ಧತೆ ಮಾಡಿಕೊಂಡು ಎಲ್ಲ ಊರುಗಳಿಗೆ ಎಲ್ಲ ಅತಿಥಿಗಳನ್ನು ಕರೆದೊಯ್ಯುವ ಏರ್ಪಾಡು ಮಾಡುತ್ತಿದ್ದರು.

ಕರ್ನಾಟಕಾಂಧ್ರ ಸಮ್ಮೇಳನವನ್ನು ಏರ್ಪಡಿಸಿದರು. ಈ ಭಾಗದ ಸಾಹಿತಿಗಳನ್ನೆಲ್ಲ ಒಂದೆಡೆ ತರುವದಕ್ಕಾಗಿ ಹೈದ್ರಾಬಾದ್ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ನಾಲ್ಕು ಸಮ್ಮೇಳನಗಳನ್ನು ಮಾಡಿದರು. ನಾಂದೇಡದಲ್ಲಿದ್ದಾಗ ದೇಗಲೂರು ತಾಲೂಕಾ ಸಾಹಿತ್ಯ ಸಮ್ಮೇಳನ ಮಾಡಿದರು. ಸಮ್ಮೇಳನಕ್ಕೆ ಸಾವಿರಾರು ಕನ್ನಡಿಗರು ಕನ್ನಡ, ಬೋಧನ, ಬಿಲೋಲಿ, ಸಂತಪೂರ, ಔರಾದ, ಉದ್ಗೀರ, ಬೀದರ್ ಊರುಗಳಿಂದ ಬಂದಿದ್ದರು. ಯಾವುದೇ ಕನ್ನಡ ಕಾರ್ಯಕ್ರಮ ಈ ಭಾಗದಲ್ಲಿ ನಡೆದರೂ ಅದರಲ್ಲಿ ಸಿದ್ಧಯ್ಯ ಪುರಾಣಿಕರಿರುತ್ತಿದ್ದರು. ಹರಪನಹಳ್ಳಿ ಸಾಹಿತ್ಯ ಸಮ್ಮೇಳನದ ಒಂದು ಗೋಷ್ಠಿಯ ಅಧ್ಯಕ್ಷರಾಗಿದ್ದರು. ಬೀದರ್ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು.

ಶಿಕ್ಷಣ ಮಂತ್ರಿಗಳ ಕಾರ್ಯದರ್ಶಿಗಳಾಗಿದ್ದಾಗ ಅನೇಕ ಕನ್ನಡದ ಕೆಲಸಗಳನ್ನು ಮಾಡಿದರು. ಕೆಲವು ತಾಲೂಕುಗಳ ಕನ್ನಡ ಸಂಘಗಳಿಗೆ ನಿವೇಶನಗಳನ್ನು ಒದಗಿಸಿದರು. ಕನ್ನಡ ಪ್ರಥಮ-ಮಧ್ಯಮ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳನ್ನು ಸಂಪಾದಿಸಿದರು. ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ

ಗೋಷ್ಠಿಯ ಅಧ್ಯಕ್ಷರಾಗಿದ್ದರು. ದಸರಾ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆ ವರ್ಷ ದ.ರಾ.ಬೇಂದ್ರೆಯವರು ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಆಗ ಸಿದ್ಧಯ್ಯನವರು 'ರಾಷ್ಟ್ರರಾಜೇಶ್ವರಿಗೆ' ಎಂಬ ಪದ್ಯ ಓದಿದರು.

ಸಿದ್ಧಯ್ಯ ಪುರಾಣಿಕರು ತಮ್ಮ ಅಧಿಕಾರಾವಧಿಯಲ್ಲಿ ಆಡಳಿತ ಭಾಷೆ ಕನ್ನಡ ವಾಗಬೇಕೆಂದು ಬಹಳ ಶ್ರಮಿಸಿದರು. ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಗಳಾಗಿದ್ದಾಗ ಕಾರ್ಯಾಲಯ ಕೈಪಿಡಿಯೊಂದು ರಚಿತವಾಯಿತು. ನಂತರ ಬಸವಣ್ಣನವರ ಅಷ್ಟಶತಮಾನೋತ್ಸವ ನೆರವೇರಿಸಬೇಕೆಂದರು. ಶ್ರೀ.ಬಿ.ಡಿ.ಜತ್ತಿಯವರಿಂದ ಬಸವ ಸಮಿತಿಯ ಸ್ಥಾಪನೆ ಬೆಂಗಳೂರಿನಲ್ಲಾಯಿತು. ಸಿದ್ಧಯ್ಯನವರು ಸಂಸ್ಥಾಪಕ ಸದಸ್ಯ ರಲ್ಲೊಬ್ಬರಾಗಿ, ಕಾರ್ಯದರ್ಶಿಗಳಾಗಿ, ಪ್ರಧಾನ ಸಂಪಾದಕರಾಗಿ ಅನೇಕ ವರ್ಷಗಳವರೆಗೆ ಸೇವೆ ಸಲ್ಲಿಸಿದರು. ಆಗ ಬಸವನ ಬಾಗೇವಾಡಿ ಹಾಗೂ ಕೂಡಲ ಸಂಗಮಗಳಲ್ಲಿ ಅನೇಕ ಕಾರ್ಯಕ್ರಮಗಳು ಜರುಗಿದವು.

ಪುರಾಣಿಕರು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ದೆಹಲಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡದ ಭವಿತವ್ಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೊಡಗು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ನವಿಲುಗುಂದದಲ್ಲಿ ನಡೆದ ಸರ್ವ ಸಮ್ಮೇಳನದ ಅಧ್ಯಕ್ಷತೆ, ಧರ್ಮಸ್ಥಳದಲ್ಲಿ ಧರ್ಮ ಸಮ್ಮೇಳನದ ಅಧ್ಯಕ್ಷತೆ, ಹೊಂಬುಜದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಎಡೆಯೂರು ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ, ಮೈಸೂರು ದಸರಾ ಕವಿಗೋಷ್ಠಿ ಅಧ್ಯಕ್ಷತೆ, ೧೯೮೫ರ ಅಕ್ಟೋಬರ್ ೨೬-೨೭ರಂದು ನಡೆದ ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೮೭ರಲ್ಲಿ ಕಲಬುರ್ಗಿಯಲ್ಲಿ ನಡೆದ ೫೮ನೆಯ ಕ.ಸಾ.ಸಮ್ಮೇಳನದಲ್ಲಿ ಸರ್ವಾಧ್ಯಕ್ಷರಾಗಿದ್ದರು. ವೃತ್ತಿಯಿಂದ ನಿವೃತ್ತರಾದ ಮೇಲೆ ಸಂಪೂರ್ಣವಾಗಿ ಸಾಹಿತ್ಯಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುತ್ತಿದ್ದರು. ತಮ್ಮ ಮನೆ ಯನ್ನು ಒಂದು ಅಧ್ಯಯನ ಕೇಂದ್ರವನ್ನಾಗಿ ಮಾಡಿಕೊಂಡು ಪ್ರತಿ ತಿಂಗಳು ಒಂದೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದರು. ಇದಕ್ಕೆ "ವ್ಯಾಸಂಗ ಗೋಷ್ಠಿ" ಎಂದು ಕರೆಯುತ್ತಿದ್ದರು. ಇದರಲ್ಲಿ ಮಹಾಕವಿಗಳ ಕುರಿತು ಪಂಡಿತರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು.

**

# ೮. ಪ್ರಶಸ್ತಿ, ಸನ್ಮಾನ ಹಾಗೂ ಅಭಿನಂದನ ಗ್ರಂಥಗಳು

ಡಾ.ಸಿದ್ಧಯ್ಯ ಪುರಾಣಿಕರು ಬಾಲ್ಯದಿಂದಲೇ ಪ್ರಶಸ್ತಿ ಪಡೆಯುತ್ತ ಸಾಗಿದವರು. ಪ್ರೌಢಶಾಲೆಯಲ್ಲಿರುವಾಗ ಅವರ ಪ್ರಥಮ ಪದ್ಯಕ್ಕೆ ಬಹುಮಾನ ಬಂದಿತ್ತು. ಕವಿಗಳಾಗಿ, ನಾಟಕಕಾರರಾಗಿ, ವಾಗ್ಮಿಗಳಾಗಿ ಹೆಸರು ಪಡೆದರು ಒಳ್ಳೆಯ ಕಾರ್ಯಗಳಿಗೆ ಸತ್ಫಲಗಳು ದೊರೆಯುವಂತೆ ಇವರಿಗೆ ಅನೇಕ ಸನ್ಮಾನಗಳು ಪ್ರಶಸ್ತಿಗಳು ಬೆನ್ನಿಗಂಟಿಕೊಂಡು ಬಂದವು. ೧೯೬೪ರಲ್ಲಿ ಪ್ರಕಟವಾದ ಮಕ್ಕಳ ಕವನ ಸಂಕಲನ "ತುಪ್ಪಾ ರೊಟ್ಟಿ ಗೇಗೇಗೇ." ಇದಕ್ಕೆ ಭಾರತ ಸರ್ಕಾರದ ಬಹುಮಾನ ಬಂದಿತು. ಇವರು ಬರೆದ ಗಿರಿಜಾ ಕಲ್ಯಾಣವೆಂಬ ಗೀತರೂಪಕ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರ್ಪಡೆಯಾದ ಪ್ರಥಮ ಗೀತನಾಟಕವಾಗಿದ್ದು ೧೮-೨-೧೯೬೪ರಲ್ಲಿ ಪ್ರಸಾರವಾಯಿತು. ಕವನ ಸಂಕಲನ "ಮಾನಸ ಸರೋವರ"ಕ್ಕೆ ರಾಜ್ಯ ಸರ್ಕಾರದ ಬಹುಮಾನ ಬಂದಿತ್ತು.

ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದವರನ್ನು ಅಭಿನಂದಿಸುವ, ಸನ್ಮಾನಿಸುವ ಕಾರ್ಯಕ್ರಮದಂತೆ ಪುರಾಣಿಕರಿಗೆ ೫೦ ವರ್ಷ ತುಂಬಿದಾಗ ೧೯೬೮ರಲ್ಲಿ ವಿಜಾಪೂರದ ಸತ್ಯಾನಂದ ಹಾಗೂ ಮೇಘ ಮಿತ್ರರು ಅಭಿನಂದಿಸಿ, ಅಭಿನಂದನ ಗ್ರಂಥವೊಂದನ್ನು ಹೊರತಂದರು. ಅದುವೇ "ಕಾವ್ಯಶ್ರೀ ಕಾವ್ಯಾನಂದ" ಸಿದ್ಧಯ್ಯ ಪುರಾಣಿಕರಿಗೆ ೫೫ ವರ್ಷವಾದಾಗ ೧೯೭೩ರಲ್ಲಿ ಎರಡು ಅಭಿನಂದನ ಗ್ರಂಥಗಳು ಹೊರಬಂದವು. ಮೊದಲನೆಯದು ಕಲಬುರ್ಗಿಯ ಜೀವನ ವಿಕಾಸ ಮಾಸಪತ್ರಿಕೆ ವಿಶೇಷ ಸಂಚಿಕೆ ಯೊಂದನ್ನು ಹೊರತಂದಿತು. ಎರಡನೆಯದಾಗಿ ಬೆಳಗಾವಿಯಲ್ಲಿ ಮಿರ್ಜಿ ಅಣ್ಣಾರಾಯ ಹಾಗೂ ಕೃಷ್ಣಕೊಲ್ಹಾರ ಕುಲಕರ್ಣಿಯವರು "ಕಾವ್ಯಾನಂದ" ಎಂಬ ಅಭಿನಂದನ ಗ್ರಂಥ ಹೊರತಂದರು. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರ ಸಮಗ್ರ ಸೇವೆಗೆ ಸನ್ಮಾನಿಸಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ೧೯೮೦ರಲ್ಲಿ ಇವರ ವಚನೋದ್ಯಾನ ಕೃತಿಗೆ ಭಾರತೀಯ ಭಾಷಾಪರಿಷತ್ತಿನ ಅತ್ಯುಚ್ಚ ಪ್ರಶಸ್ತಿಯಾದ "ಬಿಲ್ವಾರ ಪ್ರಶಸ್ತಿ" ಪತ್ರ ಹಾಗೂ ೧೧ ಸಾವಿರ ರೂ. ನಗದು ಬಹುಮಾನ ದೊರಕಿತು. ಅದೇ ವರ್ಷ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಪುರಸ್ಕಾರ "ವಚನೋದ್ಯಾನ"ಕ್ಕೆ ದೊರಕಿತ್ತು. ದೇ.ಜ.ಗೌ ಸಂಪಾದಕತ್ವದಲ್ಲಿ ವಚನೋದ್ಯಾನದರ್ಶನ, ೧೯೮೦ರಲ್ಲಿ ಸನ್ಮಾನ ಸಮಿತಿ, ಮೈಸೂರು, ಪ್ರಕಟವಾಗಿದೆ. ೧೯೮೧ರಲ್ಲಿ ಕರ್ನಾಟಕ

ವಿಶ್ವವಿದ್ಯಾಲಯವು ಮಾಳವಾಡ ಪ್ರಶಸ್ತಿ ನೀಡಿ ಗೌರವಿಸಿತು. ೧೯೮೧ರಲ್ಲಿ ಪುರಾಣಿಕರಿಗೆ ೬೦ ತುಂಬಿದ ಸವಿನೆನಪಿಗಾಗಿ ಕಾವ್ಯಾನಂದವೆಂಬ ಬೃಹತ್ ಅಭಿನಂದನ ಗ್ರಂಥವನ್ನು ಶ್ರೀ. ಸಾ.ಶಿ.ಮರುಳಯ್ಯ ಅವರು ಸಂಪಾದಿಸಿದರು. ಅದರೊಂದಿಗೆ ಟಿ.ಆರ್. ಮಹಾದೇವಯ್ಯ ಅವರ ಸಂಪಾದಕತ್ವದಲ್ಲಿ "ಸಹೃದಯ"ವೆಂಬ ಸಂಸ್ಮರಣ ಗ್ರಂಥವೂ ಹೊರಬಂದಿತು. ಶ್ರೀ ಜಿ.ನಾರಾಯಣರು ರಾಜ್ಯಮಟ್ಟದಲ್ಲಿ ಸನ್ಮಾನಿಸಿ ಅಭಿನಂದನ ಗ್ರಂಥ "ಕಾವ್ಯಾನಂದ" ಬಿಡುಗಡೆ ಮಾಡಿ ಸನ್ಮಾನಿಸಿದರಲ್ಲದೇ ೪೦.೦೦೦ರೂ. ಉಳಿಸಿ 'ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್' ಮಾಡಿ ಇವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಅದರಡಿಯಲ್ಲಿ ಪ್ರತಿವರ್ಷ **"ಕಾವ್ಯಾನಂದ"** ಪ್ರಶಸ್ತಿಗಳನ್ನು ಕೊಡುತ್ತಿದ್ದಾರೆ. ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ವಚನ ನಂದನ ಕೃತಿಗೆ ಹುಬ್ಬಳ್ಳಿಯ ಮೂರುಸಾವಿರ ಮಠದ ಪುರಸ್ಕಾರವೂ ದೊರಕಿದೆ.

**

## ೯. ಸಾಹಿತ್ಯಿಕ ಸಾಧನೆ

ಕನ್ನಡ ಸಾಹಿತ್ಯ ಲೋಕದಲ್ಲಿ ಕಾವ್ಯಾನಂದ ಎಂಬ ಕಾವ್ಯನಾಮದಿಂದ ಸಿದ್ಧಯ್ಯ ಪುರಾಣಿಕರು ಚಿರಪರಿಚಿತರಾದರು. ಇವರು ಬಾಲ್ಯದಿಂದಲೇ ಸಾಹಿತ್ಯದ ಕಡೆ ವಾಲಿದವರು. ನಾಡುನುಡಿ ಚಿಂತನೆಗೆ ತೊಡಗಿದ ಕವಿ. ಇದರೊಂದಿಗೆ ಹೊಸಗನ್ನಡ ಸಾಹಿತ್ಯದ ಘಟ್ಟಗಳಾದ ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಸಾಹಿತ್ಯ ಸಂದರ್ಭಗಳಲ್ಲೂ ಸ್ಪಂದಿಸಿದ್ದಾರೆ. ಆದರೆ ಯಾವ ಘಟ್ಟಕ್ಕೂ ಅಂಟಿಕೊಳ್ಳಲಿಲ್ಲ. ಶರಣರ ವಚನಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರು. ಹೀಗಾಗಿ ಆಧುನಿಕ ವಚನಕಾರರಲ್ಲಿ ಇವರು ಒಬ್ಬರಾಗಿದ್ದಾರೆ. ಅವರು ಕಾವ್ಯ, ಕತೆ, ನಾಟಕ, ಕಾದಂಬರಿ, ಜೀವನಚರಿತ್ರೆ, ವಚನ, ಮಕ್ಕಳಸಾಹಿತ್ಯ ಸಂಶೋಧನೆ, ಸಂಪಾದನೆ ಹೀಗೆ ಸೃಜನ ಹಾಗೂ ಸೃಜನೇತರ ಸಾಹಿತ್ಯ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಹಿತ್ಯದ ವೈವಿಧ್ಯತೆಯನ್ನು ಕಟ್ಟಿಕೊಡುವಲ್ಲಿ ಸಫಲರಾಗಿದ್ದಾರೆ.

### ಕಾವ್ಯ

ಕನ್ನಡ ಸಾಹಿತ್ಯ ಹತ್ತನೆಯ ಶತಮಾನದಿಂದ ಪ್ರಾರಂಭಗೊಂಡು ಇವತ್ತಿನವರೆಗೆ ಅವ್ಯಾಹತವಾಗಿ ಮುಂದುವರೆದಿದೆ. ಆಧುನಿಕ ಸಾಹಿತ್ಯ ಪಾಶ್ಚಾತ್ಯರ ಪ್ರೇರಣೆ ಪ್ರಭಾವಗಳಿಂದ ದೇಶಿಯ ಸೊಗಡನ್ನು ಹಿಡಿದುಕೊಂಡು ಬಂದಿದೆ. ರೋಮ್ಯಾಂಟಿಕ್ ಕವಿಗಳಾದ ವರ್ಡ್ಸ್‌ವರ್ತ್, ಕೋಲ್‌ರಿಜ್, ಕೀಟ್ಸ್, ಬೈರನ್, ಶೆಲ್ಲಿ ಮೊದಲಾದವರು ಪ್ರಮುಖರು. ಕನ್ನಡದಲ್ಲಿ ಬಿ.ಎಂ.ಶ್ರೀ ಅವರ ಇಂಗ್ಲೀಷ್ ಗೀತೆಗಳ ಮೂಲಕ ನವೋದಯ ಕಾವ್ಯ ಪ್ರಾರಂಭವಾಯಿತು. ಮೊದಲಿಗೆ ಭಾವಗೀತೆ (ಲಿರಿಕ್) ಬಂದವು. ರೂಪ ಬದಲಾವಣೆ ಹೊಂದಿ ಹೊಸ ಛಂದಸ್ಸು ಭಾಷೆ, ಪದ ಬಳಕೆ ಶೈಲಿಯಿಂದ ನವೋದಯ ಹುಟ್ಟಿತು. ಹಲವಾರು ಸಮಸ್ಯೆಗಳ ನಡುವೆಯೂ ಬಿ.ಎಂ.ಶ್ರೀ, ತೀನಂಶ್ರೀ, ಗೋವಿಂದ ಪೈ, ಪಂಜೆ, ಮಧುರಚೆನ್ನ, ಕುವೆಂಪು, ಬೇಂದ್ರೆ, ಪು.ತಿ.ನ, ಕೆ.ಎಸ್.ಎನ್. ಕಣವಿ, ಶಿವರುದ್ರಪ್ಪ ಮೊದಲಾದವರು ನಿಸರ್ಗ ಸೌಂದರ್ಯ, ಆಧ್ಯಾತ್ಮ, ಸ್ವಾತಂತ್ರ್ಯದ, ಹಂಬಲ, ಜನಜಾಗೃತಿ, ದೇಶಪ್ರೇಮ, ಗಾಂಧೀತತ್ವ, ಖಾದಿ ಪ್ರೇಮ ಮುಂತಾದವುಗಳು ಇವರ ಕವನಗಳ ವಸ್ತುವಾದವು.

ನವೋದಯ ತಲೆಮಾರಿಗೆ ಹತ್ತಿರದವರಾಗಿದ್ದುಕೊಂಡು ಕಾವ್ಯಕ್ಷೇತ್ರಕ್ಕೆ ಕಾಲಿಟ್ಟ ಕಾವ್ಯಾನಂದರು ಕಾವ್ಯರಚನೆಗೆ ತೊಡಗಿದ್ದು ಬಾಲ್ಯದಲ್ಲಿ. ಅಂದು ಝರಿಯಾಗಿ ಹುಟ್ಟಿದ ಕಾವ್ಯ ಸೆಲೆ ಹಿರಿದೊರೆಯಾಗಿ ಅವ್ಯಾಹತವಾಗಿ, ಸಮಕಾಲೀನ ಸಮಸ್ಯೆಗಳಿಗೆ ವೈಚಾರಿಕ ಚಿಂತನೆ, ಸ್ವಾನುಭವಗಳ ಮೂಲಕ ಸ್ಪಂದಿಸುತ್ತಾ ಪ್ರವಹಿಸುತ್ತಿರುವುದರ ಹಿಂದೆ ಅವಿರತ ಪರಿಶ್ರಮ ಅಡಗಿರುವುದು ಸುಸ್ಪಷ್ಟ. ಅನೇಕ ಹಿರಿಯ ಕವಿಗಳ ವಚನಕಾರರ ಪ್ರೇರಣೆ ಪಡೆದುಕೊಂಡು ಸಾಹಿತ್ಯಸೃಷ್ಟಿಗೆ ತೊಡಗಿದರು. ಜಲಪಾತದಿಂದ ಮರುಳಸಿದ್ಧನ ಕಂತೆಯವರೆಗೆ ೧೯೫೫ ರಿಂದ ೧೯೯೧ರವರೆಗೆ ಎಂಟು ಕವನಸಂಕಲನಗಳು ಹೊರಬಂದಿವೆ.

ಇದಕ್ಕೂ ಪೂರ್ವದಲ್ಲಿ ಅವರು 'ಬೆಳಗು' ಎಂಬ ಕವಿತೆ ಹಾಗೂ ನಾಟಕಗಳನ್ನು ಬರೆದಿದ್ದರು. ಅವೆಲ್ಲ ಅಂದಿನ ಮಿಂಚಿನ ಬಳ್ಳಿ, ಜಯಂತಿ, ಪ್ರಬುದ್ಧ ಕರ್ನಾಟಕ ಅಲ್ಲದೇ ಹಲವಾರು ಪ್ರಖ್ಯಾತ ಪತ್ರಿಕೆಗಳಲ್ಲಿ ಪ್ರಕಟಗೊಂಡಾಗಲೇ ಸಿದ್ಧಯ್ಯನವರು ಕವಿಯಾಗಿ ನಿಂತಿದ್ದರು. ಒಬ್ಬ ಅಧಿಕಾರಿಯಾಗಿ ನಿದ್ದೆ ಊಟ ಇಲ್ಲದೇ ಹಲವಾರು ಕಡೆ ತಿರುಗಾಡಿ ಬಂದು ವಿಶ್ರಾಂತಿ ತೆಗೆದುಕೊಳ್ಳುವುದೇ ಕಷ್ಟ. ಅವುಗಳ ನಡುವೆ ಐವತ್ತೂರಕ್ಕೂ ಹೆಚ್ಚು ಕೃತಿ ನೋಡಿದಾಗ ಅಚ್ಚರಿ ಮೂಡದೇ ಇರದು.

ಕವನ ಸಂಕಲನಗಳು ಎಂಟು. ಅವುಗಳೆಂದರೆ ಜಲಪಾತ (೧೯೫೩) ಕರುಣಾಶ್ರಾವಣ (೧೯೫೫), ಮಾನಸ ಸರೋವರ (೧೯೫೬), ಕಲ್ಲೋಲ ಮಾಲೆ (೧೯೬೮), ಮೊದಲು ಮಾನವನಾಗು (೧೯೬೯), ಚರಗ (೧೯೮೭), ಹಾಲ್ದೆನೆ (೧೯೯೦), ಮರುಳ ಸಿದ್ಧನ ಕಂತೆ (೧೯೯೧). ಈ ಸಂಕಲನಗಳಲ್ಲಿ ನಾವು ಮುಖ್ಯವಾಗಿ ಕಾಣುವ ಅಂಶಗಳೆಂದರೆ: ಪ್ರಕೃತಿ ಗೀತೆಗಳು, ಪ್ರೇಮ ಗೀತೆಗಳು, ನಾಡುನುಡಿ ಕುರಿತ ಸಾಮಾಜಿಕ ಗೀತೆಗಳು, ತಾತ್ವಿಕ ಗೀತೆಗಳು ಎಂದು ವಿಭಾಗಿಸಬಹುದು.

## ಪ್ರಕೃತಿ ಗೀತೆಗಳು

ನವೋದಯ ಕವಿ, ಹಳೆಯ ಕಾವ್ಯವನ್ನು ಬದಿಗೊತ್ತಿ ಹೊಸಕಾವ್ಯ ಮಾರ್ಗ ಹಿಡಿದು, ಬಹಿರ್ಮುಖಿಯಾದಾಗ ಅವನನ್ನು ಆಕರ್ಷಿಸಿದ್ದು ಪ್ರಕೃತಿ. ಕಾಲನಿಂದ ಮಾಸದ ಸೌಂದರ್ಯ, ಜೀವನ ಸೌಂದರ್ಯ, ಲೋಕಭಾವಗಳ ಬೆಸುಗೆ, ಮಧುರ ಭಾವಗಳ ಸಮುಚ್ಚಯ, ಪ್ರಕೃತಿಯ ಪೂರ್ಣ ಸತ್ವವನ್ನರಿತು, ಸೌಂದರ್ಯದ ಜೊತೆಗೆ ಭಯಾನಕ ರೌದ್ರ ಚಿತ್ರಣವನ್ನು ಕವಿ ಕೊಡಬಲ್ಲ. ಮಾನವ ಪ್ರಕೃತಿ ಆರಾಧಕ. ಪಂಪನಿಂದ ಇಲ್ಲಿಯವರೆಗೆ ಪ್ರಕೃತಿ ವರ್ಣನೆಬಂದಿದೆ ಬೆಳಗು, ಸೂರ್ಯಾಸ್ತಮಾನ ಕುರಿತು ಎಲ್ಲರೂ ಹೇಳುವುದಕ್ಕೂ ಕಾವ್ಯಾನಂದರು ಹೇಳುವುದಕ್ಕೂ ವ್ಯತ್ಯಾಸವಿದೆ. ವಿಶಾಲಭಾವ ಪ್ರಕೃತಿಯಿಂದಲೂ ಪಡೆಯಬಹುದು.



ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ
ಜಗದ ಜೀವಿಗಳದರ ವಿವಿಧ ವೇಷ
ವಿಶ್ವಗರ್ಭವದೆಲ್ಲ ಒಂದೇ ಜೀವದ ಕೋಶ
ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ

–(ಬೆಳಗು ಕವಿತೆ)

ಅನೇಕ ಹಿರಿಯ ಕವಿಗಳ ಜಾಡಿನಲ್ಲಿ ಬರೆಯತೊಡಗಿದರೂ ತಮ್ಮದೇ ಆದ ವಿಶಿಷ್ಟ ಚಿಂತನಾಂಶವನ್ನು, ಕೆಲವೊಂದು ಸಂದರ್ಭದಲ್ಲಿ ಪ್ರತಿಮೆ ಪ್ರತೀಕಗಳನ್ನು ಕೊಡುವ ಮೂಲಕ ಮೆರೆಯುತ್ತಾರೆ.

ಸೂಯಾಸ್ತದ ಕುರಿತ ವಿಚಾರ ವಿಭಿನ್ನವಾದುದು. ಜಗತ್ತಿಗೆ ಬೆಳಕನ್ನು ಕೊಡುವದಕ್ಕೆ ಸೂರ್ಯ–ಚಂದ್ರರಿದ್ದಾರೆ. ಇಬ್ಬರ ಮಧ್ಯ ಸೌಹಾರ್ದಯುತ ಸಂಬಂಧವಿದೆ. ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ಒಂದು ಕಾರ್ಯ ಯಶಸ್ವಿ ಆಗಬೇಕಾದರೆ ಇಂಥ ಸ್ನೇಹದ ಅವಶ್ಯಕತೆ ಎಷ್ಟೆಂಬುದರ ಅರಿವು ಈ ಪದ್ಯದಿಂದ ಉಂಟಾಗುತ್ತದೆ.

ಮುಳುಗುತಿಹ ದಿನಕರನು ಮೂಡುತಿಹ ಉಡುಗಣಕೆ
ಹೇಳುತಿಹ ಮುಗಿದುದ್ಯೆ ನನ್ನ ಪಾತ್ರ
ನೀವಿನ್ನು ಬೆಳಗಿರಿ ನಿಮ್ಮಲ್ಲೆ ಜನಿಸಿಲಿ
ರಾತ್ರಿಯನೆ ಬೆಳಗುವಾ ಶಿವನಮೃತನೇತ್ರ

(ಸಂಧ್ಯಾ ಚಿತ್ರ)

ಪುರಾಣಿಕರು ಪೌರಾಣಿಕ ಕಲ್ಪನೆಯನ್ನು ಕಾವ್ಯದಲ್ಲಿ ಮೂಡಿಸಿದ್ದಾರೆ. ಪ್ರಕೃತಿಯಲ್ಲಿ ಉಂಟಾಗುವ ಚಲನವಲನ, ಪಕ್ಷಿ ದ್ವನಿಗೈಯುತ್ತಾ ಸಾಗುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವರು. ಕಾಳಿದಾಸ ಮೇಘ ಸಂದೇಶವನ್ನು ಕಳಿಸುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಕಾವ್ಯಾನಂದರು ಮೋಡ ಮಳೆಯನ್ನು ಕಂಡ ರೀತಿ ಸುಂದರ ಕಲ್ಪನೆಯ ಪ್ರತಿಬಿಂಬಗಳಾಗಿವೆ.

ಹುಬ್ಬ ಹಾರಿಸುತಿಹುದು ಮಿಂಚಿನಲಿ ಮೋಡ
ಶೃಂಗಾರ ಚೇಷ್ಟೆಯದು ಯಾರ ಕೂಡ

–(ಮೋಡಕವನ)

ಮಹಾಪ್ರಾಣಗಳ ಬಾಹುಳ್ಯದಿಂದ ಕೂಡಿ ಗಡುಚಾದ ಭಾಷೆ ಹೊಂದಿ ಮಹಾಕಾವ್ಯ ವರ್ಣನೆಯಂತಿದೆ. ಶಬ್ದದ ಹಿಡಿತ, ಪ್ರತಿಭೆ ಎದ್ದು ಕಾಣುತ್ತಿವೆ. ಶಿವ ಪಾರ್ವತಿಯರ ಪೂಜೆಯಲ್ಲಿ ತಲ್ಲೀನವಾದಂತೆ ಕವಿ ಕಲ್ಪನೆಗೆ ಗೋಚರವಾಗಿದೆ, ಈ ಕೆಳಗಿನ ಕವನದಲ್ಲಿ.

ಗಜಚರ್ಮ, ಮೇಘ, ಭಸಿತಾಂಗ ಹಿಮವು, ಗಂಗೋತ್ತಮಾಂಗ ಶೃಂಗ:
ಈ ಬೆಟ್ಟ ರುದ್ರ, ಶ್ರೀನಗರ ಗೌರಿ, ರಮಣೀಯ ಉಭಯ ಸಂಗ,
ಮಳೆ ಉದಕ, ಅಲಿ ಸುಮ, ಮಿಂಚು ದೀಪ, ಶಿವಶಿವೆಯ ಪೂಜೆಗಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಸೌಂದರ್ಯ ಸ್ನಾನಮಾಗಿ

–(ಕಾಶ್ಮೀರದಲ್ಲಿ ಕಾರ್ಗಾಲ)

ಕರುಣಾಶ್ರಾವಣ ಸಂಕಲನದಲ್ಲಿ 'ಮಳೆ' ಬಗ್ಗೆ ಪುರಾಣಿಕರು ಕಂಡ ಕಲ್ಪನೆ ಅಮೋಘವಾಗಿದೆ.

"ಮೋಡಗಳ ಜಡೆಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಣೆಯ ಮೇಲೆ
ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ
ಇದಕೆ ಜನ ವೆನ್ನುವದು ಮಳೆಯಲೀಲೆ"

ದ.ರಾ.ಬೇಂದ್ರೆಯವರು ಗುಡ್ಡ ಗುಡ್ಡ ಸ್ಥಾವರಲಿಂಗ ಎಂದಂತೆ 'ಮಳೆಯ' ಚಿತ್ರವನ್ನು ಈ ಕವನದಲ್ಲಿ ಅದ್ಭುತವಾಗಿ ಕೊಟ್ಟಿದ್ದಾರೆ.

ಬಾನಿಂದ ಭೂಮಿಗೆ ಕರುಣಾಜಲ ಇಳಿದು ಬರುವುದು ಬಾನು ಭೂಮಿಗಳ ಮಧ್ಯ ಅವಿನಾಭಾವ ಸಂಬಂಧವಿರುವುದರ ಅರಿವನ್ನುಂಟುಮಾಡುತ್ತದೆ. ಗುರು, ಲಿಂಗ, ಜಂಗಮ, ನಿಸರ್ಗ ಮತ್ತು ಮಾನವ ಸಂಬಂಧ, ಕೋಗಿಲೆ ಕೂಗು ಮನ ಜುಮ್ಮೆನ್ನುವ ರೀತಿ ಎಲ್ಲವನ್ನು ಪ್ರಕೃತಿ ಗೀತೆಯಲ್ಲಿ ಹಿಡಿದಿಟ್ಟಿದ್ದಾರೆ. "ಪ್ರಕೃತಿಯೇ ಗುರು ಗಗನಲಿಂಗವು, ಜಗವೆ ಕೂಡಲ ಸಂಗಮ" ಇದು ಇವರ ಮಹತ್ವದ ಕವನವಾಗಿದೆ.

## ಪ್ರೇಮಗೀತೆ

ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆ ಜೀವ ಜಗತ್ತಿನ ಮೂಲಭೂತ ಹಾಗೂ ಪ್ರಮುಖ ಪ್ರವೃತ್ತಿಯಲ್ಲೊಂದು. ಪ್ರೀತಿ ಎನ್ನುವುದು ಅನುಭವ ಜನ್ಯ. ಜನಪದರಲ್ಲಿ ಶೃಂಗಾರ ಗೀತೆಗಳಿವೆ. ನವರಸದಲ್ಲಿ ಶೃಂಗಾರಕ್ಕೆ ಪ್ರಥಮಸ್ಥಾನ. ನವೋದಯ ಕವಿಗಳು ಪ್ರೇಮಕ್ಕೆ ಒಂದು ಸ್ಥಾನವನ್ನೆ ನೀಡಿರುವರು. ಪ್ರೇಮಗೀತೆಗೆ ಬಿಎಂಶ್ರೀ, ತೀನಂಶ್ರೀ, ಬೇಂದ್ರೆ, ಕುವೆಂಪು, ಕೆ.ಎಸ್.ಎನ್ ಅವರಂತೆ ಪುರಾಣಿಕರೂ ಹೆಸರಾಗಿದ್ದಾರೆ. ಪ್ರೇಮದಲ್ಲಿ ಆಧ್ಯಾತ್ಮದ ಅಂಶ ಕಾಣುವವು. ಜಲಪಾತ ಕವನ ಸಂಗ್ರಹದಲ್ಲಿ ಹದಿನೈದು ಪ್ರೇಮ ಗೀತೆಗಳಿವೆ. ಪ್ರೇಮದ ಹಲವು ಮುಖಗಳನ್ನು ಪರಿಚಯಿಸುತ್ತವೆ.

ನಿನ್ನ ಕಂಡಾಕ್ಷಣವೆ ಕೆರಳಿದವು ಆಸೆಗಳು
ನಿನ್ನ ಬಾಳೆಲ್ಲರಿಂ ಬೇರೆಯಾಯ್ತು
ನನ್ನ ಮನಸಿನ ರಾಜ್ಯವೆನ್ನ ಕನಸಿನಲೋಕ
ಹೃದಯ ಸಿಂಹಾಸನವು ನಿನ್ನದಾಯ್ತು.

ಎಂದು ತನ್ನ ಸರ್ವಸ್ವವನ್ನೇ ಅವಳಿಗೊಪ್ಪಿಸುತ್ತಾನೆ. ತಾನು ಮನಸೋತರಾಯಿತೆ. ಅವಳು ಒಪ್ಪಬೇಕಲ್ಲ. ಅವಳ ಮನಸ್ಸಿಗೂ ಮಹತ್ವ ನೀಡುವನು. ನಲ್ಲನನ್ನು ಹುಡುಕಿ ಹುಡುಕಿ ಮಿಡುಕಿ ಚಣಕ್ಕೊಮ್ಮೆ ಸಾಯುತ್ತಾಳೆ. ಗೆಳತಿಯ ಮಾತು ಕರಗಸದಂತಾಗಿ ನಲ್ಲ ಬರುವನೋ ಇಲ್ಲವೋ ಎಂಬ ಸಂಶಯ ಮೂಡುತ್ತದೆ ಅವಳ ಮನದಲ್ಲಿ.



ಬರದಿದ್ದರೇನಾಯ್ತು ಬರುವನೆಂಬುವ ಆಸೆ
ಉರಿವ ಜೀವಕೆ ಮಧುರ ಮಲಯಮಾರುತ ಬೀಸೆ
ಬರಿಯ ಬಾಳಲಿ ಮಧುವ ಸೋಮರಸವನು ಸೂಸೆ ಸಾಕಲ್ಲೆ?
ಇದನೊಂದೆ ನಂಬಿರಬೇಕಿಲ್ಲೆ
-(ಜಲಪಾತ)

ಗಂಡನಿಗೆ ಹೆಂಡತಿ ಎಲ್ಲವನ್ನೂ ಅರ್ಪಿಸುವಳು. ನೆನಪು ಕಹಿ-ಸಿಹಿ, ಸಂಸಾರದ ಭಾರ, ಗುಣರೂಪ, ಸಿರಿ ತಾರುಣ್ಯದಲ್ಲಿ ಎಲ್ಲವನ್ನೂ ಮರೆತಾಗ ಹೆಂಡತಿ ಕರ್ತವ್ಯ ನೆನಪಿಸುತ್ತಾಳೆ.

ಸಾಕೇಳು ನಲ್ಲ ಮರೆತು ಪ್ರೇಮದ ಸೊಲ್ಲ
ಗಂಡುತನಕಿದು ಹೊಲ್ಲ ಓ ನಲ್ಲ ಓ ನಲ್ಲ ನಲ್ಲ
(ಜಲಪಾತ)

ಎಂದು ಎಚ್ಚರಿಸುತ್ತಾಳೆ. ಕಾವ್ಯಾನಂದರ ಪ್ರಸಿದ್ಧ ಕವಿತೆ 'ತಾಜಮಹಲ್'. ಇದರಲ್ಲಿ ಸಂಕೇತ, ಪ್ರತಿಮೆ ಮುಂತಾದವು ಬಳಸಿದ್ದನ್ನು ನೋಡಬಹುದು.

ಶಿಲೆಯ ಹಾಲಿಗೆ ಕಲೆಯ ಹೆಪ್ಪು ಹಾಕಿ
ಕಡೆಯೆ ಕುಶಲತೆಯೆಂಬ ಕಡಗೋಲನಿಕ್ಕಿ
ಹರಿದುದಾಕಡೆ ತಕ್ರ ಯಮುನೆಯಾಗಿ
ಮೆರೆದುದೀ ಕಡೆ ಬೆಣ್ಣೆ ತಾಜಮಹಲಾಗಿ

ಕೇವಲ ಪ್ರೀತಿಯಿದ್ದರೆ ಸಾಲದು. ಅದು ನಿಜವಾಗಿರದಿದ್ದರೆ ಅರಮನೆ ಸೆರೆಮನೆ ಆಗುವದು. ಗುಡಿಸಲೇ ಪ್ರೇಮವಿದ್ದಾಗ ತಾಜಮಹಲಾಗುವುದು-

ಪ್ರೇಮವಿರೆ ಗುಡಿಸಲೇ ತಾಜಮಹಲಾಗುವುದು.
ಇಲ್ಲದಿರೆ ಅರಮನೆಯು ಸೆರೆಮನೆಗೆ ಸರಿಯು.

ಹೆಣ್ಣಿನ ನೋವು, ನಲಿವು, ವಿರಹ, ವಾಸ್ತವತೆ, ಹುಡುಗಿಯ ಅಲಂಕಾರ ಎಲ್ಲವನ್ನು ತುಂಬಾ ಸರಳವಾಗಿ ಅರ್ಥಗರ್ಭಿತವಾಗಿ ಚಿತ್ರಿಸಿದ್ದಾರೆ.

## ನಾಡು-ನುಡಿ ಕುರಿತ ಗೀತೆಗಳು

ನವೋದಯದ ಪ್ರತಿಯೊಬ್ಬ ಕವಿಯಲ್ಲಿಯೂ ರಾಷ್ಟ್ರೀಯತೆಯ ಪ್ರಜ್ಞೆ ಇದ್ದೇ ಇತ್ತು. ದೇಶಾಭಿಮಾನ ಕಾವ್ಯಕ್ಕೆ ಶಕ್ತಿ ಪ್ರೇರಣೆಯನ್ನೊದಗಿಸಿತು. ಕವಿತೆಯ ಮೂಲವಸ್ತು ಇದಾಗಿತ್ತು. ಅದರಲ್ಲೂ ಸಿದ್ಧಯ್ಯ ಪುರಾಣಿಕರ ಕಾವ್ಯದಲ್ಲಿ ನಾಡು, ನುಡಿ ದೇಶ ಪ್ರೇಮದ ಪದ್ಯಗಳು ಪ್ರಖ್ಯಾತಗೊಂಡಿದೆ. ಏಕೀಕರಣ ಸಂದರ್ಭದಲ್ಲಿ ರಚಿತವಾದ ಪುರಾಣಿಕರ ಕವನ "ಕನ್ನಡದ ದೀಪವದು ಕಾಣದಿಹುದು" ನಾಡಿನ ಬಗೆಗಿರುವ ಅಭಿಮಾನ, ನುಡಿಯ ಬಗೆಗಿರುವ ಪ್ರೀತಿಯನ್ನು ತೋರಿಸುತ್ತದೆ.

**ಕನ್ನಡ ಬತ್ತಿಯೊಳಗಿಡಿದ ಮಂಕನು ತೆಗೆಯ**
**ನನ್ನ ಕಾಯವು ಚಾಚು ಕಡ್ಡಿಯಾಗಿರಲಿ**
**ಭಾರತದ ದೀವಳಿಗೆಯಲ್ಲಿ ಶಿವಗನ್ನಡದ**
**ಜ್ಯೋತಿಯಿದು ತೇಜಸ್ಸನೊಡ್ಡಿಯಾಗಲಿ**

ಎಂಬ ಕವನದಲ್ಲಂತೂ ಅಭಿಮಾನ ಮತ್ತು ಆದರ್ಶಭಾವನೆಗಳು ಕೂಡಿಕೊಂಡಿವೆ. ಈ ಸಾಲುಗಳು ಉಜ್ವಲ ನಿದರ್ಶನಗಳು. ಏಕೀಕರಣವಾಗಬೇಕು, ಕನ್ನಡ ದೀಪ ಹಚ್ಚಬೇಕು ಎಂದು ೧೯೫೩ರಲ್ಲಿ ಬರೆದರು. ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದರೆ ಡಿ.ಎಸ್.ಕರ್ಕಿಯವರು "ಹಚ್ಚೇವು ಕನ್ನಡದ ದೀಪ" ಎಂದು ಹಾಡಿದ್ದರು.

**ಹೊತ್ತಿತೋ ಹೊತ್ತಿತು**
**ಕನ್ನಡದ ದೀಪ**
**ಮುಗಿಯಿತೊ ಮುಗಿಯಿತು**
**ಶತಮಾನಗಳ ಶಾಪ**

ಎಂದು ಹಾಡಿದವರು ಪುರಾಣಿಕರು. ರಾಜಕಾರಣಿಗಳು ಶೋಷಕರು ಜನರ ಶೋಷಣೆ ಮಾಡಿ ತಮ್ಮ ಬೇಳೆ ಬೇಯಿಸಿಕೊಂಡಿದ್ದಾರೆಂದು ಹೇಳುವುದಕ್ಕೆ ಕವಿಯ ಮನಸ್ಸು ಹಾತೊರೆದಿದೆ.

**ವೈರಿಗಳು ಹೊರಗಿಲ್ಲ, ಒಳಗಿಹರು, ಅಡಗಿಹರು,**
**ನಮ್ಮಲ್ಲೆ ಎಲ್ಲೆಲ್ಲೂ ಅವರೊಡನೆ ಯುದ್ಧ**
**ಬರಿ ಮೈಯ ಬರಿ ಹೊಟ್ಟೆ ಬರಿದಲೆಯು ಬರಿ ಮನೆಯ**
**ಬರ ನೆರೆಯ ರುಜೆಯೊಡನೆ ತುಮುಲಯುದ್ಧ**

ಯುದ್ಧ, ನೀತಿ, ಜಾತಿ, ಮತ, ಪಂಗಡ, ಧರ್ಮ, ವೇಷ, ದ್ವೇಷ, ಮೌಢ್ಯತೆ, ಅಂಧಕಾರ ಎಲ್ಲವನ್ನೂ ಕುರಿತು ತುಂಬಾ ಮಾರ್ಮಿಕವಾಗಿ ಪುರಾಣಿಕರು ತಮ್ಮ ಕಾವ್ಯದುದ್ದಕ್ಕೂ ಹೇಳುತ್ತಾರೆ.

## ಸಾಮಾಜಿಕ ಗೀತೆಗಳು

ಸಮಾಜದ ಪ್ರತಿಬಿಂಬವೇ ಸಾಹಿತ್ಯವಾದ್ದರಿಂದ ಕವಿ ಸಮಾಜದ ಪ್ರತಿಯೊಂದು ವಸ್ತು ವಿಷಯ ಕುರಿತು ಆಲೋಚಿಸುತ್ತಾನೆ. ತನಗೆ ಕಂಡ ಅನುಭವಗಳನ್ನು ಅಭಿವ್ಯಕ್ತಿಸಲು ಕಾವ್ಯಾನಂದರು ಸಹ ಸಮಾಜದಲ್ಲಿನ ಅನ್ಯಾಯ, ಅತ್ಯಾಚಾರಗಳನ್ನು ಕವನದ ಮೂಲಕ ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.



**ಆದರ್ಶವಾದಿಗಳ ಶಿಲುಬೆಗೇರಿಸಿ ಅವರ**
**ಕನಸುಗಳ ಕುಟ್ಟಿ ಸ್ವಾರ್ಥಿಗಳಿಗುಣಿಸಿ**
**ಜ್ಞಾನ ಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು**
**ನೀಚ ನರನಾಯಕರ ಮನವ ತಣಿಪೆ**

ಈ ಸಮಾಜದ ತುಂಬೆಲ್ಲ ಇಂಥವರೆ ತುಂಬಿರುವರೆಂದು ಇಲ್ಲಿ ಹೇಳಿದ್ದಾರೆ.

ಕಾಲಚಕ್ರ ನಿಲ್ಲುವದಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿದ್ದ ಕನಸುಗಳು ನನಸಾಗಲಿಲ್ಲ. ಆ ಕೊರಗು ಎಲ್ಲರಲ್ಲಿತ್ತು.. ಏನಾಗಬೇಕೆಂದು ಬಯಸಿದ್ದರೋ ಅದಾಗದಿದ್ದಾಗ ಈ ಕೆಳಗಿನ ಕವನ ಸೃಷ್ಟಿಗೊಳ್ಳುತ್ತದೆ.

**ಸ್ವಾತಂತ್ರ್ಯವೇನೋ ಬಂತು**
**ಸೌಜನ್ಯ ಮಾತ್ರ ಹೋಯ್ತು**
**ಬಿಡುಗಡೆಯು ಬಂತೋ ಇಲ್ಲೊ**
**ಹತ್ತುಗಡೆಯು ಹೊರಟು ಹೋಯ್ತು**
**ಗಣರಾಜ್ಯವೇನೋ ಬಂತು**
**ಗುಣರಾಜ್ಯ ಕರಗಿ ಹೋಯ್ತು**
**-ಜಮಾಖರ್ಚು**

ಗುಣಕ್ಕೆ ಮಹತ್ವ ಕೊಡದೆ ಬಾಹ್ಯ ಸೌಂದರ್ಯಕ್ಕೆ, ಬಣ್ಣಕ್ಕೆ, ವೇಷಕ್ಕೆ ಮಾರು ಹೋಗುವದು ಸರಿಯಲ್ಲವೆಂಬ ವಿಚಾರ "ಪೂರ್ವಾಂಗನೆ ಪಶ್ಚಿಮಾಂಗನೆ" ಕವನದಲ್ಲಿ ನೋಡಬಹುದಾಗಿದೆ.

**ನಾ ಕರಿಯಳೆಂದು ನೀ ಜರೆಯಬೇಡ**
**ಬಿಳಿ ಗೆಳತಿ ಗರ್ವದಿಂದ!**
**ಕಪ್ಪಿಗಿಂತ ಬಿಳ್ಬಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ!**

ಕಪ್ಪು ಮತ್ತು ಬಿಳಿ ಎರಡೂ ಹೇಗೆ ಅವಶ್ಯಕವೆಂಬುದನ್ನು ಕವನದುದ್ದಕ್ಕೂ ಸ್ಪಷ್ಟ ಪಡಿಸಿದ್ದಾರೆ. ಪುರಾಣಿಕರ ಇನ್ನೊಂದು ಮಹತ್ವದ ಪದ್ಯವನ್ನು ಇಲ್ಲಿ ಹೆಸರಿಸಲೇ ಬೇಕು.

**ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು**
**ಶೂದ್ರ ವೈಶ್ಯನೇ ಆಗು, ದುಡಿದು ಗಳಿಸಿ**
**ಏನಾದರೂ ಆಗು, ನಿನ್ನೊಲವಿನಂತಾಗು**
**ಏನಾದರೂ ಸರಿಯೆ ಮೊದಲು ಮಾನವನಾಗು.**

ನೀನು ರಾಜಕಾರಣಿಯಾದರೂ ಆಗು ರಾಷ್ಟ್ರಭಕ್ತ, ವಿಜ್ಞಾನಿ, ವ್ಯಾಪಾರಿ, ಏನಾದರೂ ಸರಿಯೇ ಮೊದಲು ಮನವನಾಗು ಎಂದು ಹೇಳುವಲ್ಲಿ ಕವಿಯ ಮನೋಭಾವ ವನ್ನರಿಯ ಬಹುದಾಗಿದೆ. ಸಿದ್ಧಯ್ಯ ಪುರಾಣಿಕರು ಕವಿ ಹೃದಯದವರಾಗಿದ್ದರಿಂದ ಜಗತ್ತಿನ ನಾಳೆಯ ಬಗ್ಗೆ ಕನಸನ್ನು ಕಂಡಿದ್ದಾರೆ.

"ಬರಲಿ ಬಡವರ ಯುಗವು
ಬರಲಿ ದುಡಿವಗೆ ಸೊಗವು
ಮುರಿದು ಬೀಳಲಿ ಅವರ ಹೆಗಲ ನೊಗವು
ಕರಕಾಗಿ ಹೋಗಲಿ ಮೇಲು ಕೀಳುಗಳೆಲ್ಲ
ಹರಡಲಿ ಸಮಾನತೆಯು ಮರುಳಸಿದ್ಧ

ಸಿದ್ಧಯ್ಯನವರ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆ ಜೀವನೋತ್ಸಾಹ, ಸಮಕಾಲೀನ ಆಗು ಹೋಗುಗಳ ಬಗ್ಗೆ ಸ್ಪಂದಿಸುವ ಅವರ ಮನೋಭಾವವನ್ನು ಅವರ ಹಲವಾರು ಕವನಗಳಲ್ಲಿ ನೋಡಬಹುದಾಗಿದೆ.

## ತಾತ್ವಿಕ ಗೀತೆಗಳು

ಒಂದು ಕಾವ್ಯ ಹುಟ್ಟಬೇಕಾದರೆ ಅದಕ್ಕೆ ತಾತ್ವಿಕ ಹಿನ್ನೆಲೆ ಇರುತ್ತದೆ. ಕವಿತೆಯ ಹೊರಮೈ ಶಬ್ದಗಳಾದರೆ ಒಳಮೈ ತತ್ತ್ವವಾಗಿರುವದು. ಕವಿಗೊಂದು ಮೂಲ ಉದ್ದೇಶ ಇರುತ್ತದೆ. ಅದನ್ನು ಅಭಿವ್ಯಕ್ತಿಸುತ್ತಾನೆ.

ಮನುಷ್ಯನಿಗೆ ಪುಷ್ಪ ಪ್ರಶ್ನಿಸುತ್ತದೆ. ಮೂಳೆಯನ್ನುಳ್ಳ ಮಾನವ ಮುಳ್ಳಿಗೆ, ಕಲ್ಲಿಗೆ, ಮಣ್ಣಿಗೆ, ಹೆದರುವ, ಆದರೆ ನಾನು ಮುಳ್ಳಲ್ಲಿ ಉದಯಿಸುವೆ. ಕಲ್ಲು ಮಣ್ಣಲ್ಲಿ ಅರಳುವೆ. ನೀನು ಭದ್ರ ಭವನದಲ್ಲಿದ್ದು ಭಯಪಡುವೆ. ನಾನು ಬಯಲು, ಬಿಸಿಲು, ಮಳೆಗೆ ಅಂಜದೇ ಇರುವೆ. ನೂರು ವರ್ಷ ನೀನು ಬದುಕುವೆ. ಆದರೂ ನಿನಗೆ ಮರಣದ ಭಯ. ಆದರೆ ನನಗೆ ಮಾತ್ರ ಯಾವ ಭಯವೂ ಇಲ್ಲ ಎಂದು ಹೇಳುತ್ತದೆ.

"ನೂರು ವರುಷವ ಪಡೆದು ಮರಣ ಭಯವೇ ಮನುಜ?
ಕೆಲ ನಿಮಿಷ ಪಡೆದರೂ ಪರಿತಪಿಸೆ ನಾನು"

ಎಂದು ಪುಷ್ಪ ಮಾನವನನ್ನು ಪ್ರಶ್ನಿಸುತ್ತದೆ. ಹೂವು ಕ್ಷಣಕಾಲ ಬಾಳಿದರೂ ಅದರಲ್ಲಿರುವ ಶಾಂತಿ ಸಮಾಧಾನ ಮಾನವನಲ್ಲಿಲ್ಲವೆಂದು ಕವಿ ನಿರೂಪಿಸುತ್ತಾರೆ.

ಡಾ.ಸಿದ್ಧಯ್ಯ ಪುರಾಣಿಕರ ಕಾವ್ಯ ವೈವಿಧ್ಯಮಯವಾದ ವಸ್ತುವನ್ನು ಹೊಂದಿದ್ದು ಅವರು ಅನುಭವದ ಅಭಿವ್ಯಕ್ತಿಯನ್ನು ಹೊರಹೊಮ್ಮಿಸಿದ್ದಾರೆ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರತಿಯೊಂದು ಕಾಲ ಘಟ್ಟದಲ್ಲಿ ಬರೆದರೂ ವಸ್ತು ವೈವಿಧ್ಯ ಗುರುತಿಸಲು ಸಾಧ್ಯ. ಎಲ್ಲಾ ಬಗೆಯ ಕವನಗಳು ಅವರಿಂದ ಹೊರಬಂದಿವೆ. ಸಾಮಾಜಿಕ ಸಮಸ್ಯೆ, ಪ್ರಕೃತಿ, ನಾಡು ನುಡಿ, ಮತ್ತು ವಾಸ್ತವಿಕತೆಯ ಹತ್ತಿರದಲ್ಲಿ ನಿಂತು ಕವಿತೆ ಮಾತನಾಡುತ್ತವೆ. ಹೀಗಾಗಿ ಪ್ರಸ್ತುತ ಸಂದರ್ಭದಲ್ಲಿ ಇವರ ಕಾವ್ಯ ಅತ್ಯಂತ ಮಹತ್ವದ್ದಾಗಿದೆ.



## ವಚನಗಳು

ಜನ ಸಾಮಾನ್ಯರಿಗಾಗಿ, ಆಡುಮಾತಿನಲ್ಲಿ ವಚನ ರಚನೆಗೊಂಡದ್ದು ಬಸವಾದಿ ಶರಣರಿಂದ. ೧೨ನೆಯ ಶತಮಾನದಲ್ಲಿ ಸಾಮೂಹಿಕ ಕ್ರಾಂತಿ, ನಡೆದು ವರ್ಣ, ವರ್ಗ, ಲಿಂಗ, ಸಮಾನತೆಯನ್ನು ತರಬಯಸಿದವರು ಶರಣರು, ಅನುಭವದ ಅಭಿವ್ಯಕ್ತಿಯಾಗಿ ವಚನ ರಚನೆಗೊಂಡವು.

ಚಂಪೂವಿನಲ್ಲಿರುವ ಗದ್ಯವನ್ನು "ವಚನ" ಎಂದರು. ವಚನ ಎಂದರೆ ಮಾತು, ಭಾಷೆ ಕೊಡು ಎಂದರ್ಥ. ವಚನಕಾರರು ಮಾತು, ನುಡಿ, ಸೂಳ್ನುಡಿ, ವಚನಕೊಡು ಎಂಬರ್ಥದಲ್ಲಿ ಬಳಸಿದ್ದಾರೆ. ವಚನ ಸಾಹಿತ್ಯವನ್ನು ಬಸವ ಪೂರ್ವಯುಗ (೧೧ನೆಯ ಶತಮಾನ), ಬಸವ ಯುಗ (೧೨ನೆಯ ಶತಮಾನ), ವಿರಕ್ತಯುಗ (೧೫-೧೬ನೇ ಶತಮಾನ), ಆಧುನಿಕ ಯುಗ (೨೦ನೆಯ ಶತಮಾನ) ಎಂದು ನಾಲ್ಕು ಘಟ್ಟಗಳನ್ನಾಗಿ ನೋಡಬಹುದು.

## ಆಧುನಿಕ ವಚನಕಾರರು

ಹೊಸಗನ್ನಡ ಸಾಹಿತ್ಯದಲ್ಲಿ 'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ಹುಟ್ಟಿಕೊಂಡಿದೆ. ಅದರಲ್ಲೂ ಹರ್ಡೇಕರ ಮಂಜಪ್ಪ ಮತ್ತು ಸಿದ್ಧಯ್ಯ ಪುರಾಣಿಕರು ಆಧುನಿಕ ವಚನ ರಚನೆಯಲ್ಲಿ ಅತಿಮುಖ್ಯರಾಗಿದ್ದಾರೆ. ಇವರೊಂದಿಗೆ ಎಸ್.ವಿ.ರಂಗಣ್ಣ, ಜಚನಿ, ಎಸ್.ವಿ.ಪರಮೇಶ್ವರಭಟ್ಟ, ಸಂಗಮೇಶ ಹೊಸಮನಿ, ಮಹಾದೇವ ಬಣಕಾರ, ಜೀರಿಗೆ ಕಟ್ಟೆ ಬಸಪ್ಪ, ಸಿ.ಪಿ.ಕೆ.ದಿವಾಕರ, ದೊಡ್ಡನಗೌಡ, ಜತ್ತಿ, ಕುಮಾರ ಕಕ್ಕಯ್ಯ ಪೋಳ, ಕಮಲಾ ಹಂಪನಾ, ಜಯದೇವಿ ತಾಯಿ ಲಿಗಾಡೆ, ಮೂಜಗಂ, ಅನ್ನದಾನಿ ಸ್ವಾಮಿಗಳು, ಡಾ. ಶರಣಬಸಪ್ಪ ಅಪ್ಪ, ನಾಚೆ ಮುಂತಾದವರು ಆಧುನಿಕ ವಚನ ಸಾಹಿತ್ಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಇತ್ತೀಚೆಗಂತೂ ಆಧುನಿಕ ವಚನ ಹೊಸಗನ್ನಡ ಸಾಹಿತ್ಯ ಪ್ರಕಾರವಾಗಿ ಬೆಳೆದು ಕೊಂಡುಬಂದಿದೆ.

ಡಾ.ಸಿದ್ಧಯ್ಯ ಪುರಾಣಿಕರು ಇದುವರೆಗೆ ವಚನೋದ್ಯಾನ, ವಚನ ನಂದನ, ವಚನಾರಾಮಗಳೆಂಬ ಮೂರು ವಚನ ಸಂಕಲನಗಳನ್ನು ಪ್ರಕಟಿಸಿರುವರು. ಒಟ್ಟು ೧೫೦೦ ವಚನಗಳಿರುವುದು ವೈಶಿಷ್ಟ್ಯವಾಗಿದೆ.

ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಆಧ್ಯಾತ್ಮ ವಿಷಯಗಳಿಂದ ಹಿಡಿದು ರಾಜಕೀಯ ಸಾಮಾಜಿಕ ವೈಜ್ಞಾನಿಕ ತಾತ್ವಿಕ ಹೀಗೆ ಅನೇಕ ವಿಷಯಗಳು ಎಡೆಪಡೆದಿವೆ. ಷಟ್‌ಸ್ಥಲದ ವಿಷಯಗಳಲ್ಲ. ಇವು ಸಪ್ತ ಮುಖದ ವಚನಗಳಾಗಿವೆ. ವಚನಗಳಲ್ಲಿ ಮಾನವ ಧರ್ಮ,

ಮಾನವೀಯತೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ತಮ್ಮ ಅಧಿಕಾರಾವಧಿಯಲ್ಲಿ ಪಡೆದ ಅನುಭವವನ್ನೇ ಬಿಂಬಿಸಿದ್ದಾರೆ.

ದೇವರಲ್ಲಿ ನಂಬಿಕೆ, ಜೀವಜಗತ್ತು, ಜೀವೋತ್ಪತ್ತಿಯ ರಹಸ್ಯ, ಶರಣರು ಶಬ್ದದೊಳಗಣ ನಿಶ್ಯಬ್ದದಂತೆ, ಎಂದರೆ ಪುರಾಣಿಕರು ಇನ್ನೊಂದು ಹಂತದಲ್ಲಿ ಅದರ ಸುಪ್ತ ಮತ್ತು ಅತೀತ ಅಸ್ತಿತ್ವವನ್ನು ಕಂಡುಕೊಳ್ಳಲು ಹವಣಿಸಿದ್ದಾರೆ.

**ಶಬ್ದಹುಟ್ಟದ ಮುನ್ನಿನ ಅರ್ಥದಂತೆ**
**ವಾದ್ಯ ಹುಟ್ಟದ ಮುನ್ನಿನ ನಾದದಂತೆ**
**ಕುಂಚ ಹುಟ್ಟದ ಮುನ್ನಿನ ಚಿತ್ರದಂತೆ**
**ಉಳಿ ಹುಟ್ಟದ ಮುನ್ನಿನ ಶಿಲ್ಪದಂತೆ**
**ದೇಹ ಹುಟ್ಟದ ಮುನ್ನಿನ ಪ್ರಾಣದಂತೆ ಇದ್ದೆನಯ್ಯಾ**

ಎಂದಿದ್ದಾರೆ. ದೇವನೊಬ್ಬ ನಾಮ ಹಲವು, ಜಾತಿ ತಾರತಮ್ಯ, ಮನುಜನ ರೂಪ, ಇಷ್ಟದೈವದ ಸಂಬಂಧ, ಬಾಳು ಹಸನಾಗಲು ಶುದ್ಧ ಚಾರಿತ್ರ್ಯವಿರಬೇಕು. ಅಹಂ ಕಳೆದು ಶುಭ್ರವಾಗಿರಬೇಕು. ಇವು ವಚನದ ವಸ್ತುಗಳಾಗಿವೆ.

**“ನನ್ನಲ್ಲಿರುವ ನಿನ್ನನ್ನು**
**ಕೆಳಗೊತ್ತಿಹನು ನಾನೆಂಬ ಅಸುರ**
**ಅವನನ್ನು ಕೆಳಗೊತ್ತಿ ಮೆಟ್ಟಿ**
**ನೀನು ನಾನಾಗಯ್ಯ**
**ಸ್ವತಂತ್ರ ಧೀರ ಸಿದ್ಧೇಶ್ವರಾ”**

ದೇಶ, ಸಮಾಜ ಕುರಿತು ಅವರ ಆಲೋಚನೆ ಮುಖ್ಯವಾಗಿತ್ತು. ಇಲ್ಲಿ ಪುರಾಣಿಕರು ಆರ್ಥಿಕ ಅಸಮಾನತೆ ಕುರಿತು

**ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು**
**ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ ಬಳಿದು**
**ತಂದ ಎಂಜಲವೇ ಪರಮ ಪ್ರಸಾದ**
**ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳಲ್ಲಿ**

ಹಲವರಿಗೆ ಹಸಿವೆ ಹಿಂಗಿಸಲು ತುತ್ತು ಕೂಳಿಲ್ಲ. ಆದರೆ ಕೆಲವರು ತಿಂದು ಅಜೀರ್ಣತೆಗೆ ತುತ್ತಾಗಿದ್ದಾರೆ. ಬಡತನ ಮತ್ತು ಶ್ರೀಮಂತಿಕೆಯ ಚಿತ್ರಣ ನೀಡುತ್ತಾರೆ. ಭಾರತ ಸ್ವತಂತ್ರ ಆದ ಮೇಲೆ ಜಾತಿಗಳೆಲ್ಲ ಒಂದಾಗಬೇಕೆಂಬುದು ಎಲ್ಲಾ ಮಹಾತ್ಮರ ಸಿದ್ಧಾಂತ. ರಾಷ್ಟ್ರಭಕ್ತಿಯನ್ನು ಜಾತಿಯಿಂದ ಒಡೆದು ಆಳುತ್ತಿದ್ದೇವೆ ಎಂದು ನೋವಿನಿಂದ ಹೇಳುತ್ತಾರೆ.

**ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ**
**ಈ ಸುಂದರ ಸುಮನೋಹರ ವನವನ್ನು**
**ಜಾತಿ ಉಪಜಾತಿ ಉಪಉಪಜಾತಿಗಳ**
**ಕೋತಿಗಳಿಗಾಗಿ ಹುಟ್ಟಿಸಿಹೆಯೇನಯ್ಯಾ**



ಎಂದು ಜಾತಿಜಾಲದಲ್ಲಿ ಸಿಕ್ಕು ನರಳುತ್ತಿರುವ ದೇಶ, ದಲಿತರ ಚಿತ್ರಣ, ಪಾಕಿಸ್ತಾನ ಇಬ್ಭಾಗ ಎಲ್ಲವೂ ಇದರಲ್ಲಿ ಹರಳು ಗಟ್ಟಿ ನಿಂತಿವೆ.

**ಜಗತ್ತಿನಲ್ಲಿ ಜಾತಿಗಳು ಸಾವಿರ ಸಾವಿರ ಇವೆಯಂತೆ**
**ನನ್ನ ದೇಶದಲ್ಲಿಯೇ ಸುಮಾರು ಮೂರು ಸಾವಿರ ಇವೆಯಂತೆ**
**ಆರೈದು ನೋಡಿದರೆ ಎರಡೆ ಜಾತಿಗಳಯ್ಯ ಜಗದಲ್ಲಿ**

ಎಂದು ಹೇಳಿ ಹೆಣ್ಣು-ಗಂಡು, ಬಿಳಿಯ-ಕರಿಯ, ಒಳ್ಳೆಯವ-ಕೆಟ್ಟವ, ಆಸ್ತಿಕ-ನಾಸ್ತಿಕ, ಪೌರ್ವಾತ್ಯರು-ಪಾಶ್ಚಿಮಾತ್ಯರು, ಮುಸ್ಲಿಂ-ಕಾಫರ, ಸ್ಪರ್ಶ-ಅಸ್ಪೃಶ್ಯ, ಕುಲಜ-ಕುಲಹೀನ, ಭವಿ-ಭಕ್ತ ಎಂಬ ಎರಡೇ ಜಾತಿಗಳಿವೆಯೆನ್ನುತ್ತಾರೆ. ಮತಗಳಲ್ಲಿ ಮನುಜಮತವೇ ಹಿರಿದು ಎಂದು ಹೇಳುತ್ತಾರೆ. ಎಲ್ಲರನ್ನೂ ನನ್ನವರಂತೆ ಪ್ರೀತಿಸುವ ಮನೋಧರ್ಮ ಬೆಳೆಸಿಕೊಳ್ಳಬೇಕು.

ನಮ್ಮ ಸಮಾಜದಲ್ಲಿ ಹಲವಾರು ರೀತಿಯಿಂದ ಶೋಷಣೆ ಕಾಣಬಹುದು, ಆರ್ಥಿಕ, ರಾಜಕೀಯ, ಸಾಮಾಜಿಕ, ನೈತಿಕವಾಗಿ, ಆದರೆ ಇವುಗಳಿಗೆ ಮೂಲ ಕಾರಣ ಅನಕ್ಷರತೆ, ಬಡತನ, ಮೂಢನಂಬಿಕೆ, ಅಜ್ಞಾನ. ಪ್ರಜಾಪ್ರಭುತ್ವ ಬಂದರೂ ಶೋಷಣೆ ತಪ್ಪಿಲ್ಲ. ಹೆಂಡ, ಹೆಣ್ಣು, ಖರ್ಚಿ, ಅಧಿಕಾರಕ್ಕಾಗಿ ರೈತರನ್ನು ಸರ್ಕಾರವೇ ತುಳಿಯುತ್ತಿದೆ.

**ಸರಕಾರ ದರೋಡೆಕಾರನಾದಾಗ**
**ನೌಕರರು ನರಭಕ್ಷಕರಾಗದಿರುವರೇನಯ್ಯ?**
**ಸಚಿವರೇ ಸುಲಿಗೆಗಾರರಾದಾಗ**
**ಆಪ್ತ ಸಹಾಯಕರು ಪಸಾಯಿತರಾಗರೇನಯ್ಯ**

ಪುರೋಹಿತರು, ಪೂಜಾರಿ, ವ್ಯಾಪಾರಿ ಮಾಲೀಕರು, ಸರಕಾರ, ಕಾರ್ಖಾನೆ ಮಾಲೀಕರು, ವಿದ್ಯಾವಂತರು ಬಡವರ ರಕ್ತಹೀರುವ ತಿಗಣಿಗಳಾಗಿದ್ದಾರೆ. ಲಂಚ, ಭ್ರಷ್ಟಾಚಾರ, ಅತ್ಯಾಚಾರ ಮುಂತಾದವು ತುಂಬಿವೆಯೆಂಬುದನ್ನು ಇವರ ವಚನದಲ್ಲಿ ಕಾಣುವೆವು.

ರಾಜಕೀಯ ವಿಡಂಬನೆ, ಲೋಕಾನುಭವ, ಕನ್ನಡ ನಾಡು ನುಡಿಯ ಬಗ್ಗೆ, ಶಿಕ್ಷಣ, ವಿಜ್ಞಾನ, ಜಾನಪದ ಮಾನವೀಯ ಮೌಲ್ಯ, ಮಾನವ ಸ್ವಭಾವ ಕುರಿತು ಪುರಾಣಿಕರ ವಚನಗಳು ಮಾರ್ಗದರ್ಶಿಯಾಗಿವೆ. ವಸ್ತು, ಆಶಯ, ರಚನಾ ವಿನ್ಯಾಸ, ತಂತ್ರಗಳಿಂದ ಸರಳವಾದ ಶುದ್ಧವಾದ ವಚನಗಳ ಮೂಲಕ ಪುರಾಣಿಕರು ನಮ್ಮ ಗಮನ ಸೆಳೆಯುತ್ತಾರೆ.

ಕಾವ್ಯಾನಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದಂತೆ ಪುರಾಣಿಕರು ವಚನಗಳನ್ನು ರಚಿಸುವಾಗ 'ಸ್ವತಂತ್ರ ಧೀರ ಸಿದ್ದೇಶ್ವರ' ಎಂಬ ಅಂಕಿತ ಬಳಸಿಕೊಂಡು ರಚಿಸಿದ್ದಾರೆ. ಇವರಿಗೆ ದಟ್ಟವಾದ ಜೀವನಾನುಭವ ಅಧಿಕಾರಿಯಾಗಿ ಕಂಡ ಅನುಭವ ಹಾಗೂ ಶರಣರ ವಚನಗಳ ಪ್ರಭಾವ ಎಲ್ಲವೂ ಮುಪ್ಪುರಿಗೊಂಡು ಒಡಮೂಡಿದ ವಚನಗಳಾಗಿವೆ.

## ನಾಟಕಗಳು

ಡಾ.ಸಿದ್ಧಯ್ಯ ಪುರಾಣಿಕ ಅವರು ರಚಿಸಿದ ನಾಟಕಗಳು 'ನಾಲ್ಕು' ವಿದ್ಯಾರ್ಥಿಯಾಗಿದ್ದಾನಿಂದಲೇ ನಾಟಕ ಬರೆಯುವ, ಪ್ರಯೋಗಿಸುವ, ನಟಿಸುವ, ನಿರ್ದೇಶಿಸುವ, ಕೆಲಸದಲ್ಲಿ ತೊಡಗಿ ಬಾಲ್ಯದಲ್ಲಿಯೇ ಸ್ತ್ರೀ, ಬೆಳವಡಿ ಮಲ್ಲಮ್ಮ, ಸಮರತಿ, ಆತ್ಮಾರ್ಪಣ ನಾಟಕಗಳನ್ನು ಬರೆದು ಹೈದ್ರಾಬಾದ್, ಕಲಬುರ್ಗಿಗಳಲ್ಲಿ ಆಡಿಸಿ ಪ್ರಕಟಿಸಿದರು. 'ಭಾರತ ವೀರ' ಎಂಬ ನಾಟಕವನ್ನು ೧೯೬೨ರಲ್ಲಿ ಭಾರತ ಮತ್ತು ಚೀನಾ ದೇಶಗಳ ಮಧ್ಯ ನಡೆದ ಯುದ್ಧದ ಪ್ರಭಾವದಿಂದ ಪ್ರೇರಿತರಾಗಿ ಜನ ಜಾಗೃತಿಗಾಗಿ ರಚಿಸಿದರು. ರೇಡಿಯೋಗಳಿಗಾಗಿ ಆಗಾಗ ರೂಪಕ ಬರೆದು ಅವುಗಳನ್ನೆಲ್ಲ ಒಂದೆಡೆ ಸೇರಿಸಿ 'ರಜತರೇಖೆ' ಎಂಬ ಪುಸ್ತಕ ಪ್ರಕಟಿಸಿದರು. ೧೯೭೮ರಲ್ಲಿ 'ಭಗ್ನ ನೂಪುರ' ಎಂಬ ಮೂರು ನಾಟಕಗಳನ್ನೊಳಗೊಂಡ ಸಂಗ್ರಹವೂ ಪ್ರಕಟವಾಯಿತು.

ಇವೆಲ್ಲ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಒಂದಿಲ್ಲೊಂದು ರೀತಿಯಿಂದ ಇವು ಮಹತ್ವದ ಕೃತಿಗಳಾಗಿವೆ. ಸಾಹಿತ್ಯದ ದೃಷ್ಟಿಯಿಂದ ಗಮನಿಸಿದರೆ ವೈಚಾರಿಕ ನಿಲುವು, ಹಲವು ನಾಟಕಗಳಲ್ಲಿ ಅಳವಡಿಸಿ ಮೇಲು ಕೀಳು, ಧಾರ್ಮಿಕ-ಸಾಹಿತ್ಯಿಕ ಕ್ರಾಂತಿ ಆದದ್ದು ಎಲ್ಲವನ್ನು ಒಳಗೊಂಡಂತೆ ನಾಟಕ ರಚಿಸಿದ್ದಾರೆ.

ನಾಟಕಕ್ಕೆ ಬೇಕಾದ ವಸ್ತು, ಪಾತ್ರ, ತಂತ್ರ, ಸಂಭಾಷಣೆಗಳನ್ನು ಕಟ್ಟಿಕೊಡುವಾಗ ಎಲ್ಲೂ ಭಾವಪರವಶರಾಗದೇ ಅತಿ ಸರಳವಾಗಿ, ಸುಂದರವಾಗಿ ಚಿತ್ರಿಸುತ್ತಾರೆ. ದೃಶ್ಯ ಅಂಕಗಳನ್ನು ರಚಿಸಿದಾಗ ಸಾರ್ವಕಾಲಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ. ನಾಟಕದ ಸೂಕ್ಷ್ಮ ಪರಿಚಯದೊಂದಿಗೆ ದಿನನಿತ್ಯದ ಚತುರ ಹಾಸ್ಯ, ವಿಡಂಬನೆ, ನಾಟಕೀಯತೆ ಎಲ್ಲವೂ ಇದರಲ್ಲಿ ಅಡಕಗೊಂಡಿವೆ.

**ಆತ್ಮಾರ್ಪಣ :** ಬಸವಣ್ಣನವರ ಜೀವನಚರಿತ್ರೆಯನ್ನು ವಸ್ತುವನ್ನಾಗಿಟ್ಟುಕೊಂಡು ಅನೇಕರು ನಾಟಕಗಳನ್ನು ಬರೆದಿದ್ದಾರೆ. ಅದರಲ್ಲಿ ಪುರಾಣಿಕರೂ ಒಬ್ಬರು ಇವರು ವಚನಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದರಿಂದ ಇದೊಂದು ಸರಸ ಸಂಗೀತ ಸಮನ್ವಯಾತ್ಮಕ ನಾಟಕವೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.

**ಭಾರತವೀರ :** ಸಮಕಾಲೀನ ಪ್ರಜ್ಞೆಯುಳ್ಳ ಐತಿಹಾಸಿಕ ನಾಟಕ. ೧೯೬೩ರಲ್ಲಿ ಭಾರತ ಚೀನಾ ಮಧ್ಯ ನಡೆದ ಯುದ್ಧವೇ ಪ್ರೇರಣೆ. ಸಮಸ್ತ ಭಾರತದ ಪ್ರತಿನಿಧಿಯಾಗಿದ್ದ ಅರಸನನ್ನು ನಾಯಕನನ್ನಾಗಿಸುತ್ತಾರೆ. ಈ ನಾಟಕದಿಂದಾಗಿ ಜನಜಾಗೃತಿ ದೇಶಪ್ರೇಮ ಮೂಡುತ್ತದೆ. ರಾಷ್ಟ್ರದ ರಕ್ಷಣೆಗಾಗಿ ಸಾಮಾನ್ಯ ಜನರು ರೈತರು, ಕೂಲಿಕಾರರು ವ್ಯಾಪಾರಿಗಳು ತಮ್ಮ ಕೈಲಾದ ಸಹಾಯ ಸಲ್ಲಿಸುವುದನ್ನು ನೋಡಬಹುದು.

**ರಜತರೇಖೆ :** ಆಕಾಶವಾಣಿಗಾಗಿ ಬರೆದ ಎಂಟು ರೂಪಕಗಳ ಸಂಗ್ರಹವಿದಾಗಿದೆ. ಮಹಾಕಾವ್ಯಗಳಿಂದಾಧರಿಸಿ ಬರೆದ ಗೀತರೂಪಕಗಳು ನಾಲ್ಕಾದರೆ, ನಾಲ್ಕು ಸ್ವತಂತ್ರ



ಕೃತಿಗಳು. ಆಕಾಶವಾಣಿಯಲ್ಲಿ ಪ್ರಶಸ್ತಿ ಪಡೆದ ಮೊದಲ ರೂಪಕವಾದ ಗಿರಿಜಾ ಕಲ್ಯಾಣ ಇದೇ ಸಂಕಲನದಲ್ಲಿದೆ. ಎಲ್ಲ ರೂಪಕಗಳೂ ಅತ್ಯುತ್ತಮವಾಗಿವೆ.

**ಭಗ್ನನೂಪುರ :** ಮೂರು ಮಹಿಳೆಯರನ್ನು ಕುರಿತು ಬರೆದ ಮೂರು ನಾಟಕಗಳಿಲ್ಲಿವೆ. ಕನ್ನಗಿ, ಹಬ್ಬಾಖಾತೂನ, ಅಕ್ಕಮಹಾದೇವಿ ಮೂವರ ಕಾಲ ದೇಶ ಭಾಷೆ ಬೇರೆಯಾದರೂ ಮಹಿಳೆಯಾಗಿ ಎಂಥ ಸಮಸ್ಯೆಗಳನ್ನು ಎದುರಿಸಿದ್ದಾರೆಂಬುದನ್ನು ನೋಡಬಹುದಾಗಿದೆ. ನಾಟಕಗಳು ವಸ್ತು ಭಾಷೆ ತಂತ್ರದಿಂದಾಗಿ ಗಮನ ಸೆಳೆಯುತ್ತವೆ.

## ಕಥೆಗಳು

ಸಣ್ಣಕತೆ ಹೊಸಗನ್ನಡ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲೊಂದು. ಇವರು ಅರವತ್ತರ ದಶಕದಲ್ಲಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಪ್ರಗತಿಶೀಲ ಹಾಗೂ ನವ್ಯಪಂಥಗಳ ಸಂದರ್ಭದಲ್ಲಿ ಕತೆಗಳನ್ನು ಬರೆದರು.

**ಕಥಾಮಂಜರಿ :** ಡಾ.ಪುರಾಣಿಕರ ಮೊದಲ ಕಥಾಸಂಕಲನವಾದ 'ಕಥಾ ಮಂಜರಿ'ಯಲ್ಲಿ ವಿವಿಧ ಭಾಷೆಯ ಅನುವಾದಿತ ಕತೆಗಳಿವೆ. ಅನುವಾದ ಕಾರ್ಯ ಸುಲಭವಾದುದಲ್ಲ. ಅತ್ಯಂತ ಸಮರ್ಥವಾದ ರೀತಿಯಲ್ಲಿ ಅನುವಾದಕ್ಕಿಂತ ನೈಜ ಯೆಂಬಂತೆ ಚಿತ್ರಿಸಿದ್ದಾರೆ. ಒಂದೊಂದು ಕತೆಯೂ ತಮ್ಮದೇ ಆದ ಆಶಯದಿಂದಾಗಿ ಗಮನ ಸೆಳೆಯುತ್ತವೆ. ನಗರೀಕರಣ ಬೆಳೆದಂತೆ ಎಲ್ಲಾ ಬಗೆಯ ಉದ್ಯೋಗಾವಕಾಶಗಳು ಬೆಳೆದು ಜೀವನ ನಿರ್ವಹಣೆಗಾಗಿ ನೌಕರ ತನ್ನ ಹುಟ್ಟೂರು, ಬಂಧು ಬಳಗವನ್ನು ಬಿಟ್ಟು ಜೀವಿಸಬೇಕಾದುದು ಅನಿವಾರ್ಯವಾಗಿದೆ. ತಂದೆ ತಾಯಿ ಕತೆಯಲ್ಲಿ ಮಾನಸಿಕ ತುಮುಲವನ್ನು ಕಾಣಬಹುದು. ಪೋಸ್ಟ್‌ಮಾಸ್ತರನಿಗೆ ಅನಾಥ ಹುಡುಗಿ ರತ್ನಾಳ ನಡುವೆ ಬೆಳೆದ ಆತ್ಮೀಯ ಮಾನವೀಯ ಸಂಬಂಧ ಪ್ರೀತಿ, ಅಗಲುವಿಕೆ ವ್ಯಕ್ತವಾಗಿದೆ.

ನಗರ ಜೀವನ ಕಟ್ಟಿಕೊಡುವ 'ಮಣಿಮಾಲೆ' ಕತೆ ಸೊಗಸಾಗಿ ಮೂಡಿಬಂದಿದೆ. ಒಟ್ಟಾರೆ ಈ ಕಥಾಸಂಕಲನದಲ್ಲಿ ಜೀವನ, ಪ್ರೀತಿ, ಸಂಬಂಧ, ಮಾನಸಿಕ ತುಮಲ ನಿಸರ್ಗ, ಸೌಂದರ್ಯವನ್ನು ಕುರಿತ ಕತೆಗಳಿವೆ.

**ತುಷಾರ ಹಾರ :** ಎರಡನೆಯ ಕಥಾ ಸಂಕಲನ. ಇದರಲ್ಲಿ ನಲವತ್ತೊಂದು ಕಿರು ಕತೆಗಳಿವೆ. ಚಿಕ್ಕ ಚೊಕ್ಕವಾದ ಕತೆ. ವಯೋಮಾನ ವರ್ಗ ವರ್ಣ ಭೇದವನ್ನೆಲ್ಲ ಮರೆತು ಇವು ರಂಜಿಸುತ್ತವೆ. ಜೀವನದ ನಾನಾ ವಿಧವಾದ ಅನುಭವಗಳನ್ನು ಹಾಸ್ಯ, ವ್ಯಂಗ್ಯ, ನೀತಿಯ ಮುಖಾಂತರ ವರ್ಣಿಸಿವೆ. ಆಧ್ಯಾತ್ಮ ಬಂದಿದೆ. ಕಿರಿದರಲ್ಲಿ ಹಿರಿದರ್ಥವನ್ನು ಹೇಳುತ್ತವೆ. ವಾಸ್ತವಿಕಾಂಶಕ್ಕಿಂತ ಕಾಲ್ಪನಿಕಾಂಶವೇ ಹೆಚ್ಚಾಗಿವೆ. ಪೌರಾಣಿಕ, ಸಾಮಾಜಿಕ, ಆಧ್ಯಾತ್ಮಿಕ, ಪ್ರಕೃತಿಗೆ ಸಂಬಂಧಪಟ್ಟ ಹಲವಾರು ಕತೆ ತುಂಬಾ ಸೊಗಸಾಗಿ ಬಂದಿವೆ.

ಸಿದ್ಧಯ್ಯ ಪುರಾಣಿಕರು ಕತೆಗಾರರಾಗಿ ಗಮನ ಸೆಳೆದಿದ್ದಾರೆ. ಎರಡೇ ಸಂಕಲನಗಳನ್ನು ಪ್ರಕಟಿಸಿದರೂ ವೈಜ್ಞಾನಿಕವಾದ ಹಿನ್ನೆಲೆಯಲ್ಲಿ, ಸಾತ್ವಿಕ ಪಥದಿಂದ ಕೂಡಿದ ಕಥೆಗಳಾಗಿ ಓದುಗರ ಮನಸ್ಸನ್ನು ಸೂರೆಗೊಂಡಿವೆ. ಸುಂದರ ಶೈಲಿಯಿಂದ ಮತ್ತೆ ಮತ್ತೆ ಓದುವಂತೆ ಇಲ್ಲಿನ ಕತೆಗಳಿವೆ.

## ಕಾದಂಬರಿ

ಪುರಾಣಿಕರು ಕಾದಂಬರಿಯನ್ನು ಬರೆಯಬೇಕು ಎಂಬ ಅಭಿಲಾಷೆಯನ್ನು ಹೊಂದಿ 'ತ್ರಿಭುವನಮಲ್ಲ'ವೆಂಬ ಐತಿಹಾಸಿಕ ಕಾದಂಬರಿಯನ್ನು ರಚಿಸಿದರು. ಪುರಾಣಿಕರ ಕಾದಂಬರಿಗೆ ಚಾಲುಕ್ಯ ದೊರೆಗಳಲ್ಲಿ ಅತ್ಯಂತ ಪ್ರಮುಖನಾದ ಆರನೆಯ ವಿಕ್ರಮಾದಿತ್ಯ ಕಥಾನಾಯಕನಾಗಿರುವನು. ಇವನ ತಂದೆ ಸೋಮೇಶ್ವರ, ತಾಯಿ ಬಾಚಲದೇವಿ, ಇವರಿಗೆ ದ್ವಿತೀಯ ಪುತ್ರನಾಗಿ ಜನಿಸುತ್ತಾನೆ. ಮೊದಲನೆಯ ಸೋಮೇಶ್ವರ ಹಾಗೂ ಜಯಸಿಂಹ ಇವನ ಸೋದರರು. ವಿಕ್ರಮಾದಿತ್ಯ ಚಿಕ್ಕಂದಿನಲ್ಲಿ ಸಾಹಸಕ್ಕೆ ಮತ್ತು ಶೂರತನಕ್ಕೆ ಹೆಸರಾದವನು. ಕ್ರಿ.ಶ. ೧೦೭೬ ರಿಂದ ೧೧೨೬ ವರೆಗೆ ಆಳಿದ ಆರನೆಯ ವಿಕ್ರಮಾದಿತ್ಯನಿಗೆ 'ತ್ರಿಭುವನಮಲ್ಲ' ಎಂಬ ಬಿರುದು ಇತ್ತು. ಅತ್ಯಂತ ದಕ್ಷ ಅರಸ. ಇವನ ಹೆಸರಲ್ಲಿ ಶಕವರ್ಷವೇ ಆರಂಭವಾಯಿತು. ಚಕ್ರವರ್ತಿಯಾದ ಈತನ ಕೀರ್ತಿ ಎಲ್ಲೆಡೆಗೂ ಹಬ್ಬಿತ್ತು. ಆದುದರಿಂದ ಕಾಶ್ಮೀರದಿಂದ ಬಿಲ್ಹಣ ಇವನಾಸ್ಥಾನಕ್ಕೆ ಬಂದನು. ಕಾದಂಬರಿಕಾರ ಕುತೂಹಲ ಕೆರಳಿಸುವಂತೆ ಪಾತ್ರಗಳ ಹೆಸರನ್ನು ಹೇಳದೇ ಅವರ ಬಗ್ಗೆ ಹೇಳುವುದನ್ನು ನೋಡಬಹುದು. ಒಟ್ಟು ಹದಿನೇಳು ಅಧ್ಯಾಯದಲ್ಲಿ ಕಾದಂಬರಿ ರಚನೆಯಾಗಿದೆ.

ಕಾದಂಬರಿ ಭಾಷೆ ಸಂಪೂರ್ಣ ಶಿಷ್ಟವಾಗಿದೆ. ಇದೊಂದು ಕಾವ್ಯಮಯ ಕಾದಂಬರಿ ಯಾಗಿದೆ. ಗದ್ಯ-ಪದ್ಯ ಸಮೀಪವಾದ ಪ್ರೌಢ ಗಂಭೀರ ಶೈಲಿಯಿದೆ. ಈ ಕಾದಂಬರಿ ಭಾರತದ ಸಮಕಾಲೀನ ಸಂದರ್ಭದಲ್ಲಿ ಒಂದು ಒಳ್ಳೆಯ ಅಗತ್ಯವನ್ನು ಪೂರೈಸುತ್ತದೆ. ಸಮರ್ಥನಾಗಿದ್ದರೆ ಮಾತ್ರ ದೇಶ ಆಳಬಹುದೇ ಹೊರತು ಸರ್ವರಿಗೂ ಸಾಧ್ಯ ವಿಲ್ಲವೆಂಬುದು, ದೇಶದ ಹಿತಕ್ಕಾಗಿ ತನ್ನ ಸ್ವಾರ್ಥವನ್ನು ಕಡೆಗಣಿಸಬೇಕೆಂಬ ಪ್ರಮುಖ ತತ್ವಗಳನ್ನು ಬಿಂಬಿಸುತ್ತದೆ.

ಒಬ್ಬ ಯುಗ ಪುರುಷನೆಂದು ಭಾವಿಸುವ ವ್ಯಕ್ತಿಯನ್ನು ನಾಯಕನೆಂದು ಆರಿಸಿದಾಗ ಕಾದಂಬರಿಕಾರನ ಕೆಲಸ ಗುರುತರವಾಗುತ್ತದೆ. ವರ್ಣನೆ, ಪಾತ್ರ ಚಿತ್ರಣ, ಸಂಭಾಷಣೆ, ಭಾಷೆ, ಶೈಲಿಗಳಿಂದ ತುಂಬಾ ಮಹತ್ವದ ಕಾದಂಬರಿಯಾಗಿದೆ.



## ಜೀವನ ಚರಿತ್ರೆಗಳು

ಸಿದ್ಧಯ್ಯ ಪುರಾಣಿಕರು ೧೯೬೦ ರಿಂದ ೧೯೮೯ರವರೆಗೆ ಒಟ್ಟು ಆರು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಾಲ್ಕು ಜೀವನ ಚರಿತ್ರೆಗಳು ಶರಣರ ಕುರಿತಾದವು. ಇನ್ನೆರಡು ೧೮ ಹಾಗೂ ೧೯ನೆಯ ಶತಮಾನದಲ್ಲಿ ಬರುವ ಉರ್ದು ಕವಿಗಳದ್ದಾದರೆ, ೨೦ನೇ ಶತಮಾನದ "ಹರ್ಡೇಕರ ಮಂಜಪ್ಪನವರ" ಜೀವನ ಚರಿತ್ರೆ ತುಂಬಾ ಚೆನ್ನಾಗಿ ಮೂಡಿದೆ.

"ಶರಣ ಚರಿತಾಮೃತ" ಇಲ್ಲಿ ಬರುವ ಶರಣರು ಪುರಾತನರಲ್ಲ. ಭಾರತದ ಎಲ್ಲಾ ಭಾಗದ ೧೨ನೆಯ ಶತಮಾನದಿಂದ ೨೦ನೆಯ ಶತಮಾನದವರೆಗೆ ಬಾಳಿದ ಶರಣ, ಶರಣೆಯರ ಜೀವನ ಚಿತ್ರಣವಿರುವುದು. 'ಶರಣ ಚರಿತಾಮೃತದಲ್ಲಿ' ಶೀರ್ಷಿಕೆಗಳನ್ನು ಕೊಡುವ ಸಂದರ್ಭದಲ್ಲಿ ಪುರಾಣಿಕರು ವಚನ ಭಾಗಗಳನ್ನಿತ್ತು ಆಕರ್ಷಕವಾಗಿ ರಚಿಸುತ್ತಾರೆ. ಶರಣರ ಜೀವನ ಮತ್ತು ಉಪದೇಶಗಳು ಇಂದಿಗೂ ಮೌಲ್ಯಯುತವಾದವು. ಶಿವಶರಣ-ಶರಣೆಯರ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ ರಚಿಸುವದರ ಹಿಂದಿನ ಶ್ರಮ ಅರಿಯಬಹುದು.

## 'ಬಸವಣ್ಣನವರ ಜೀವನ ಹಾಗೂ ಸಂದೇಶ'

ಇದು ಬಸವಣ್ಣನವರ ಕುರಿತು ಹಲವಾರು ವಿದ್ವಾಂಸರು ರಚಿಸಿದ ಕೃತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಕ್ಷೇತ್ರಕಾರ್ಯದಲ್ಲಿ ತಾವು ಕಂಡುಂಡ ಅನುಭವಗಳನ್ನೆಲ್ಲ ಸಾಕ್ಷಾಧಾರಗಳ ಸಮೇತ ದಾಖಲಿಸಿ ವಚನಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನಾತ್ಮಕವಾಗಿ ಬರೆದ ಕೃತಿಯಾಗಿದೆ. ಇದೇ ರೀತಿಯಲ್ಲಿ ಅಲ್ಲಮಪ್ರಭು ಹಾಗೂ ಮಹಾದೇವಿಯಕ್ಕನವರ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ.

ಅನುವಾದ ಕ್ಷೇತ್ರಕ್ಕೂ ಇವರ ಕೊಡುಗೆಯನ್ನು ಗುರುತಿಸಬಹುದಾಗಿದೆ. 'ನಜೀರ್ ಅಕಬರಾಬಾದಿ' ಎಂಬ ಕೃತಿಯನ್ನು ಇಂಗ್ಲಿಷಿನಿಂದ ಅನುವಾದಿಸಿದ್ದಾರೆ. ಅನುವಾದ ವೆನಿಸದೆ ಸ್ವತಂತ್ರ ಕೃತಿಯೆನಿಸಿದೆ. ಕರ್ನಾಟಕ ಗಾಂಧಿ ಎಂದು ಪರಿಚಿತರಾದ 'ಹರ್ಡೇಕರ ಮಂಜಪ್ಪ' ನವರ ಜೀವನ ಚರಿತ್ರೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ.

'ಮಹಾದೇವಿಯಕ್ಕ' ಇದು ನಾಲ್ಕು ಅಧ್ಯಾಯಗಳಲ್ಲಿ ಮಹಾದೇವಿಯಕ್ಕನ ಜೀವನ ಹಾಗೂ ಸಂದೇಶವನ್ನು ವಿವರಿಸುವ ಪ್ರಯತ್ನವಾಗಿದೆ. 'ಅಲ್ಲಮಪ್ರಭು' ಈ ಕೃತಿಯಲ್ಲಿ ನಾಲ್ಕು ಅಧ್ಯಾಯಗಳಲ್ಲಿ ಅವನ ಜೀವನ ಹಾಗೂ ಸಾಧನೆಗಳನ್ನು ಪರಿಚಯಿಸಲಾಗಿದೆ. 'ನಜೀರ್ ಅಕಬರಾಬಾದಿ' ಅವನ ಎಲ್ಲಾ ಬದುಕಿನ, ಚರಿತ್ರೆ ಎನ್ನವಷ್ಟರ ಮಟ್ಟಿಗೆ ಸರಳವಾಗಿ ರಚಿಸಿದ್ದಾರೆ. 'ಹರ್ಡೇಕರ್ ಮಂಜಪ್ಪ'ನವರನ್ನು ಕುರಿತ ಜೀವನ ಚರಿತ್ರೆಯಲ್ಲಿ

ಅವರನ್ನು ಈ ಭಾಗದ ಕರ್ನಾಟಕದ ಗಾಂಧಿ ಎಂದು ಕರೆದಿರುವರು. ಇವರ ಜೀವನದ ಅನುಭವ, ಸಮಸ್ಯೆ, ಸವಾಲು, ಕಾರ್ಯ, ಧ್ಯೇಯ-ಧೋರಣೆಗಳ ಕುರಿತು ಮುಕ್ತವಾಗಿ ತಾವು ಕಂಡುಂಡ ಸತ್ಯವನ್ನು ಅನುಭವಗಳ ಮೂಲಕ ಹೆಣೆದಿದ್ದಾರೆ. ಹೀಗಾಗಿಯೇ ಜೀವನ ಚರಿತ್ರೆ ಕೇವಲ ಹುಟ್ಟು-ಸಾವುಗಳ ದಿನಾಂಕವಲ್ಲ. ಅದು ಅವರ ಜೀವನ ಮೌಲ್ಯ ಹಾಗೂ ಅವರು ಬಾಳಿದ ಪರಿಸರ ಕೊಟ್ಟ ಕೊಡುಗೆಯೊಂದಿಗೆ ಸಮೀಕರಿಸಿ ವೈವಿಧ್ಯ ಹಾಗೂ ವೈಶಿಷ್ಟ್ಯಪೂರ್ಣವಾಗಿ ರಚಿಸಿರುವರು. ಜೀವನ ಚರಿತ್ರೆಕಾರರಾಗಿ ಸಿದ್ಧಯ್ಯ ಪುರಾಣಿಕರು ವ್ಯಕ್ತಿ ಚಿತ್ರಗಳನ್ನು ಬಿಡಿಸುವಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೆರೆದಿದ್ದಾರೆ.

## ಮಕ್ಕಳ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿಯೇ ಮಕ್ಕಳ ಸಾಹಿತ್ಯ ಗಮನಾರ್ಹವಾದುದು. ಮಕ್ಕಳ ಸಾಹಿತ್ಯವನ್ನು ಹಲವರು ಪ್ರಯೋಗಿಸಿದ್ದಾರೆ. ಮಕ್ಕಳಿಗಾಗಿ ಬರೆಯುವಾಗ ಮಕ್ಕಳಾಗಿ ನೋಡಬೇಕು, ಅನುಭವಿಸಬೇಕು ಮತ್ತು ಮಕ್ಕಳಾಗಿ ಇದ್ದಾಗ ಮಾತ್ರ ಸಾಧ್ಯ. ಮಗುವಿನ ಭಾಷೆ ಅಭಿರುಚಿ ಎಲ್ಲವನ್ನು ತಿಳಿದುಕೊಂಡು ರಚಿಸಬೇಕಾಗುತ್ತದೆ. ಡಾ.ಸಿದ್ಧಯ್ಯ ಪುರಾಣಿಕರು ಮಕ್ಕಳ ಸಾಹಿತ್ಯದಲ್ಲೂ ಎತ್ತಿದ ಕೈ. ಒಮ್ಮೆ ಮಕ್ಕಳ ಸಾಹಿತ್ಯ ಸೃಷ್ಟಿಸಲು ಡಿ.ಕೆ.ಭೀಮಸೇನರಾವ ಹೇಳಿದರು. ಅದರ ಮೂಲಕ ಇವರಿಗೆ ಮಕ್ಕಳ ಸಾಹಿತ್ಯ ರಚಿಸುವಲ್ಲಿ ಒಲವು ಮೂಡಿತು.

ಮಕ್ಕಳಿಗಾಗಿ ಅವರು ತುಪ್ಪಾರೊಟ್ಟಿ ಗೇ ಗೇ ಗೇ, ಗಿಲ್‌ಗಿಲ್ ಗಿಲಗಚ್ಚಿ. ತಿರುಗಲೆ, ತಿರುಗಲೆ ತಿರುಗುಯ್ಯಾಲೆ ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದರು.

**ಓ ಮೋಡವೆ ಓಡಿ ಬಾರ**
**ನಮ್ಮೂರ ನೋಡು ಬಾರ**
**ನಮ್ಮೊಡನೆ ಹಾಡು ಬಾರ**

ಎಂದು ಪ್ರಕೃತಿಯನ್ನು ಕುರಿತು ಹೇಳುತ್ತಾರೆ ಕವಿ. ನಾಡು ನುಡಿ ಕುರಿತ ಗೀತೆ, ಆಟಗಳಿಗೆ ಬೇಕಾದ ಹಾಡು ರಚಿಸಿದ್ದಾರೆ. ಮಕ್ಕಳ ಮನಸ್ಸನ್ನು ಕೆರಳಿಸುವಂತಹ ಕವನಗಳಿವೆ. ಅದರಲ್ಲೂ ಕಥೆ ಪ್ರಧಾನವಾದ ಕಥನ ಕವನಗಳಿವೆ. ಚುಟುಕುಗಳಿವೆ. ಇವೆಲ್ಲ ಪ್ರಾಸಬದ್ಧವಾಗಿ ಸರಳವಾದ ರೀತಿಯಲ್ಲಿ ರಚನೆಗೊಂಡಿವೆ.

ಮಕ್ಕಳಿಗಾಗಿ ಅರೇಬಿಯನ್ ನೈಟ್ಸ್ ಕಥೆಯಲ್ಲಿ ಬರುವ ನ್ಯಾಯ ನಿರ್ಣಯವೆಂಬ ಕಥೆಯನ್ನು ಮಕ್ಕಳ ನಾಟಕ ರೂಪದಲ್ಲಿ 'ನ್ಯಾಯನಿರ್ಣಯ' ಎಂದು ಬರೆದಿದ್ದಾರೆ. ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಸಿದ್ಧರಾಮ ಮತ್ತು ಮಿರ್ಜಾ ಗಾಲಿಬ್ ಅವರ



ರೋಚಕ ಬದುಕು, ವ್ಯಕ್ತಿತ್ವ, ಅವರ ಸೇವೆ, ಕಂಡುಕೊಂಡ ಅನುಭವಗಳನ್ನು ಹಿಡಿದಿಡುವ ಮೂಲಕ ಪುರಾಣಿಕರ ಜೀವನ ಚರಿತ್ರೆಗಳು ಎಲ್ಲರ ಆಸಕ್ತಿ ಕೆರಳಿಸುತ್ತವೆ.

ಪ್ರತಿಯೊಂದು ಕಾವ್ಯ, ನಾಟಕ, ಜೀವನ ಚರಿತ್ರೆಗಳನ್ನು ಅವರು ತುಂಬಾ ತಾಳ್ಮೆ ಹಾಗೂ ನಯನಾಜೂಕಿನಿಂದ ರಚಿಸಿದ್ದಾರೆ. ಇದರಲ್ಲಿ ಬರುವ ಪ್ರತಿಯೊಂದನ್ನು ಅವರು ಮನಃಪೂರ್ವಕವಾಗಿ ಮಕ್ಕಳ ಮನಸ್ಸು, ಚಿಂತನೆಯನ್ನು ಅರಿತುಕೊಂಡು ಅದರಂತೆ ರಚಿಸಿದ್ದಾರೆ. ಇದರಿಂದ ಪುರಾಣಿಕರು ಮಕ್ಕಳ ಸಾಹಿತ್ಯದಲ್ಲಿ ಹೆಸರು ಮಾಡಿದ್ದಾರೆ.

## ಸಂಪಾದಿತ ಕೃತಿಗಳು

ಡಾ.ಸಿದ್ಧಯ್ಯ ಪುರಾಣಿಕರು ಕನ್ನಡ ಸಾಹಿತ್ಯದ ಹಲವು ಮುಖಗಳಲ್ಲಿ ತಮ್ಮನ್ನು ಗುರುತಿಸಿಕೊಂಡವರು. ಸೃಜನದೊಂದಿಗೆ ಸೃಜನೇತರ ಸಾಹಿತ್ಯ ಸೇವೆ ಮಾಡಿದ್ದಾರೆ. ಪದ್ಯ ಪ್ರಕಾರದಲ್ಲಿ ಸುಬೋಧಸಾರ, ಶ್ರೀಕಾರ, ಕನ್ನಡ ಪದ್ಮರತ್ನಾಕರ ಹಾಗೂ ಮಳೆಯ ರಾಜ ಚಾರಿತ್ರ್ಯವೆಂಬ ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ಇವನ್ನೆಲ್ಲ ಸಂಪಾದನೆ ಮಾಡಲು ಮುಖ್ಯ ಕಾರಣ ಅದರಲ್ಲಿರುವ ವೈವಿಧ್ಯತೆ. ಎಲ್ಲವನ್ನು ಅವರು ತುಂಬಾ ಆಸಕ್ತಿಯಿಂದ ಸಂಪಾದಿಸಿದ್ದಾರೆ.

ಪುರಾಣಿಕರು ಗದ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಪ್ರಬಂಧ ಮಾಲೆ, ಕನಕದಾಸ ಪ್ರಶಸ್ತಿ, ಶರಣ ಪ್ರಸಾದ, ಸಿದ್ಧಗಂಗಾಶ್ರೀ, ಮಣಿಹ, ಬಸವ ಮತ್ತು ದಲಿತೋದಯ, ಬಸವ ಮತ್ತು ವಿಚಾರವಾದ, ಬಸವ ದರ್ಶನ ಎಂಬ ಎಂಟು ಕೃತಿಗಳು ಅವರ ಅಧ್ಯಯನದ ಫಲಶೃತಿಯ ಮೇರೆಗೆ ಸಾಂದರ್ಭಿಕವಾಗಿ ಬಂದಿರುವ ಕೃತಿಗಳಾಗಿವೆ.

**ಸಂಶೋಧನೆ :** ಬಸವಣ್ಣ ಮತ್ತು ಚನ್ನಬಸವಣ್ಣನವರ ಕುರಿತು ಇವರು ಸಂಶೋಧನೆಯನ್ನು ಮಾಡಿದ್ದು ತಮ್ಮದೇ ಆದ ನಿಲುವು ಹೊಂದಿದ್ದಾರೆ. ಪುರಾಣಿಕರು ಈ ರೀತಿ ಸಂಶೋಧನೆಯಲ್ಲಿ ಸಹ ಕೆಲಸ ಮಾಡಿದ್ದಾರೆ.

**ವಿಕಾಸವಾಣಿ :** ಎಂಬ ಕೃತಿ ಜನಸಾಮಾನ್ಯರಿಗೆ ತಿಳುವಳಿಕೆ ಅರಿವು ಮುಟ್ಟಿಸುವ ಕವನ ಸಂಕಲನ, 'ಗ್ರಾಮ ಸ್ವರಾಜ್ಯ' ಇದು ಗ್ರಾಮದ ಕುರಿತು ಹೇಳುವದಾಗಿದೆ.

**ಚಿಂತನಲಹರಿ :** ಇದು ಆಕಾಶವಾಣಿಯಲ್ಲಿ ಬರೆದ ಚಿಂತನೆಗಳ ಸಂಗ್ರಹವಾಗಿದೆ. ಇದರಲ್ಲಿ ನಲವತ್ತಾರು ಚಿಂತನೆಗಳಿವೆ. ಇವು ಸಹಿತ ಒಂದಿಲ್ಲೊಂದು ರೀತಿಯಿಂದ ಬದುಕಿನ ಸಾರವನ್ನು ತಿಳಿಸುತ್ತವೆ.

**ತಿಂಗಳಿನಿಂದ ಮಂಗಳನತ್ತ :** ಎಂಬ ಲೇಖನವನ್ನು ಎಂಟನೆಯ ತರಗತಿಯ ಪಠ್ಯ ಪುಸ್ತಕಕ್ಕಾಗಿ ರಚಿಸಿದ್ದಾರೆ. ಸಂಪಾದನೆ, ಸಂಗ್ರಹ, ಇತರ ಬರಹಗಳನ್ನು ರಚಿಸುವ, ಚಿಂತನ-ಮಂಥನ, ಮುಂತಾದವು ಕಟ್ಟಿಕೊಡುವ ಮೌಲ್ಯಗಳಿಂದಾಗಿ ತುಂಬಾ ಉಪಯುಕ್ತ ಕೃತಿಗಳಾಗಿವೆ.

## ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ : ಆತ್ಮಕಥೆ :

ಇದು ಸಿದ್ಧಯ್ಯ ಪುರಾಣಿಕರ ಆತ್ಮಕತೆ. ಇದರಲ್ಲಿ ಇವರ ಸಮಗ್ರ ಜೀವನ ನಿರೂಪಣೆಗೊಂಡಿದೆ. ೩೬೨ ಪುಟಗಳ ಈ ಆತ್ಮಕಥೆ ಗಮನಿಸಬೇಕಾದದ್ದು. ಅವರು ತಮ್ಮ ಜೀವನದಲ್ಲಿ ಆದ ಮಹತ್ವದ ಬದಲಾವಣೆಗಳನ್ನು ತಿರುವುಗಳನ್ನು ತಮ್ಮ ಬಾಲ್ಯದ ಪರಿಸರವನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸುತ್ತಾರೆ.

ಇದು ಗದ್ಯದ ಬರಹಕ್ಕೆ ಉತ್ತಮ ಉದಾಹರಣೆ. ಪುರಾಣಿಕರು ಕಾದಂಬರಿ, ಕತೆ ಇನ್ನಾವುದೇ ಗದ್ಯ ಬರೆಯುವಂತ ಸಂದರ್ಭದಲ್ಲಿ ಕಾವ್ಯಮಯ ಶೈಲಿ ಅದರಲ್ಲಿ ಅಡಕಗೊಳ್ಳುತ್ತದೆ. ಅದರೆ ಇದರಲ್ಲಿ ಸಂಪೂರ್ಣ ಗದ್ಯ ಶೈಲಿ, ಸತ್ವಪೂರ್ಣ ಭಾಷೆಯಿದ್ದು, ಹದವರಿತ ಜೀವನಾನುಭವ ಕಟ್ಟಿಕೊಡುತ್ತದೆ.

ಹೈದ್ರಾಬಾದ್ ಕರ್ನಾಟಕದ ಸಮಗ್ರ ಚಿತ್ರಣ ಕೊಡುತ್ತದೆ. ಇಲ್ಲಿಯ ಜೀವನ ವಿಧಾನ, ಸಾಹಿತ್ಯ, ಸಂಸ್ಕೃತಿ ಕಲೆ, ಆಡಳಿತ ರಾಜಕೀಯ, ಸ್ವಾತಂತ್ರ್ಯ ಹೋರಾಟ, ರಜಾಕಾರರ ಹಾವಳಿ, ಶಿಕ್ಷಣದ ಪದ್ಧತಿಗಳೆಲ್ಲವನ್ನು ಹೇಳುವಾಗ ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ. ಅನೇಕ ಘಟನೆಗಳನ್ನು ನೆನಪಿಸಿಕೊಳ್ಳುವ ಮೂಲಕ ಜನರ, ರೈತರ ಸ್ಥಿತಿಗತಿ ಕುರಿತು ಬೆಳಕು ಚೆಲ್ಲುತ್ತಾರೆ. ಭಾಷೆ ನಾಡು ನುಡಿ ಸಂಸ್ಕೃತಿಗಾಗಿ ಈ ಭಾಗದ ಸೂಕ್ಷ್ಮ ಅವಲೋಕನ ಮಾಡುತ್ತಾರೆ.

ತಮ್ಮೊಂದಿಗೆ ಇದ್ದ ಹಿರಿಯರು, ಕಿರಿಯರು, ಸ್ನೇಹಿತರು ಎಲ್ಲರನ್ನು ಪರಿಚಯಿಸುತ್ತಾ ಅಧಿಕಾರಿಯಾಗಿದ್ದಾಗ ಹೇಗೆ ಎಲ್ಲಿ ಏನು ಇತ್ತು ಏನಾದವು ಎಂಬುದನ್ನು ತಿಳಿಸುತ್ತಾರೆ. ಹಲವಾರು ವಿಷಯ ಮರೆತು ಹೋದರೂ ಸಹ ಅವುಗಳ ಮೆಲುಕು ಹಾಕುವ ಕೆಲಸ ಮಾತ್ರ ಇಲ್ಲಿ ಜೀವಂತವಾಗಿರಿಸಿದ್ದಾರೆ. ಈ ಆತ್ಮಕಥನ ಹೈದ್ರಾಬಾದ್ ಕರ್ನಾಟಕದ ಬಹುಮುಖ್ಯ ಕೃತಿಯಾಗಿದೆ. ಅವರು ಮಾಡಿದ ಸೇವೆ, ನೀತಿ, ಯೋಜನೆಗಳು ಎಲ್ಲವುಗಳೊಂದಿಗೆ ಸಮಗ್ರ ಚಿತ್ರಣ ಕೊಡುತ್ತದೆ.

ಹೀಗಾಗಿ 'ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ' ಆತ್ಮ ಚರಿತ್ರೆ ಸಿದ್ಧಯ್ಯ ಪುರಾಣಿಕರ ಚರಿತ್ರೆ ಆಗದೇ ಇಡೀ ಹೈದ್ರಾಬಾದ್ ಕರ್ನಾಟಕದ ಚರಿತ್ರೆಯಾಗಿ ನಿಂತಿದೆ. ಇದೊಂದು



ಕನ್ನಡ ಸಾಹಿತ್ಯದ ಅದರಲ್ಲೂ ಹೈದ್ರಾಬಾದ್ ಕರ್ನಾಟಕದ ಹಿಂದಿನ ನೆನಪುಗಳನ್ನು ಅವಲೋಕಿಸಲು ತುಂಬಾ ಉಪಯುಕ್ತವಾಗಿದೆ.

## ಸಾರ್ವಜನಿಕ ಸೇವೆ :

ಡಾ.ಸಿದ್ಧಯ್ಯ ಪುರಾಣಿಕರು ಅಧಿಕಾರಿಗಳಾಗಿ ಮಾಡಬೇಕಾದ ಕೆಲಸಗಳನ್ನು ಮಾಡಿದ್ದಾರೆ. ಆದರೆ ಎಲ್ಲರೂ ಅಧಿಕಾರಿಗಳಾಗಿ ಮಾಡಿದರೆ ಇವರೊಬ್ಬ ಉತ್ತಮ ಸ್ನೇಹಿತರಾಗಿ ಮಾಡಿದ್ದಾರೆ. ಎಂದೂ ಅಧಿಕಾರದ ದುರುಪಯೋಗ ಮಾಡದೇ ಅತ್ಯಂತ ಸರಳವಾಗಿ ಶ್ರದ್ಧೆಯಿಂದ ಅವರು ಕೆಲಸ ಮಾಡಿದರು. ಸಾರ್ವಜನಿಕರಿಗಾಗಿ ಅವರು ಕೆಲಸ ಮಾಡಿದರು. ಅದನ್ನು ಮೆಚ್ಚಲೇಬೇಕು.

## ಕನ್ನಡಕ್ಕಾಗಿ ಹೋರಾಟ

ಸಿದ್ಧಯ್ಯನವರು ಅಧಿಕಾರಿಯಾಗಿದ್ದೂ ಕನ್ನಡ ಕೆಲಸ ಬಂದಾಗ ಒಬ್ಬ ಕನ್ನಡಿಗರಾಗಿ ಕೆಲಸ ಮಾಡಿದರು. ಅವರು ಕನ್ನಡಕ್ಕಾಗಿ ಬಾಲ್ಯದಿಂದಲೂ ಹೋರಾಟಮಯ ಜೀವನ ನಡೆಸಿಕೊಂಡು ಬಂದಿದ್ದಾರೆ. ಕಾವೇರಿ ಜಲವಿವಾದ ಉಂಟಾದಾಗ ಎಸ್.ಜಿ. ಬಾಳೇಕುಂದ್ರಿಯವರೊಂದಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಹಲವಾರು ಸಮಸ್ಯೆ ಉಪಯೋಗವನ್ನು ತಿಳಿಸಿ ಅದರ ಅಗತ್ಯತೆಯನ್ನು ತುಂಬಾ ಗಂಭೀರವಾಗಿ ಹೇಳಿದರು. ಕರ್ನಾಟಕಕ್ಕೆ ರೇಲ್ವೆ ಹೆದ್ದಾರಿಗಳು ಆಗದೇ ಆರ್ಥಿಕ ತೊಂದರೆಯಿಂದ ನಿಂತಾಗ ಅವುಗಳಿಗೆ ನಿರ್ದಿಷ್ಟ ಕಾರಣ ಹೇಳಿದ್ದು ಕೇಳಿ ಯಾರಿಗಾದರೂ ಆಶ್ಚರ್ಯವಾಗಲೇಬೇಕು. ಕನ್ನಡದ ಆಡಳಿತ ಅನುಷ್ಠಾನ ಆಗಬೇಕೆಂದು ಪ್ರತಿಪಾದಿಸಿದರು. ಕನ್ನಡ ಉಳಿವು ಮಾಡಲು ಅವರು ಹಲವಾರು ಸಿದ್ಧತೆ ಮಾಡಿಕೊಂಡು 'ಕರ್ನಾಟಕ ವಿಕಾಸ ವೇದಿಕೆ' ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ಅನೇಕ ಜನಪರ ಕೆಲಸ ಮಾಡಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನ, ನಾಡಹಬ್ಬಗಳನ್ನು ಕೇವಲ ಕರ್ನಾಟಕದಲ್ಲಿ ಅಷ್ಟೇ ಏಕೆ ಬೇರೆ ಬೇರೆ ಪ್ರದೇಶದಲ್ಲಿ ಕನ್ನಡದ ಕೈಂಕರ್ಯ ಕರ್ನಾಟಕ ಏಕೀಕರಣಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು.

## ಸಾಹಿತ್ಯ ಕ್ಷೇತ್ರದಲ್ಲಿ ಸಂದ ಗೌರವಗಳು

ಡಾ.ಸಿದ್ಧಯ್ಯ ಪುರಾಣಿಕರು ವೃತ್ತಿಯಿಂದ ಅಧಿಕಾರಿಗಳಾಗಿ ಇದ್ದವರು. ಆದರೆ ಪ್ರವೃತ್ತಿಯಿಂದ ಸಾಹಿತಿಯಾಗಿದ್ದರು. ಅವರು ಅಧಿಕಾರಿಯಾಗಿ, ಸಾಹಿತಿಯಾಗಿ

ದುಡಿದದ್ದು ಹೆಚ್ಚು. ಆದರೂ ಅವರನ್ನು ಅರಸಿಕೊಂಡು ಬಂದ ಹಲವಾರು ಸಂಘ ಸಂಸ್ಥೆ ಪ್ರಶಸ್ತಿ, ಗೌರವ ಸದಸ್ಯತ್ವಗಳನ್ನು ನೋಡಬಹುದು.

ಡಾ.ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿ, ಕನ್ನಡ ಕನ್ನಡ ನಿಘಂಟು ಸಮಿತಿ, ಕನ್ನಡ ಪ್ರಾಧಿಕಾರ ಇವುಗಳ ಸದಸ್ಯರಾಗಿ ಅವಿರತ ಶ್ರಮಿಸಿದರು. ಹಲವಾರು ಯೋಜನೆ ಹಾಕಿಕೊಂಡು ಸೇವೆ ಸಲ್ಲಿಸಿದರು. ಬಸವ ಸಮಿತಿಯ ಉಪಾಧ್ಯಕ್ಷರಾಗಿ, ರಾಜಾಜಿನಗರ ಲಲಿತ ಕಲಾನಿಕೇತನ ಹಾಗೂ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಬಸವ ಸಮಿತಿಯ ಎಲ್ಲಾ ಬಗೆಯ ಕಾರ್ಯ ಮಾಡಿ, ಕನ್ನಡ ಇಂಗ್ಲೀಷ್ ಜರ್ನಲ್‌ಗಳನ್ನು ತರುವ ಮೂಲಕ ಅವಿನಾಭಾವ ಸಂಬಂಧ ಹೊಂದಿ ಇವುಗಳ ಸಂಪಾದನಾಕಾರ್ಯ ನಿರ್ವಹಿಸಿದರು. ಅಂದಿನಿಂದ ಇಂದಿಗೂ ಬಸವಪಥ ಬರುತ್ತಿದೆ. ಅಕ್ಕಮಹಾದೇವಿ ಹಾಗೂ ಬಸವಣ್ಣನ ಧ್ವನಿ ಸುರಳಿ ತರಲು ಪ್ರಮುಖ ಪಾತ್ರ ವಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು, ಜಾನಪದ ಟ್ರಸ್ಟ್, ಬಿ.ಎಂ.ಶ್ರೀ ಪ್ರತಿಷ್ಠಾನದ ಸದಸ್ಯರಾಗಿ ಕಾರ್ಯಕಾರಿ ಸಮಿತಿಯಲ್ಲಿದ್ದರು. 'ಲೋಕವಾಣಿ' ದಿನಪತ್ರಿಕೆಯ ಸಂಪಾದಕರಾಗಿ ದುಡಿದರು. ಕನ್ನಡ ಭವನ ನಿರ್ಮಾಣ, ಅದರಲ್ಲೂ ವಿರಾಜ ಪೇಟೆಯ ಕರ್ನಾಟಕ ಭವನದ ನಿರ್ಮಾಣ ಮಾಡಿದ ಕಾರ್ಯ ಅವಿಸ್ಮರಣೀಯ.

ಸಿದ್ಧಯ್ಯ ಪುರಾಣಿಕರು ಆಕಾಶವಾಣಿ, ದೂರದರ್ಶನಗಳಲ್ಲಿ ಹಲವಾರು ಕವಿತೆ ವಾಚಿಸಿದ್ದಾರೆ. ಅನೇಕ ಸಾಹಿತ್ಯಗೋಷ್ಠಿ, ಸಮ್ಮೇಳನಗಳಲ್ಲಿ ಉಪನ್ಯಾಸ, ಉದ್ಘಾಟನೆ, ಅಧ್ಯಕ್ಷತೆ ವಹಿಸುತ್ತಿದ್ದರು. ಹರಪನಹಳ್ಳಿ ಕನ್ನಡ ಸಾಹಿತ್ಯ ಸಮ್ಮೇಳನ, ಸಾಹಿತ್ಯಗೋಷ್ಠಿ, ಬೀದರ್ ಸಮ್ಮೇಳನದ ಕವಿಗೋಷ್ಠಿ, ಹೈದ್ರಾಬಾದ್ ಬಹುಭಾಷಾ ಕವಿಸಮ್ಮೇಳನ, ಮೈಸೂರ ದಸರಾ ಸಮ್ಮೇಳನ, ಧರ್ಮಸ್ಥಳ ಹೊಂಬುಜ ಸರ್ವಧರ್ಮ ಸಮ್ಮೇಳನ, ದೆಹಲಿ ಸಮ್ಮೇಳನ, ಕನ್ನಡದ ಭವಿಷ್ಯ ಗೋಷ್ಠಿ, ಲೇಖಕರ ಗೋಷ್ಠಿ, ಮೈಸೂರು ಸಮ್ಮೇಳನ, ಕೊಪ್ಪಳ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರು, ಕೊಡಗು ಜಿಲ್ಲಾ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ, ಕಲಬುರ್ಗಿಯಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವವನ್ನು ಸಿದ್ಧಯ್ಯ ಪುರಾಣಿಕರು ಪಡೆದಿದ್ದರು.

ಡಾ.ಸಿದ್ಧಯ್ಯ ಪುರಾಣಿಕರಿಗೆ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ, ಮಾಳವಾಡ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿಗಳು ಲಭಿಸಿವೆ. ಇದರೊಂದಿಗೆ ಅನೇಕ ಸಂಘ ಸಂಸ್ಥೆ ಮಠಾಧೀಶರು ಇವರಿಗೆ ಅನೇಕ ಬಿರುದುಗಳನ್ನು ನೀಡಿ ಗೌರವಿಸಿದ್ದಾರೆ. ಕನ್ನಡದ ಕೆಲಸ ಮತ್ತು ವಚನ ಸಾಹಿತ್ಯದ ಅಧ್ಯಯನ ಪರಿಶೀಲಿಸಿ ಅದರೊಂದಿಗೆ ಇವರ ಸಮಗ್ರ ಸಾಹಿತ್ಯ ಗುರುತಿಸಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್(ಡಿಲಿಟ್) ನೀಡಿ ಗೌರವಿಸಿದೆ.



ಪುರಾಣಿಕರು ಅತ್ಯಂತ ಸರಳ, ಸಜ್ಜನರು, ವಿನಯ, ಅಧಿಕಾರ ವಿದ್ದರೂ ಅವುಗಳನ್ನು ತಮ್ಮ ಬದುಕಿನಲ್ಲಿ ಸಮಸಮವಾಗಿ ನೋಡಿಕೊಂಡು ಬಂದರು. ಪ್ರತಿಭಾನ್ವಿತ ಸಾಹಿತಿಯಾಗಿ, ದಕ್ಷ ಆಡಳಿತಗಾರರಾಗಿ ಕೆಲಸ ಮಾಡುವಾಗ ಸೌಮ್ಯದಿಂದ ವರ್ತಿಸುತ್ತಿದ್ದರು. ಕೆಲವೊಮ್ಮೆ ರೀತಿ ನೀತಿಗಳು ತಪ್ಪಿದಾಗ ಕಠೋರರೂ ಆಗುತ್ತಿದ್ದರು. ನ್ಯಾಯನಿಷ್ಠುರಿಯಾಗಿರುತ್ತಿದ್ದರು. ಕನ್ನಡ ಸಾಹಿತ್ಯದ ಹಲವು ಸಾಹಿತಿಗಳ ಸಾಲಿನಲ್ಲಿ ಸಿಗುವ ವಿರಳರಲ್ಲಿ ವಿರಳರು. ಇವರು ೯೪ ಇಳರಲ್ಲಿ ತುಂಬು ಜೀವನ ನಡೆಸಿ ಮರಣ ಹೊಂದಿದರು. 'ಕನ್ನಡಕ್ಕೊಬ್ಬರೇ ಕಾವ್ಯಾನಂದ'ರೆಂದು ನೆನಪಿಸಿಕೊಳ್ಳುತ್ತೇವೆ. ಇದರಿಂದ ಕನ್ನಡ ಸಾಹಿತ್ಯದ ಒಂದು ಅಮೂಲ್ಯ ನಿಧಿ ಕಳೆದುಕೊಂಡಂತಾಯಿತೆಂದು ಹೇಳಿದರೂ, ಅವರ ಕೃತಿಗಳು ನಮ್ಮಿಂದ ದೂರವಾಗಿಲ್ಲವೆಂಬುದಂತೂ ಸತ್ಯ.

**

# ೧೦. ಸಮಾರೋಪ

ಕನ್ನಡ ಭಾಷೆಯನ್ನು ಸತ್ವಪೂರ್ಣವಾಗಿ ಹಾಗೂ ಅರ್ಥವತ್ತಾಗಿ ಬಳಸಿ ಆಧುನಿಕ ಸಾಹಿತ್ಯದ ಶ್ರೀಮಂತಿಕೆಗೆ ಕಾರಣರಾದ ಸಾಹಿತಿಗಳಲ್ಲಿ ಡಾ.ಸಿದ್ಧಯ್ಯ ಪುರಾಣಿಕರು ಒಬ್ಬರು. ಇವರ ಗದ್ಯಶೈಲಿಯ ಬಗ್ಗೆ ಶಾಂತರಸರು ಹೇಳಿದ್ದು ಹೀಗೆ "ಇವರ ಗದ್ಯ ಶೈಲಿ ಪ್ರೌಢವಾದುದು, ವಾಕ್ಯದಿಂದ ವಾಕ್ಯಕ್ಕೆ ಮುಂದುವರಿಯುವಾಗ ಓದುಗನಿಗೆ ಸೊಗಸೆನಿಸುತ್ತದೆ. ಭಾಷೆ, ಬನಿಯುಳ್ಳದು, ಬಂಧುರವಾದುದು, ಅಷ್ಟೇ ಹಿತವಾದುದು" ಎಂದಿದ್ದಾರೆ ಪುರಾಣಿಕರ ಶೈಲಿ ಹೃದಯದಿಂದ ಬಂದು ಹೃದಯಕ್ಕೆ ತಟ್ಟುವಂಥದಾಗಿದೆ. ಕಾದಂಬರಿಯಲ್ಲಿ ಕನ್ನಡಿಗರ ದೇಶಪ್ರೇಮ, ಉದಾರತೆ, ಶೌರ್ಯಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಾ.ಸಿದ್ಧಯ್ಯ ಪುರಾಣಿಕರ ಕಾವ್ಯದಲ್ಲಿ ಬಡವರ, ಕೆಳವರ್ಗದವರ ಬಗೆಗಿರುವ ಕಳಕಳಿಯನ್ನು ಈ ಕೆಳಗಿನ ಕವನ ಸ್ಪಷ್ಟಪಡಿಸುತ್ತದೆ

"ಹುಟ್ಟಿನೊಳಗಿರಬಹುದು, ಹಸಿದ ಹೊಟ್ಟೆಯಲಿ ಕುಲವುಂಟೇ?
ವೇಷದೊಳಗಿರಬಹುದು ಹೃದಯ ಭಾಷೆಯಲಿ ಕುಲವುಂಟೇ?
ಜಡತನುವಿಗಿರಬಹುದು ಬಡತನಕೆ ಕುಲವುಂಟೆ?
ಸಲಾಮ್ ಸಾಬ್, ಸಲಾಮ್‌ಸಾಬ್"

ಇಂಥ ಸಾಲುಗಳನ್ನು ನೋಡಿದಾಗ ಯಾವ ದಲಿತ ಬಂಡಾಯದ ಕವಿಗೂ ಕಡಿಮೆ ಎಂದೆನಿಸುವದಿಲ್ಲ. ಸಮಾಜದ ವಿರುದ್ಧ ಸಿಡಿದೆದ್ದು ಪ್ರಶ್ನೆ ಮಾಡುವ ಅವರ ಅನೇಕ ಕವಿತೆಗಳಿವೆ.

ವಚನ ಸಾಹಿತ್ಯದಿಂದ ಪ್ರಭಾವಿತರಾಗಿ ತಮ್ಮ ಆಧುನಿಕ ವಚನಗಳಲ್ಲಿ ತಮ್ಮ ನಿಲುವುಗಳನ್ನು ಸ್ಪಷ್ಟ ಪಡಿಸುತ್ತಾರೆ.

ನನ್ನ ಧರ್ಮ ಭಾರತಧರ್ಮ
ನನ್ನ ಕುಲ, ಕನ್ನಡಕುಲ
ನನ್ನ ಗೋತ್ರ ಬಸವಗೋತ್ರ
ನನ್ನ ಸೂತ್ರ ಸಮನ್ವಯ ಸೂತ್ರ
ನನ್ನ ಯೋಗ ಕಾಯಕಯೋಗ
ನನ್ನ ಯಾಗ ಸೇವಾಯಾಗ,



ನನ್ನ ಪಕ್ಷ ಭಕ್ತಿ ಪಕ್ಷ
ನನ್ನ ಬಾವುಟ ಪ್ರೇಮಬಾವುಟ
ನನ್ನ ವೇದಿಕೆ ವಿವೇಕ ವೇದಿಕೆ
ನನ್ನ ಈಶ್ವರ ಸ್ವತಂತ್ರಧೀರ ಸಿದ್ಧೇಶ್ವರ

ಈ ರೀತಿ ತಮ್ಮ ಲೌಕಿಕ ಜೀವನಾನುಭವಗಳನ್ನು ಒಂದೆಡೆ ನೀಡಿರುವದು ವಿಶೇಷವಾಗಿದೆ. ಒಟ್ಟಾರೆ ಪುರಾಣಿಕರು ನೀಡಿದ ಮಹತ್ವದ ಸಂದೇಶ ವೆಂದರೆ "ಏನಾದರೂ ಆಗು ಮೊದಲು ಮಾನವನಾಗು" ಎಂಬುದಾಗಿದೆ. ಸಿದ್ಧಯ್ಯ ಪುರಾಣಿಕರು ಹೊಸಗನ್ನಡ ಸಾಹಿತ್ಯದ ಯಾವ ಘಟ್ಟಗಳಿಗೂ ಬದ್ಧರಾಗದೆ ಎಲ್ಲ ಘಟ್ಟಗಳಿಗೆ ಸ್ಪಂದಿಸುತ್ತಾ ಬಂದಿರುವದನ್ನು ಅವರ ಸಮಗ್ರ ಸಾಹಿತ್ಯ ನೋಡಿದಾಗ ತಿಳಿದುಬರುವದು. ವೃತ್ತಿ ಯೊಂದಿಗೆ ತಮ್ಮ ಸಾಹಿತ್ಯ ಕೃಷಿಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಅವರ ಭಾಷಾ ಪ್ರಭುತ್ವಕ್ಕಾಗಿಯೇ "ಬಿಲ್ವಾರ್" ಪ್ರಶಸ್ತಿ ಬಂದಿರುವದನ್ನು ಗಮನಿಸಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಅವರು ಸಲ್ಲಿಸಿದ ಸೇವೆ ಅಮೋಘವಾಗಿದೆ. ಮಾನವೀಯ ಮೌಲ್ಯ ಗಳೊಂದಿಗೆ ವ್ಯಕ್ತಿ ಬದುಕಬೇಕು. ಆಗ ಮಾತ್ರ ಸಾರ್ಥಕ ಜೀವನ ನಡೆಸಲು ಸಾಧ್ಯ ವೆಂಬುದು ಪುರಾಣಿಕರ ಸಂದೇಶವಾಗಿದೆ.

**


# ಅನುಬಂಧ

## ೧. ಜೀವನ ವಿವರ

| ಇಸ್ವಿ | ಘಟನೆಗಳು |
|---|---|
| ೧೯೧೮ | ಜನನ |
| ೧೯೩೨ | 'ಬೆಳಗು'ಕವನ ರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಆಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ |
| ೧೯೪೩ | ವಿವಾಹ |
| ೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲಬರ್ಗಾ |
| ೧೯೪೮ | ಅಸಿಸ್ಟೆಂಟ್ ಕಮೀಷನರ್ (ಜಾಗೀರಾತ್) |
| ೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ ಸಂಸ್ಥಾನ |
| ೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರ |
| ೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| ೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೧೯೬೨ | ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ |
| ೧೯೬೪ | ಅರ್ಥ ಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ. |
| ೧೯೬೫ | ಡೆಪ್ಯೂಟಿ ಕಮಿಷನರ್, ಮಡಿಕೇರಿ |
| ೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೧೯೭೦ | ಡೆಪ್ಯೂಟಿ ಕಮಿಷನರ್, ಬೆಳಗಾವಿ |
| ೧೯೭೨ | ಲೇಬರ್ ಕಮಿಷನರ್, ಬೆಂಗಳೂರು |
| ೧೯೭೪ | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ೧೯೭೫ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೧೯೭೬ | ನಿವೃತ್ತಿ ಹಾಗೂ ವಿಶ್ರಾಂತಿ ಜೀವನ |
| ೧೯೭೮ | 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ |
| ೧೯೭೯ | ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ ಬಸವ ಪಥ(ಕನ್ನಡ ಮಾಸಿಕ) ಬಸವ ಜರ್ನಲ್, (ಇಂಗ್ಲಿಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ |
| ೧೯೮೦ | ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) |
| ೧೯೮೧ | ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ) |
| ೧೯೮೧ | ರಾಜ್ಯ ಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ ಹಾಗೂ ನಿಧಿ ಸಮರ್ಪಣೆ |
| ೧೯೮೩ | 'ವಚನ ನಂದನ' ಪ್ರಕಟಣೆ |
| ೧೯೮೫ | ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ) ದ ಅಧ್ಯಕ್ಷರು |
| ೧೯೮೭ | ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು |
| ೧೯೯೪ | 'ವಚನ ಬ್ರಹ್ಮ' ಬಿರುದು-ಕಲಾಜ್ಯೋತಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ ಬೆಂ. |
| ೧೯೯೪ | ಮರಣ |

**

## ೨. ಡಾ.ಸಿದ್ಧಯ್ಯ ಪುರಾಣಿಕರ ವಂಶ ವೃಕ್ಷ






## ೩. ಡಾ.ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ

**ಕವನ ಸಂಕಲನಗಳು :**

| ಕೃತಿ | ಪ್ರಕಾಶಕರು | ವರ್ಷ |
|---|---|---|
| ೧ | ೨ | ೩ |
| ೧. ಜಲಪಾತ | ಸಂಗಡಿಗರ ಸಮಿತಿ, ರಾಯಚೂರು | ೧೯೫೩, ೬೪ |
| ೨. ಕರುಣಾಶ್ರಾವಣ | ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಕೃಷ್ಣಮೂರ್ತಿ ಪುರಂ, ಮೈಸೂರು–೪ | ೧೯೫೫, ೬೭ |
| ೩. ಮಾನಸ ಸರೋವರ | ಶಾರದಾ ಪ್ರಕಟನಾಲಯ, ಬೆಂಗಳೂರು | ೧೯೫೯ |
| ೪. ಕಲ್ಲೋಲ ಮಾಲೆ | ತಾರಾ ಗ್ರಂಥ ಪ್ರಕಾಶನ, ಧಾರವಾಡ | ೧೯೬೮ |
| ೫. ಮೊದಲು ಮಾನವನಗು | ತಾರಾಗ್ರಂಥ ಪ್ರಕಾಶನ, ಧಾರವಾಡ | ೧೯೬೯ |
| ೬. ಚರಗ | ಶ್ರೀಗಿರಿ ಪ್ರಕಾಶನ, ಕುಡಿ–೩ | ೧೯೮೭ |
| ೭. ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. ಮರುಳಸಿದ್ಧನ ಕಂತೆ | ಶ್ರೀಗಿರಿ ಪ್ರಕಾಶನ, ಬೆಂಗಳೂರ, ಕುಡಿ–೭ | ೧೯೯೧ |

**ವಚನ ಸಂಗ್ರಹಗಳು :**

| | | |
|---|---|---|
| ೧. ವಚನೋದ್ಯಾನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೭೭ |
| ೨. ವಚನ ನಂದನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೩ |
| ೩. ವಚನಾರಾಮ | ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ | ೧೯೯೨ |

**ನಾಟಕಗಳು:**

| | | |
|---|---|---|
| ೧. ಆತ್ಮಾರ್ಪಣ | ಹೈದರಾಬಾದು ವೀರಶೈವ ತರುಣ ಸಂಘ | ೧೯೪೨ |
| ೨. ಭಾರತ ವೀರ | ನರೇಶ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು-೧೬ | ೧೯೬೩,೬೪, ೬೭ |
| ೩. ರಜತ ರೇಖೆ | ಶ್ರೀ ಎಂ.ಬಿ. ತುರಮರಿ ಕಾರ್ಯದರ್ಶಿ ಕರ್ನಾಟಕ ಸಹಕಾರ ಸಾಹಿತ್ಯ ಸಂಘ ಲಿಮಿಟೆಡ್, ೬೫ ಧಾರವಾಡ | ೧೯೬೨ |
| ೪. ಭಗ್ನ ನೂಪುರ | ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು-೭೦ | ೧೯೮೪ |

**ಕಥಾ ಸಂಕಲನಗಳು :**

| | | |
|---|---|---|
| ೧. ಕಥಾಮಂಜರಿ | ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದ್ರಾಬಾದ್ | ೧೯೫೧ |
| ೨. ತುಷಾರ ಹಾರ ವಿಸ್ತೃತ ದ್ವಿತೀಯ ಆವೃತ್ತಿ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ-೪ | ೧೯೮೭ |

**ಕಾದಂಬರಿ:**

| | | |
|---|---|---|
| ೧. ತ್ರಿಭುವನ ಮಲ್ಲ | ಗುರು ಕುಮಾರ ಪ್ರಕಾಶನ, ೨೨೨೪. | ೧೯೬೪ |
| | ಬಸವೇಶ್ವರ ನಾಲ್ಕನೇ ಅಡ್ಡರಸ್ತೆ, | ೧೯೮೧ |
| | ಮೈಸೂರು-೫೮೦೦೦೪ | ೧೯೮೫ |



**ಮಕ್ಕಳ ಸಾಹಿತ್ಯ :**

| | | |
|---|---|---|
| ೧. ತುಪ್ಪಾ ರೊಟ್ಟಿ ಗೇ ಗೇಗೇ | ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ | ೧೯೬೪, ೭೩ |
| ೨. ಗಿಲ್ ಗಿಲ್ ಗಿಲಗಚ್ಚಿ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೭೮ |
| ೩. ತಿರುಗೆಲೆತಿರುಗಲೆ ತಿರುಗುಯ್ಯಾಲೆ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೧ |
| ೪. ಬಣ್ಣ ಬಣ್ಣದ ಓಕುಳಿ | ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ, ಕೆ.ಆರ್. ಬಡಾವಣೆ, ತಿಪಟೂರು | ೧೯೮೭ |
| ೫. ಭಾರತವೆಲ್ಲಕೆ ಬಾವುಟವೊಂದೇ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ-೭ | ೧೯೯೧ |

**ಮಕ್ಕಳ ನಾಟಕ**

| | | |
|---|---|---|
| ೧. ನ್ಯಾಯ ನಿರ್ಣಯ | ಭಾರತಿ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೬ |

**ಮಕ್ಕಳ ಪ್ರವಾಸ ಸಾಹಿತ್ಯ**

೧. ಮಕ್ಕಳ ಲೋಕ ಸಂಚಾರ

**ಜೀವನ ಚರಿತ್ರೆಗಳು**

| | | |
|---|---|---|
| ೧. ಶರಣ ಚರಿತಾಮೃತ | ವಯಸ್ಕರ ಶಿಕ್ಷಣ ಸಮಿತಿ, ಮೈಸೂರು | ೧೯೬೪ |
| ೨. ಸಿದ್ಧರಾಮ | ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೬ | ೧೯೭೪ |
| ೩. ಬಸವಣ್ಣನವರ ಜೀವನ ಹಾಗೂ ಸಂದೇಶ | ಪ್ರಸರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ೪. ನಜೀರ್ ಅಕಬರಾಬಾದಿ | ಸಾಹಿತ್ಯ ಅಕಾಡೆಮಿ, ನವದೆಹಲಿ | ೧೯೭೮ |
| ೫. ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |

| | | |
|---|---|---|
| ೬. ಮಿರ್ಜಾ ಗಾಲಿಬ್ | ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯ | ೧೯೭೯ |
| ೭. ಮಹಾದೇವಿ | ಶ್ರೀ. ಸಿ.ಎಸ್. ಕಣವಿ, ನಿರ್ದೇಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೨ |
| ೮. ಅಲ್ಲಮ ಪ್ರಭು | ಬಸವ ಸಮಿತಿ, ಬೆಂಗಳೂರು-೧ | ೧೯೮೯ |

**ಸಂಪಾದಿತ ಕೃತಿಗಳು**

| | | |
|---|---|---|
| ೧. ಸುಬೋಧ ಸಾರ | | ೧೯೩೬, ೫೧ |
| ೨. ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೩. ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೪. ಪದ್ಯ ರತ್ನಾಕರ | | |
| ೫. ಮಹಾತ್ಮಾ ಕನಕದಾಸರ ಪ್ರಶಸ್ತಿ | ರಾಜ್ಯ ಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. ಶರಣ ಪ್ರಸಾದ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. ಸಿದ್ಧಗಂಗಾ ಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ | ೧೯೮೧ |
| ೮. ಮಣಿಹ | ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. ಬಸವದರ್ಶನ (ಹಿಂದಿ) | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |
| ೧೦. ಬಸವ ಮತ್ತು ದಲಿತೋದಯ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |



| | | |
|---|---|---|
| ೧೧. ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೪ |
| ೧೨. ಮಳೆಯರಾಜ ಚಾರಿತ್ರ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೯ |

**ಇತರ ಕೃತಿಗಳು :**

| | | |
|---|---|---|
| ೧. ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ | ೧೯೫೫ |
| ೨. ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ | ೧೯೮೨ |
| ೩. ಚಿಂತನ ಲಹರಿ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ-೫ | ೧೯೮೯ |
| ೪. ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | |

**ಆಯ್ದ ಕವನಗಳು : ಅನುವಾದಗಳು**

| | | |
|---|---|---|
| ೧. ನಜೀರ್ ಅಕಬರಾಬಾದಿ | | |
| ೨. ಒಂದು ಊರಿನ ಕತೆ | | |
| ೧. ಕಾವ್ಯಾನಂದರ ಆಯ್ದ ಕವನಗಳು | ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು | ೧೯೮೨ |
| ೨. ಆಯ್ದ ಕವನಗಳು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು) | ೧೯೮೨ |
| ೩. ಸಮಗ್ರ ಕಾವ್ಯ | ಶ್ರೀಗಿರಿ ಪ್ರಕಾಶನ | ೨೦೦೮ |
| ೪. ಸಮಗ್ರ ವಚನ | ಶ್ರೀಗಿರಿ ಪ್ರಕಾಶನ | ೨೦೦೯ |
| ೫. ಸಮಗ್ರ ನಾಟಕಗಳು | ಶ್ರೀಗಿರಿ ಪ್ರಕಾಶನ | ೨೦೧೦ |
| ೬. ಸಮಗ್ರ ಮಕ್ಕಳ ಸಾಹಿತ್ಯ | ಶ್ರೀಗಿರಿ ಪ್ರಕಾಶನ | ೨೦೧೬ |

**

# ೪. ಡಾ.ಸಿದ್ಧಯ್ಯ ಪುರಾಣಿಕರ ಮತ್ತು ಅವರ ಕೃತಿಗಳ ಬಗ್ಗೆ ಬಂದಿರುವ ಗ್ರಂಥಗಳು

| ಲೇಖಕ/ಸಂಪಾದಕ ೧ | ಕೃತಿ ೨ | ಪ್ರಕಾಶನ ೩ | ವರ್ಷ ೪ |
|---|---|---|---|
| ಸತ್ಯಾನಂದ, ಮೇಘಮಿತ್ರ | "ಕಾವ್ಯಶ್ರೀ ಕಾವ್ಯಾನಂದ" | ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ, ವಿಜಾಪೂರ | ೧೯೬೯ |
| ಚಿವಟೆ.ಬಿ.ಟಿ. | "ಐವತ್ತು ತುಂಬಿದ ಕಾವ್ಯಾನಂದ," ವಿಶೇಷ ಸಂಚಿಕೆ, | ಜೀವನ ವಿಕಾಸ ಮಾಸ ಪತ್ರಿಕೆ ಕಲಬುರ್ಗಿ | ೧೯೭೩ |
| ಮಿರ್ಜಿ ಅಣ್ಣಾರಾಯ ಕೃಷ್ಣ ಕೊಲ್ಹಾರ ಕುಲಕರ್ಣಿ | "ಕಾವ್ಯಾನಂದ" | ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಶೇಡಬಾಳ | ೧೯೭೩ |
| ದೇ.ಜ.ಗೌ | "ವಚನೋದ್ಯಾನ | "ಸಿದ್ಧಯ್ಯ ಪುರಾಣಿಕರ ದರ್ಶನ" ಸನ್ಮಾನ ಸಮಿತಿ, ಮೈಸೂರು-೫ | ೧೯೮೦ |
| ಮರುಳಯ್ಯ ಸಾ.ಶಿ. | "ಕಾವ್ಯಾನಂದ" | ಡಾ.ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ ಬೆಂಗಳೂರು-೧೮ | ೧೯೮೧ |
| ಮಹಾದೇವಯ್ಯ ಟಿ.ಆರ್. | "ಸಹೃದಯ" | ಡಾ.ಸಿದ್ಧಯ್ಯ ಪುರಾಣಿಕರ ಸಂಸ್ಮರಣ ಸಂಚಿಕೆ ಅಭಿನಂದನ ಸಮಿತಿ | ೧೯೮೧ |



| | | | |
|---|---|---|---|
| ಕಪಾಳೆ ಚಂದ್ರಶೇಖರ | "ವಚನೋದ್ಯಾನ" (ಮರಾಠಿಯಲ್ಲಿ) | ಶ್ರೀ ವಿದ್ಯಾಚಂದ್ರ ಕೋಠಾರಿ ವಿದ್ಯಾವಿನಯ ಪ್ರತಿಷ್ಠಾನ, ಬ್ರಹ್ಮಪೂರ ರೋಡ್, ಗುಲಬರ್ಗಾ-೨ | ೧೯೮೩ |
| ಅರ್ಕಸಾಲಿ ವೃಷಭೇಂದ್ರ | "ಕಾವ್ಯಾನಂದರ ಕಾವ್ಯ" | ಸಂಕ್ರಮಣ ಪ್ರಕಾಶನ, ಧಾರವಾಡ | ೧೯೮೭ |
| ಹೊನ್ನಾವರ ಮಂಜುನಾಥ | ಡಾ.ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) | ಮಾತೃ ಪ್ರಕಾಶನ, ನಂ.೧೨೦, ಬೆಂಗಳೂರು | ೧೯೮೭, ೮೮ |
| ಕತ್ನಳ್ಳಿ ನೀಲಮ್ಮ | "ವಚನೋದ್ಯಾನ" | ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೯೧ |
| ವಿವಿಧಕವಿಗಳು | 'ಕಾಯಕಯೋಗಿ' | ಲೇಖಕರಸಂಘ, ಬೆಳಗಾವಿ | |
| ಡಾ. ಎನ್.ಬಿ. ಬುಳ್ಳಾ | "ಕಾವ್ಯಾನಂದ" | ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ | ೧೯೯೪ |
| ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ | "ಸಿದ್ಧಯ್ಯ ಪುರಾಣಿಕರು" | ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ | ೧೯೯೫ |
| ಡಾ.ಎನ್.ಬಿ. ಬುಳ್ಳಾ | ಡಾ.ಸಿದ್ಧಯ್ಯ ಪುರಾಣಿಕರ ಕೃತಿಗಳು | ಜ್ಯೋತಿಶ್ರೀ ಪ್ರಕಾಶನ ಗುಲಬರ್ಗಾ | ೧೯೯೯ |
| ಡಾ.ಶ್ರೀಮತಿ ಎನ್.ಬಿ.ಬುಳ್ಳಾ | ಡಾ.ಸಿದ್ಧಯ್ಯ ಪುರಾಣಿಕ (ಜೀವನ ಚರಿತ್ರೆ) ಬಿ.ಕಾಂ. ಭಾಗ-೦೧ ಪಠ್ಯ | ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ | ೨೦೦೦ |
| ಡಾ.ನಾಗಾಬಾಯಿ ಬಿ.ಬುಳ್ಳಾ | ಡಾ.ಸಿದ್ಧಯ್ಯ ಪುರಾಣಿಕ | ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ವಿಭಾಗ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ. | ೨೦೦೬ |

## ೫. ಬಿಲ್ವಾರ ಪ್ರಶಸ್ತಿ ಪತ್ರ

भारतीय भाषा परिषद

द्वारा

एन. ई. जी. पुरस्कार-१९८०

१९७७-७८ में प्रकाशित कन्नड़ की

श्रेष्ठ साहित्यिक कृति

'वचनोद्यान'

पर

श्री सिद्धैया पुराणिक

को

सादर प्रदत्त।

२६, दिसम्बर, १९८०